ಮಂಗಳವಾರ, ನವೆಂಬರ್ 9, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 310 | ಪುಟ 12

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಬೇರೆಯವರ ಭಯದ ಕಥೆಗಳೇ ನಮ್ಮ ತಲೆಯಲ್ಲಿ ಬೆಳೆದು ಹೆಮ್ಮರವಾಗುತ್ತವೆ. ಈ ಹೊತ್ತಿನಲ್ಲಿ ನಾವೂ ಆತಂಕಕ್ಕೆ ಒಳಗಾದಾಗ ಮೆದುಳು ಹೇಳಿದ್ದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲ.



ಆಳ-ಅಗಲ ಮರಳು ಗಣಿಗಾರಿಕೆಗೆ ನೀತಿಯ ಅಂಕುಶ

‘ರಫೇಲ್: ಮಧ್ಯವರ್ತಿಗೆ ಲಂಚ’ 10

ನೇಮಕ, ಮುಂಬಡ್ತಿಗೆ ಹುದ್ದೆ ಆಧಾರಿತ ನೀತಿ 5

ಸೆನ್ಸೆಕ್ಸ್	ನಿಫ್ಟಿ	₹/$
60,545 ▲	18,068 ▲	74.03 ▲

ಆರೋಪಿ ರಕ್ಷಣೆಗೆ ಸಾಕ್ಷ್ಯ ಸಂಗ್ರಹ: ಸುಪ್ರೀಂ ಕೋರ್ಟ್

ಲಖಿಂಪುರ–ಖೇರಿ ಪ್ರಕರಣ: ಸರ್ಕಾರದ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಲಖಿಂಪುರ-ಖೇರಿ ಪ್ರಕರಣದ ತನಿಖೆಯು ಸಮರ್ಪಕವಾಗಿಲ್ಲ. ಒಬ್ಬ ಆರೋಪಿಯನ್ನು ರಕ್ಷಿಸುವ ಉದ್ದೇಶದಿಂದಲೇ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ ಎಂದು ತೋರುತ್ತಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ. ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಮಗ, ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಅವರನ್ನು ಉಲ್ಲೇಖಿಸಿ ಕೋರ್ಟ್ ಹೀಗೆ ಹೇಳಿದೆ.



ಎಸ್‌ಯುವಿ ಹರಿಸಿ ನಾಲ್ವರು ರೈತರ ಹತ್ಯೆ ಮತ್ತು ನಂತರದ ಹಿಂಸಾಚಾರದಲ್ಲಿ ನಾಲ್ವರ ಹತ್ಯೆ ಪ್ರಕರಣವು ಉತ್ತರ ಪ್ರದೇಶದ ಲಖಿಂಪುರ-ಖೇರಿಯಲ್ಲಿ ಅಕ್ಟೋಬರ್ 3ರಂದು ನಡೆದಿತ್ತು. ಆಶಿಶ್ ಅವರೇ ರೈತರ ಮೇಲೆ ಎಸ್‌ವಿಯು ಹರಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ಎನ್. ವಿ. ರಮಣ, ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು ತನಿಖೆಯ ಗತಿಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಉತ್ತರ ಪ್ರದೇಶ ಸರ್ಕಾರ ಸಲ್ಲಿಸಿದ್ದ ಸ್ಥಿತಿಗತಿ ವರದಿಯೂ ಪೀಠದ ಅತೃಪ್ತಿಯನ್ನು ಹೆಚ್ಚಿಸಿತು.

10ನೇ ಪುಟ ನೋಡಿ

‘ಹತ್ಯೆ ಆರೋಪಿಗಳ ಜತೆ ಸರ್ಕಾರ’



ನವದೆಹಲಿ (ಪಿಟಿಐ): ಲಖಿಂಪುರ ಖೇರಿ ಪ್ರಕರಣದಲ್ಲಿ ನ್ಯಾಯ ಸಿಗಬೇಕಿದ್ದರೆ ಸ್ವತಂತ್ರ ತನಿಖೆ ಅಗತ್ಯ ಎಂಬುದು ಸುಪ್ರೀಂ ಕೋರ್ಟ್ ಅಭಿಪ್ರಾಯದಿಂದ ಸ್ಪಷ್ಟವಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

‘ರೈತರ ಹತ್ಯೆ ಮಾಡಿದವರ ಜತೆಗೆ ಉತ್ತರ ಪ್ರದೇಶ ಸರ್ಕಾರ ನಿಂತಿದೆ ಎಂಬುದು ಈಗ ಸ್ಪಷ್ಟವಾಗಿದೆ. ರೈತರ ಹತ್ಯೆ ಪ್ರಕರಣದ ಪ್ರಮುಖ ಆರೋಪಿಯ ತಂದೆಗೆ (ಅಜಯ್ ಮಿಶ್ರಾ, ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ) ನರೇಂದ್ರ ಮೋದಿ ಅವರ ರಕ್ಷಣೆ ಇದೆ’ ಎಂದು ಅವರು ಆರೋಪಿಸಿದ್ದಾರೆ.

ಹೊಸ ಮರಳು ನೀತಿ ಜಾರಿ • ರೈತರಿಗೆ, ಬಡವರಿಗೆ ರಿಯಾಯಿತಿ ದರ

ಅಗ್ಗದ ದರದಲ್ಲಿ ಮರಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನದಿ, ತೊರೆ, ಹಳ್ಳ, ಕೆರೆ, ಜಲಾಶಯಗಳ ಪಾತ್ರಗಳಲ್ಲಿ ಮರಳು ಗಣಿಗಾರಿಕೆ ನಡೆಸಿ, ಅಗ್ಗದ ದರದಲ್ಲಿ ಗ್ರಾಹಕರಿಗೆ ಮರಳು ಪೂರೈಕೆ ಮಾಡುವ ಹೊಸ ಮರಳು ನೀತಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸೋಮವಾರ ನಡೆದ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, ಗ್ರಾಮೀಣ ವಸತಿ ಯೋಜನೆಗಳಿಗೆ ಮತ್ತು ಗ್ರಾಮೀಣ ಜನರು ಮನೆ ಕಟ್ಟಿಕೊಳ್ಳಲು ರಿಯಾಯ್ತಿ ದರದಲ್ಲಿ ಮರಳು ಪೂರೈಕೆ ಮಾಡಲು ನೀತಿಯಲ್ಲಿ ಅನುಮತಿ ನೀಡಲಾಗಿದೆ ಎಂದು ತಿಳಿಸಿದರು.

ನದಿಯಲ್ಲಿ ಮುಳುಗಿ ಮರಳು ತೆಗೆಯುವ ಪದ್ಧತಿ ದಕ್ಷಿಣ ಕನ್ನಡದಲ್ಲಿ ಇತ್ತು. ಅದಕ್ಕೆ ಅವಕಾಶ ನೀಡಲಾಗಿದೆ. ಆದರೆ, ಇದಕ್ಕೆ ಯಾವುದೇ ರೀತಿಯ ಯಂತ್ರಗಳನ್ನು ಬಳಸುವಂತಿಲ್ಲ. ಸ್ಥಳೀಯರು ತಮ್ಮ ಮನೆಗಳನ್ನು ಕಟ್ಟಿಕೊಳ್ಳಲು ಈ ರೀತಿಯಲ್ಲಿ ಮರಳು ತೆಗೆಯಬಹುದಾಗಿದೆ. ಪರಿಸರಕ್ಕೆ ಹಾನಿಯಾಗುವಂತೆ ಮರಳು ತೆಗೆಯುವುದಕ್ಕೆ ಅವಕಾಶವಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

ಪಾರದರ್ಶಕ ಟೆಂಡರ್‌ಗೆ ನ್ಯಾಯಮೂರ್ತಿ ಅಧ್ಯಕ್ಷತೆಯ ಸಮಿತಿ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ₹50 ಕೋಟಿಗೂ ಮೇಲ್ಪಟ್ಟ ಟೆಂಡರ್‌ಗಳು ಮತ್ತು ಅವುಗಳ ಅಂದಾಜುಗಳ ಪೂರ್ವ ಪರಿಶೀಲನೆ ನಡೆಸಿ ಒಪ್ಪಿಗೆ ನೀಡಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಧ್ಯಕ್ಷತೆಯಲ್ಲಿ ತಜ್ಞರನ್ನು ಒಳಗೊಂಡ ಸಮಿತಿಯನ್ನು ರಚಿಸಲು ಸರ್ಕಾರ ನಿರ್ಧರಿಸಿದೆ.

ಟೆಂಡರ್ ಪ್ರಕ್ರಿಯೆಯಲ್ಲಿ ಇನ್ನಷ್ಟು ಪಾರದರ್ಶಕತೆ ತರಲು ಮತ್ತು ಅಕ್ರಮಗಳನ್ನು ತಡೆಯುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ವಿವಿಧ ನಿರ್ಮಾಣ ಕಾಮಗಾರಿಗಳು, ಸರಕು ಮತ್ತು ಸೇವೆಗಳ ಸಂಗ್ರಹಣೆಯ ಟೆಂಡರ್ ಹಾಗೂ ಅಂದಾಜುಗಳನ್ನು ನ್ಯಾಯಮೂರ್ತಿ ಅಧ್ಯಕ್ಷತೆಯ ಸಮಿತಿಯೇ ಪರಿಶೀಲಿಸಿ ಅಂತಿಮಗೊಳಿಸುತ್ತದೆ. ಸಮಿತಿಯ ಒಪ್ಪಿಗೆಯ ಬಳಿಕ ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ಸಚಿವ ಮಾಧುಸ್ವಾಮಿ ತಿಳಿಸಿದರು.

‘ಕೆಲವು ಇಲಾಖೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೆಲವೇ ಮಂದಿ ಮಾತ್ರ ಟೆಂಡರ್‌ಗಳಲ್ಲಿ ಪಾಲ್ಗೊಳ್ಳುತ್ತಾರೆ. ಟೆಂಡರ್ ಮೊತ್ತವೂ ಉತ್ಪ್ರೇಕ್ಷಿತವಾಗಿರುತ್ತದೆ. ಇದನ್ನು ಸರಿಪಡಿಸಲು ಹೆಚ್ಚು ಜನ ಟೆಂಡರ್‌ಗಳಲ್ಲಿ ಭಾಗವಹಿಸುವಂತಾಗಬೇಕು. ಪೂರ್ವ ಅನುಭವ, ಸಾಮರ್ಥ್ಯ ಒರೆಗೆ ಹಚ್ಚಲು ಸಮಿತಿಗೆ ಸಾಧ್ಯವಾಗುತ್ತದೆ. ಸಮಿತಿ ಪ್ರತಿಯೊಂದು ಟೆಂಡರ್‌ನ ಪೂರ್ವ ಪರಿಶೀಲನೆಯನ್ನು 15 ದಿನಗಳಲ್ಲಿ ನಡೆಸಿ ವರದಿ ನೀಡಬೇಕು. ಕಾರ್ಯ ಒತ್ತಡ ಹೆಚ್ಚಾದರೆ, ಇನ್ನೊಂದು ತಜ್ಞರ ಸಮಿತಿಯನ್ನು ರಚಿಸಲೂ ಅವಕಾಶವಿದೆ ಎಂದರು.

ಇದಕ್ಕಾಗಿ ‘ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮ 2021’ ಕ್ಕೆ ಸಂಪುಟ ಅನುಮೋದನೆ ನೀಡಿದೆ. ಮರಳು ಗಣಿಗಾರಿಕೆ ಮಾಡಿ ಅದರ ಸಾಗಣೆಗಾಗಿ ಮೂರು ಹಂತಗಳನ್ನು ರೂಪಿಸಲಾಗಿದೆ. ಗ್ರಾಮ ಮಟ್ಟ, ನದಿ ಪಾತ್ರ ಮತ್ತು ಸಮುದ್ರ ತೀರ ಎಂದು ಮೂರು ಹಂತಗಳನ್ನು ನಿಗದಿಪಡಿಸಲಾಗಿದೆ. ಗ್ರಾಮ ಮಟ್ಟದಲ್ಲಿ ಪ್ರತಿ ಟನ್‌ಗೆ ₹300, ನದಿ ಸೇರುವ ಪಾತ್ರಗಳು ಮತ್ತು ಪಟ್ಟಣಗಳಿಗೆ ಟನ್‌ಗೆ ₹700 ದರ ನಿಗದಿ ಮಾಡಲಾಗಿದೆ ಎಂದರು.

ಗ್ರಾಮಪಂಚಾಯ್ತಿ ಮಟ್ಟದಲ್ಲಿ ಮರಳು ಶೇಖರಣೆ ಮಾಡಿ ಮಾರಾಟ ಮಾಡಲು ಅವಕಾಶವಿದೆ. ಜತೆಗೆ ಗ್ರಾಮ ಪಂಚಾಯಿತಿಗಳಿಗೆ ಜಿಲ್ಲಾ ಖನಿಜ ಟ್ರಸ್ಟ್‌ನಿಂದ ಶೇ 2 ರಷ್ಟು ನಿಧಿ ನೀಡಲು ಅವಕಾಶವನ್ನು ಕಲ್ಪಿಸಲಾಗಿದೆ. ಸರ್ಕಾರಕ್ಕೆ ಬರುವ ಶೇ 50 ರಷ್ಟು ರಾಯಲ್ಟಿಯಲ್ಲಿ ಶೇ 25 ಆಯಾ ಪಂಚಾಯಿತಿಗಳಿಗೆ ನೀಡಲಾಗುವುದು. ಸರ್ಕಾರದ ವಸತಿ ಯೋಜನೆಯೂ ಸೇರಿದಂತೆ ವಿವಿಧ ಯೋಜನೆಗಳು ಮತ್ತು ಬಡವರಿಗೆ ರಿಯಾಯ್ತಿ ದರದಲ್ಲಿ ಮರಳು ನೀಡುವ ಅಧಿಕಾರವನ್ನು ಆಯಾ ಗ್ರಾಮ ಪಂಚಾಯಿತಿಗಳಿಗೇ ನೀಡಲಾಗಿದೆ ಎಂದು ಹೇಳಿದರು.



ಸರ್ಕಾರ ಏಜೆನ್ಸಿಗಳಾದ ಎಚ್‌ಜಿಎಂಎಲ್ ಮತ್ತು ಕರ್ನಾಟಕ ರಾಜ್ಯ ಖನಿಜಗಳ ನಿಗಮ ಮರಳು ಗಣಿಗಾರಿಕೆ ಮಾಡಿ ಮಾರಾಟ ಮಾಡಲಿವೆ

ಜೆ.ಸಿ.ಮಾಧುಸ್ವಾಮಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

5ನೇ ಪುಟ ನೋಡಿ

ಹೋಟೆಲ್ ಆಹಾರ ದುಬಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗತ್ಯ ವಸ್ತುಗಳು ಹಾಗೂ ಎಲ್‌ಪಿಜಿ ದರಗಳ ಏರಿಕೆಯಿಂದಾಗಿ ರಾಜ್ಯದಾದ್ಯಂತ ಹೋಟೆಲ್‌ಗಳಲ್ಲಿ ಆಹಾರ ಹಾಗೂ ಕಾಫಿ-ಟೀ ದರ ಕನಿಷ್ಠ ಶೇ 5ರಿಂದ ಶೇ 10ರವರೆಗೆ ಏರಿಕೆಯಾಗಲಿದೆ.

ಬೆಂಗಳೂರಿನ ಕೆಲವು ಹೋಟೆಲ್‌ಗಳಲ್ಲಿ ಸೋಮವಾರದಿಂದಲೇ ದರ ಏರಿಕೆ ಮಾಡಲಾಗಿದೆ. ಹಲವು ಹೋಟೆಲ್‌ಗಳ ಮಾಲೀಕರು ಬುಧವಾರದಿಂದ ತಮ್ಮ ಹೋಟೆಲ್‌ಗಳಲ್ಲಿ ದರಗಳನ್ನು ಏರಿಸುವುದಾಗಿ ತಿಳಿಸಿದ್ದಾರೆ. ಕೆಲ ಹೋಟೆಲ್‌ನವರು ‘ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ ನೀಡುವುದಿಲ್ಲ. ಹಾಗಾಗಿ, ಸದ್ಯಕ್ಕೆ ದರ ಏರಿಕೆ ಮಾಡುವುದಿಲ್ಲ’ ಎಂದೂ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ.

‘ಅಗತ್ಯ ವಸ್ತುಗಳು ಮಾತ್ರವಲ್ಲದೆ, ಎಲ್‌ಪಿಜಿ ದರವನ್ನೂ ದಿಢೀರ್ ಏರಿಕೆ ಮಾಡಿರುವುದರಿಂದ ಹೋಟೆಲ್ ಉದ್ಯಮದ ಮೇಲೆ ಭಾರಿ ಹೊಡೆತ ಬಿದ್ದಿದೆ. ಕೋವಿಡ್‌ನಿಂದಾಗಿ ಹೋಟೆಲ್ ಉದ್ಯಮ ಈವರೆಗೆ ಚೇತರಿಸಿಕೊಂಡಿಲ್ಲ. ಜನರ ಸಂಕಷ್ಟ ಮನಗಂಡು ನಾವೂ ದರಗಳನ್ನು ಏರಿಸಿರಲಿಲ್ಲ. ಈಗಿನ ದುಬಾರಿ ಪರಿಸ್ಥಿತಿಯಲ್ಲಿ ದರ ಏರಿಕೆ ಅನಿವಾರ್ಯ’ ಎಂದು ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ ‘ಪ್ರಜಾವಾಣಿ’ಗೆ ತಿಳಿಸಿದರು.



ಸಾಂದರ್ಭಿಕ ಚಿತ್ರ

ದರ ಏರಿಕೆ ಎಷ್ಟು?

ಹಾಲು, ಕಾಫಿ, ಟೀ	₹2
ದೋಸೆ, ಇಡ್ಲಿ, ವಡೆ, ಪೂರಿ, ರೈಸ್‌ಬಾತ್, ಚಿತ್ರಾನ್ನ, ಪಲಾವ್, ಚೌಚೌಬಾತ್, ಚಾಟ್ಸ್	₹5
ಊಟ, ದಕ್ಷಿಣ ಮತ್ತು ಉತ್ತರ ಭಾರತ ಶೈಲಿಯ ಊಟ	₹10

ಇನ್ನೊಂದು ಸುದ್ದಿ 4

ಆಟೊ ಪ್ರಯಾಣ ದರ ₹ 5 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಆಟೊ ಪ್ರಯಾಣ ದರವನ್ನು ಹಾಲಿ ದರಕ್ಕಿಂತ ₹ 5 ಹೆಚ್ಚಳ ಮಾಡಲಾಗಿದ್ದು, ಈ ಸಂಬಂಧ ಬೆಂಗಳೂರು ನಗರ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಅಧಿಸೂಚನೆ ಹೊರಡಿಸಿದೆ.

ಸದ್ಯ 1.9 ಕಿ.ಮೀ ಸಂಚಾರಕ್ಕೆ ₹ 25 ದರವಿತ್ತು. ಇದೀಗ 2 ಕಿ.ಮೀ ಸಂಚಾರಕ್ಕೆ ₹ 30 ನಿಗದಿ ಮಾಡಲಾಗಿದೆ. ಡಿಸೆಂಬರ್ 1ರಿಂದ ಪರಿಷ್ಕೃತ ದರ ಜಾರಿಗೆ ಬರಲಿದೆ.

4ನೇ ಪುಟ ನೋಡಿ

ಆಸ್ಪತ್ರೆಯಲ್ಲಿ ಬೆಂಕಿ: 3 ಮಕ್ಕಳ ಸಾವು

ಭೋಪಾಲ್: ಇಲ್ಲಿನ ಕಮಲಾ ನೆಹರೂ ಆಸ್ಪತ್ರೆಯ ಮಕ್ಕಳ ವಾರ್ಡ್‌ನಲ್ಲಿ ಸೋಮವಾರ ರಾತ್ರಿ ಬೆಂಕಿ ಅವಘಡ ಸಂಭವಿಸಿ ಮೂವರು ಮಕ್ಕಳು ಮೃತಪಟ್ಟಿದ್ದಾರೆ.

ಅಗ್ನಿಶಾಮಕ ದಳದವರು ಸ್ಥಳಕ್ಕೆ ಧಾವಿಸಿದ್ದು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ ಎಂದು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಟ್ವೀಟ್ ಮಾಡಿದ್ದಾರೆ.

‘ಪದ್ಮ’ ಪ್ರಶಸ್ತಿ ಪ್ರದಾನ

ನವದೆಹಲಿ: ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹನೀಯರಿಗೆ ನೀಡಲಾಗುವ 2020ನೇ ಸಾಲಿನ ಅತ್ಯುನ್ನತ ನಾಗರಿಕ ಗೌರವವಾದ ‘ಪದ್ಮ’ ಪ್ರಶಸ್ತಿಗಳನ್ನು ಸೋಮವಾರ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಪ್ರದಾನ ಮಾಡಿದರು. 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮತದಾರರ ಕರಡು ಪಟ್ಟಿ ಪ್ರಕಟ

ಬೆಂಗಳೂರು: ನಗರದ 28 ವಿಧಾನಸಭಾ ಕ್ಷೇತ್ರಗಳ ಪರಿಷ್ಕೃತ ಮತದಾರರ ಪಟ್ಟಿಯ ಕರಡು ಪ್ರತಿಯನ್ನು ಬಿಬಿಎಂಪಿ ಪ್ರಕಟಿಸಿದೆ.

ಪಟ್ಟಿ ಪ್ರಕಟಿಸಿರುವ ಕುರಿತು ರಾಜಕೀಯ ಪಕ್ಷದ ಪ್ರತಿನಿಧಿಗಳ ಜತೆ ಸಭೆ ನಡೆಸಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಮತದಾರರ ಪಟ್ಟಿಯನ್ನು ಆಯಾ ಕ್ಷೇತ್ರಗಳ ನೋಂದಣಾಧಿಕಾರಿ ಕಚೇರಿ, ಸಹಾಯಕ ಮತದಾರರ ನೋಂದಣಾಧಿಕಾರಿ ಕಚೇರಿ, ವಾರ್ಡ್ ಕಚೇರಿಗಳಲ್ಲಿ ಪ್ರಕಟಿಸಲಾಗಿದೆ. ಸಾರ್ವಜನಿಕರು ಪಟ್ಟಿ ಪರಿಶೀಲಿಸಲು ಅವಕಾಶ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

ಹೆಸರು ಕೈಬಿಟ್ಟಿದ್ದರೆ, ತಪ್ಪಾಗಿದ್ದರೆ ಸರಿಪಡಿಸಲಾಗುವುದು. ಆಕ್ಷೇಪಣೆ ಸಲ್ಲಿಸಲು ಡಿ.8ರ ತನಕ ಅವಕಾಶ ಕಲ್ಪಿಸಲಾಗಿದೆ ಎಂದು ಪಾಲಿಕೆ ವಿಶೇಷ ಆಯುಕ್ತ (ಆಡಳಿತ) ಕೆ.ಎ. ದಯಾನಂದ ತಿಳಿಸಿದರು.

2021ರ ಜ.1ಕ್ಕೆ 93,76,004 ಇದ್ದ ಮತದಾರರ ಸಂಖ್ಯೆ ನ.8ಕ್ಕೆ 94,39,416ಕ್ಕೆ ಏರಿಕೆಯಾಗಿದೆ. 2022ರ ಜ. 13ರಂದು ಮತದಾರರ ಅಂತಿಮ ಮಟ್ಟಿ ಪ್ರಕಟಿಸಲಾಗುವುದು ಎಂದು ವಿವರಿಸಿದರು.

ಬಿಬಿಎಂಪಿ: ಶುಲ್ಕ ಸಂಗ್ರಹಕ್ಕೆ ಕಾನೂನು

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಬಿಬಿಎಂಪಿ ನಕ್ಷೆ ಮಂಜೂರಾತಿ, ಸ್ವಾಧೀನ ಪತ್ರ ಮತ್ತು ಆರಂಭಿಕ ಪ್ರಮಾಣ ಪತ್ರಕ್ಕೆ ಶುಲ್ಕ ಪಡೆಯುವ ಸಂಬಂಧ ಪ್ರತ್ಯೇಕ ಕಾನೂನು ರಚಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಬಿಬಿಎಂಪಿಯ ಬೈಲಾದಲ್ಲಿ ಶುಲ್ಕ ಪಡೆಯುವುದಕ್ಕೆ ಅವಕಾಶ ಕಲ್ಪಿಸಿದೆ. ಆದರೆ, ಸರ್ಕಾರ ಈವರೆಗೂ ಇದಕ್ಕೆ ಪೂರಕವಾಗಿ ಕಾನೂನು ರಚಿಸಿರಲಿಲ್ಲ. ಸೂಕ್ತ ಕಾನೂನು ರೂಪಿಸಲು ಹೈಕೋರ್ಟ್ ಸೂಚಿಸಿತ್ತು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾನೂನು ರಚಿಸದೇ ಸುಮಾರು ₹2,000 ಕೋಟಿ ಸಂಗ್ರಹಿಸಿದ್ದು, ಇದನ್ನು ವಾಪಸ್ ಮಾಡಬೇಕು ಎಂದು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿತ್ತು. ಇಷ್ಟು ದೊಡ್ಡ ಮೊತ್ತ ವಾಪಸ್ ಮಾಡುವುದನ್ನು ತಡೆಯಲು ಕಾನೂನು ರೂಪಿಸಲು ತೀರ್ಮಾನಿಸಲಾಗಿದೆ ಎಂದರು.

ಇಷ್ಟು ವರ್ಷಗಳಾದರೂ ಯಾವ ಕಾರಣಕ್ಕೆ ಕಾನೂನು ರೂಪಿಸಿಲ್ಲ ಎಂಬುದು ಗೊತ್ತಿಲ್ಲ. ಇದರಲ್ಲಿ ಅಧಿಕಾರಿಗಳ ಲೋಪವಿದೆ ಎಂದು ಹೇಳಲಾರೆ ಎಂದು ಮಾಧುಸ್ವಾಮಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.


ಶೇ 50 ಬಡ್ಡಿ ಮನ್ನಾ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಾಗರಿಕ ಸೌಲಭ್ಯ ನಿವೇಶನಗಳ ಗುತ್ತಿಗೆ ಮೊತ್ತವನ್ನು ಪಾವತಿಸದೇ ಬಾಕಿ ಉಳಿಸಿಕೊಂಡಿರುವ ವಿವಿಧ ಸಂಘ ಸಂಸ್ಥೆಗಳು ಸಂಪೂರ್ಣ ಬಾಕಿ ಮೊತ್ತವನ್ನು ಪಾವತಿಸಲು ಮುಂದೆ ಬಂದಲ್ಲಿ, ಅಂತಹ ಸಂಸ್ಥೆಗಳಿಗೆ ಬಡ್ಡಿ ಮೊತ್ತದ ಶೇ 50ರಷ್ಟು ಮನ್ನಾ ಮಾಡಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಯಿತು.

ದೇವಸ್ಥಾನ, ಶಿಕ್ಷಣ ಸಂಸ್ಥೆ, ಅನಾಥಾಶ್ರಮಗಳಿಗೆ ಮಾತ್ರ ಈ ಬಡ್ಡಿ ಮನ್ನಾ ಅನ್ವಯವಾಗುತ್ತದೆ ಎಂದೂ ಅವರು ಹೇಳಿದರು.

- ಬೆಂಗಳೂರು ದಕ್ಷಿಣ ತಾಲ್ಲೂಕಿನ ಆಗರ ಗ್ರಾಮದ ಸರ್ವೆ ಸಂಖ್ಯೆ 28 ರಲ್ಲಿ 0–21 ಗುಂಟೆ ಖರಾಬು ಜಮೀನನ್ನು ಶ್ರೀಸ್ವಾನಂದಾಶ್ರಮ ಬಾಲ ಗಣಪತಿ ಪ್ರತಿಷ್ಠಾನಕ್ಕೆ ಮಂಜೂರು ಮಾಡಲು ತೀರ್ಮಾನಿಸಲಾಯಿತು.
- ಬೆಂಗಳೂರು ನಗರ ಜಿಲ್ಲೆಯ ವಿವಿಧ ಗ್ರಾಮಗಳ ವಿವಿಧ ಸರ್ವೆ ಸಂಖ್ಯೆಗಳಲ್ಲಿ ಒಟ್ಟು 69.07 ಎಕರೆ ಸರ್ಕಾರಿ ಗೋಮಾಳ ಮತ್ತು ಸರ್ಕಾರಿ ಖರಾಬು ಜಮೀನುಗಳನ್ನು ಬೆಂಗಳೂರು ಒಂದು ಲಕ್ಷ ಬಹುಮಹಡಿ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜೀವ್‌ಗಾಂಧಿ ವಸತಿ ನಿಗಮಕ್ಕೆ ಮಂಜೂರು ಮಾಡಲಾಗಿದೆ.

ಮೂವರು ನೂತನ ನ್ಯಾಯಮೂರ್ತಿಗಳ ಪ್ರಮಾಣವಚನ ಸ್ವೀಕಾರ

ಪ್ರಜಾವಾಣಿ ವಾರ್ತೆ



ನೂತನ ನ್ಯಾಯಮೂರ್ತಿ ಎಸ್‌.ರಾಚಯ್ಯ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನ್ಯಾ. ಅನಂತ ರಾಮನಾಥ ಹೆಗಡೆ, ರಾಜ್ಯಪಾಲ ಥಾವರಚಂದ್ ಗೆಹಲೋತ್, ನ್ಯಾ. ಕೆ.ಎಸ್. ಹೇಮಲೇಖಾ ಹಾಗೂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವಸ್ಥಿ ಚಿತ್ರದಲ್ಲಿದ್ದಾರೆ.

ಬೆಂಗಳೂರು: ರಾಜ್ಯ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಅನಂತ ರಾಮನಾಥ ಹೆಗಡೆ, ಎಸ್.ರಾಚಯ್ಯ ಹಾಗೂ ಕೆ.ಎಸ್. ಹೇಮಲೇಖಾ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ಬೆಳಗ್ಗೆ ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ನೂತನ ನ್ಯಾಯಮೂರ್ತಿಗಳಿಗೆ ಪ್ರಮಾಣ ವಚನ ಬೋಧಿಸಿದರು.

ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಗಳ ಮಂಜೂರಾತಿ ಸಂಖ್ಯೆ 62. ಹಾಲಿ 43 ನ್ಯಾಯಮೂರ್ತಿಗಳು ಕಾರ್ಯ ನಿರ್ವಹಿಸುತ್ತಿದ್ದು, ನೂತನ ಹೆಚ್ಚುವರಿ ನ್ಯಾಯಮೂರ್ತಿಗಳ ಸೇರ್ಪಡೆಯಿಂದಾಗಿ ಈ ಸಂಖ್ಯೆ ಈಗ 46ಕ್ಕೆ ಏರಿದೆ.

ಮುಂದಿನ ತಿಂಗಳ, ಡಿಸೆಂಬರ್ 3ಕ್ಕೆ ನ್ಯಾಯಮೂರ್ತಿ ಎನ್.ಕೆ. ಸುಧೀಂದ್ರರಾವ್ ನಿವೃತ್ತರಾಗಲಿದ್ದಾರೆ.

ಸಮಾರಂಭದಲ್ಲಿ ಹೈಕೋರ್ಟ್ ನ್ಯಾಯಮೂರ್ತಿಗಳು, ಹಿರಿಯ ವಕೀಲರು, ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ಎಲ್.ಶ್ರೀನಿವಾಸ್ ಬಾಬು, ಸದಸ್ಯರು, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ.ರಂಗನಾಥ್, ಪ್ರಧಾನ ಕಾರ್ಯದರ್ಶಿ ಎ.ಎನ್. ಗಂಗಾಧರಯ್ಯ ಖಜಾಂಚಿ ಶಿವಮೂರ್ತಿ ಹಾಗೂ ವಕೀಲ ವೃಂದದ ಗಣ್ಯರು ಹಾಜರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ನ.9ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ಪಟ್ಟಣಗೆರೆ, ದುಬಾಸಿಪಾಳ್ಯ, ದೊಡ್ಡಬಸ್ತಿ ಮುಖ್ಯರಸ್ತೆ, ಉಪಕಾರ ಬಡಾವಣೆ, ಅಂಬೇಡ್ಕರ್ ನಗರ, ಉಲ್ಲಾಳ ಬಸ್ ನಿಲ್ದಾಣ, ಗಿರಿನಗರ, ವಿಜಯನಗರ, ಮಾರೇನಹಳ್ಳಿ, ಗೋವಿಂದರಾಜ ನಗರ, ಚಂದ್ರಾಬಡಾವಣೆ, ಕಾಮಾಕ್ಷಿಪಾಳ್ಯ, ಸಂಜೀವಿನಿ ನಗರ, ಹೆಗ್ಗನಹಳ್ಳಿ, ಸುಂಕದಕಟ್ಟೆ, ಪಾಪರೆಡ್ಡಿ ಪಾಳ್ಯ, ಪಂಚಶೀಲ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಮಿಂಟೊ ಆಸ್ಪತ್ರೆಗೆ 125 ವರ್ಷ



ಬೆಂಗಳೂರು: ನೇತ್ರ ಚಿಕಿತ್ಸೆಯಲ್ಲಿ ಖ್ಯಾತಿ ಪಡೆದಿರುವ ಮಿಂಟೊ ಆಸ್ಪತ್ರೆ ಈಗ 125ನೇ ವರ್ಷದ ಸಂಭ್ರಮದಲ್ಲಿದೆ.

1896ರಲ್ಲಿ ಚಿಕ್ಕದಾಗಿ ಆರಂಭವಾದ ಈ ಆಸ್ಪತ್ರೆಯಲ್ಲಿ ಇಂದು, ರಾಜ್ಯ ಮತ್ತು ಹೊರರಾಜ್ಯಗಳ ಪ್ರತಿ ವರ್ಷ ಒಂದು ಲಕ್ಷಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಪ್ರತಿದಿನ 500ರಿಂದ 800 ಹೊರರೋಗಿಗಳ ಪರೀಕ್ಷೆ ನಡೆಸಲಾಗುತ್ತಿದೆ. ಪ್ರತಿ ವರ್ಷ ಸುಮಾರು 10 ಸಾವಿರ ಶಸ್ತ್ರಚಿಕಿತ್ಸೆಗಳನ್ನು ಸಂಸ್ಥೆಯು ನಡೆಸುತ್ತಿದೆ.

ಮಂಗಳವಾರ ಬೆಳಿಗ್ಗೆ 10.30ಕ್ಕೆ 125ನೇ ವರ್ಷದ ಸಂಭ್ರಮಾಚರಣೆ ನಡೆಯಲಿದೆ. 125 ವರ್ಷದ ಅಂಗವಾಗಿ 125 ಸಸಿಗಳನ್ನು ನೆಡುವ ಮೂಲಕ ಪರಿಸರ ರಕ್ಷಣೆಯ ಸಂದೇಶವನ್ನು ಸಾರುವ ಪ್ರಯತ್ನ ಮಾಡಲಾಗುತ್ತಿದೆ.

ಸಾಲುಮರದ ತಿಮ್ಮಕ್ಕನಿಗೆ 'ಜೀವ ಸಮೃದ್ಧಿ' ಪ್ರಶಸ್ತಿ


ಬೆಂಗಳೂರು: ಕೇರಳದ ಸಮತಾ ಸಂಸ್ಥೆಯು 2020ನೇ ಸಾಲಿನ ಜೀವ ಸಮೃದ್ಧಿ ಪ್ರಶಸ್ತಿಗೆ ಸಾಲು ಮರದ ತಿಮ್ಮಕ್ಕ ಅವರನ್ನು ಆಯ್ಕೆ ಮಾಡಿದೆ.

ಈ ಪುರಸ್ಕಾರವನ್ನು ಸಮುದಾಯ ಕರ್ನಾಟಕ ಹಾಗೂ ಪುರೋಗಾಮಿ ಕಲಾ ಸಾಹಿತ್ಯ ಸಂಘದ (ಪುಕಸ) ಸಹಯೋಗದಲ್ಲಿ ನೀಡಲಾಗುತ್ತಿದೆ.

ಖ್ಯಾತ ಪರಿಸರ ಕಾರ್ಯಕರ್ತೆ ಕೀನ್ಯಾದ ವಾಂಗಾರಿ ಮಾತಾಯಿಯವರ ಸ್ಮರಣೆಯಲ್ಲಿ ಈ ಪ್ರಶಸ್ತಿಯನ್ನು ಸಮತಾ ನೀಡುತ್ತಿದೆ. ನ. 10ರಂದು ಬೆಳಿಗ್ಗೆ 11ಕ್ಕೆ ತಿಮ್ಮಕ್ಕ ಅವರ ಮನೆಯಲ್ಲಿಯೇ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪುಕಸದ ಆರ್.ವಿ. ಆಚಾರಿ ತಿಳಿಸಿದ್ದಾರೆ.

ನಿಧನ ವಾರ್ತೆ

ಡಾ. ಜಿ. ತಿಮ್ಮಯ್ಯ



ಬೆಂಗಳೂರು: ಖ್ಯಾತ ಆರ್ಥಿಕ ತಜ್ಞ ಡಾ.ಜಿ.ತಿಮ್ಮಯ್ಯ (84) ಅವರು ನಗರದಲ್ಲಿ ಶನಿವಾರ ನಿಧನರಾದರು.

ತಿಮ್ಮಯ್ಯ ಅವರು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ (ಐಎಸ್ಇಸಿ) ಅಧ್ಯಕ್ಷ ಮತ್ತು ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಜತೆಗೆ, ಕರ್ನಾಟಕ ಹಣಕಾಸು ಆಯೋಗದ ಅಧ್ಯಕ್ಷ ಮತ್ತು ರಾಜ್ಯ ಯೋಜನಾ ಮಂಡಳಿ ಮತ್ತು ರಾಷ್ಟ್ರೀಯ ಯೋಜನಾ ಆಯೋಗದ ಸದಸ್ಯರಾಗಿದ್ದರು.

ಬಾಂಬೆ, ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಬೋಧನೆ ಮಾಡಿದ್ದ ಅವರು, 1987ರಿಂದ 1994 ರವರೆಗೆ ಕರ್ನಾಟಕ ಸರ್ಕಾರದ ಆರ್ಥಿಕ ಸಲಹೆಗಾರರಾಗಿದ್ದರು.

ಬಾಂಬೆ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದಿದ್ದ ಡಾ.ಜಿ. ತಿಮ್ಮಯ್ಯ ಅವರು, 16 ಪುಸ್ತಕಗಳು ಮತ್ತು ಹಲವಾರು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು 2012ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ನೀಡಿತ್ತು.

ತಿಮ್ಮಯ್ಯ ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ.

ರಾತ್ರಿ ಕರ್ಫ್ಯೂ ತೆರವು: ಜನರ ಅಗತ್ಯಕ್ಕೆ ತಕ್ಕಂತೆ ಬದಲಾಗಬೇಕಿದೆ ಸಾರಿಗೆ ವ್ಯವಸ್ಥೆ

ನೈಟ್‌ಲೈಫ್ ಮತ್ತೆ ಗರಿಗೆದರುವುದೇ?

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕೋವಿಡ್ ತಡೆಗಟ್ಟಲು ಹೇರಿದ್ದ ರಾತ್ರಿ ಕರ್ಫ್ಯೂ ಒಂದೂವರೆ ವರ್ಷದ ಬಳಿಕ ತೆರವಾಗಿದೆ. ಇದರಿಂದ ಬೆಂಗಳೂರಿನ ರಾತ್ರಿ ಜಗತ್ತು (ನೈಟ್‌ಲೈಫ್) ಮತ್ತೆ ತೆರೆದುಕೊಳ್ಳುವ ತವಕದಲ್ಲಿದೆ.

ಕೋವಿಡ್ ಪೂರ್ವದಲ್ಲಿ ದಿನದ 24 ಗಂಟೆಯೂ ಝುಗಮಗಿಸುತ್ತಿದ್ದ ಬೆಂಗಳೂರು ಕಳೆದ ಒಂದೂವರೆ ವರ್ಷದಲ್ಲಿ ಕೆಲ ತಿಂಗಳು ಸಂಪೂರ್ಣ ಸ್ತಬ್ಧವಾಗಿದ್ದರೆ, ಮತ್ತೆ ಕೆಲ ತಿಂಗಳ ಕಾಲ ರಾತ್ರಿ ಕರ್ಫ್ಯೂನಲ್ಲೇ ಸಾಗಿತ್ತು. ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾದ ಬಳಿಕ ಈಗ ರಾತ್ರಿ ಕರ್ಫ್ಯೂ ಕೂಡ ತೆರವಾಗಿದೆ. ಇದರ ಜೊತೆಗೆ ಬೆಂಗಳೂರಿನ ರಾತ್ರಿ ಜೀವನ ಮತ್ತೆ ಕಳೆಗಟ್ಟುವ ದಿನಗಳಿಗೆ ಎದುರಾಗಿದೆ.

ಬೆಂಗಳೂರಿನಲ್ಲಿ ಐ.ಟಿ ಕಂಪನಿಗಳು ಹೆಚ್ಚಾಗುತ್ತಾ ಹೋದಂತೆ ಬೆಂಗಳೂರಿನ ನೈಟ್‌ಲೈಫ್ ಕೂಡ ವಿಸ್ತರಣೆಯಾಗುತ್ತ ಹೋಯಿತು. ಕೋವಿಡ್ ಪೂರ್ವದಲ್ಲಿ 1.30ರ ತನಕ ನೈಟ್‌ಲೈಫ್ ವಿಸ್ತರಣೆಯಾಗಿತ್ತು. ಅಂಗಡಿ ಮುಂಗಟ್ಟು, ಹೋಟೆಲ್, ಚಿತ್ರಮಂದಿರ, ಮಲ್ಟಿಪ್ಲೆಕ್ಸ್, ಮಳಿಗೆಗಳು, ದಿನಸಿ ಅಂಗಡಿಗಳನ್ನೂ ವಾರದ ಏಳೂ ದಿನ, 24 ಗಂಟೆಯೂ ಕಾರ್ಯನಿರ್ವಹಿಸಲು ಸರ್ಕಾರ ಅನುಮತಿ ನೀಡಿತ್ತು.

ಆದರೂ, ಬಡಾವಣೆಗಳಲ್ಲಿ ಎಂದಿನಂತೆ ಗರಿಷ್ಠ 11.30ರ ತನಕ ಮಾತ್ರ ಅಂಗಡಿಗಳು ಅದರಲ್ಲಿ ಮದ್ಯದ ಅಂಗಡಿಗಳು ತೆರೆದಿರುತ್ತಿದ್ದವು. ಆದರೆ, ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಇಂದಿರಾನಗರ, ಯು.ಬಿ ಸಿಟಿ, ಎಚ್.ಎಸ್.ಆರ್. ಲೇಔಟ್, ಗಾಂಧಿನಗರದಲ್ಲಿನ ಹೋಟೆಲ್‌ಗಳು, ಬಾರ್, ಪಬ್‌ಗಳು, ಅದರಲ್ಲೂ ಡ್ಯಾನ್ಸ್ ಬಾರ್‌ಗಳು ಮಧ್ಯರಾತ್ರಿ ತನಕ ತೆರೆದಿರುತ್ತಿದ್ದವು. ಡ್ಯಾನ್ಸ್‌ಬಾರ್ ಮುಗಿಸಿಕೊಂಡು ಬರುವ ಗ್ರಾಹಕರಿಗೆ ಊಟ ಒದಗಿಸುವ ಕೆಲ ಹೋಟೆಲ್‌ಗಳು ಬೆಳಗಿನ ಜಾವ 2.30ರಿಂದ 3 ಗಂಟೆ ತನಕವೂ ತೆರೆದಿರುತ್ತಿದ್ದವು.

ಕೋವಿಡ್ ಮೊದಲನೇ ಲಾಕ್‌ಡೌನ್ (2020 ಮಾರ್ಚ್) ದಿನಗಳಲ್ಲಿ ಆರಂಭವಾದ ನಿರ್ಬಂಧಗಳ ಹೇರಿಕೆ, 2021ರ ನವೆಂಬರ್ ತನಕವೂ ಮುಂದುವರಿದೇ ಇತ್ತು. ನೈಟ್ ಕರ್ಫ್ಯೂ ತೆರವುಗೊಳಿಸುವ ಮೂಲಕ ಬಹುತೇಕ ಎಲ್ಲ ನಿರ್ಬಂಧಗಳನ್ನು ತೆರವುಗೊಳಿಸಿದಂತಾಗಿದೆ.

ಕೋವಿಡ್ ತಂದೊಡ್ಡಿದ ನಿರುದ್ಯೋಗ, ವೇತನ ಕಡಿತದಿಂದ ಜನರು ತತ್ತರಿಸಿ ಹೋಗಿದ್ದಾರೆ. ಈ ಸವಾಲಿನ ನಡುವೆ ರಾತ್ರಿ ಜಗತ್ತಿಗೆ ಜನ ಮತ್ತೆ ತೆರೆದುಕೊಳ್ಳುವರೇ ಎಂಬ ಪ್ರಶ್ನೆ ಕೂಡ ಎದುರಾಗಿದೆ. ರಾತ್ರಿ ಕರ್ಫ್ಯೂ ತೆರವುಗೊಳಿಸಿರುವ ಸರ್ಕಾರ, ಜನರ ಅಗತ್ಯಕ್ಕೆ ತಕ್ಕಂತೆ ಸಾರಿಗೆ ವ್ಯವಸ್ಥೆಯನ್ನೂ ಬಲಗೊಳಿಸಬೇಕಿದೆ ಎನ್ನುತ್ತಾರೆ ತಜ್ಞರು.

‘ಮೆಟ್ರೊ ರೈಲು ಮತ್ತು ಬಿಎಂಟಿಸಿ ಬಸ್‌ಗಳ ಸಂಚಾರ ಇಡೀ ರಾತ್ರಿ ಇಲ್ಲ. ಆಟೋ ರಿಕ್ಷಾ ಮತ್ತು ಟ್ಯಾಕ್ಸಿಗಳನ್ನೇ ಜನ ಆಶ್ರಯಿಸಬೇಕಿದೆ. ತೈಲ ಬೆಲೆ ಏರಿಕೆ ನೆಪದಲ್ಲಿ ಪ್ರಯಾಣ ದರವನ್ನು ಎಗ್ಗಿಲ್ಲದೆ ಏರಿಕೆ ಮಾಡಲಾಗಿದೆ. ರಾತ್ರಿ ವೇಳೆಯಂತೂ ಮನಬಂದಂತೆ ದರ ನಿಗದಿ ಮಾಡಲಾಗುತ್ತದೆ. ಇವುಗಳಿಗೆ ನಿಯಂತ್ರಣವನ್ನೂ ಹೇರಬೇಕಾಗಿದೆ’ ಎಂದು ಅವರು ಹೇಳುತ್ತಾರೆ.

ನಾಳೆ ನೋಡಿ
‘ರಾಜಧಾನಿ ಒಡಲದನಿ’


ರಾತ್ರಿ ಕರ್ಫ್ಯೂ ತೆರವಾದ ಬಳಿಕದ ಬ್ರಿಗೇಡ್ ರಸ್ತೆಯಲ್ಲಿ ಜನ ಸಂಚಾರ –ಪ್ರಜಾವಾಣಿ ಚಿತ್ರಗಳು/ ಅನೂಪ್ ರಾಘ. ಟಿ.

ಹೆಚ್ಚಬೇಕಿದೆ ಪೊಲೀಸ್ ಗಸ್ತು

ಒಂದೂವರೆ ವರ್ಷದಿಂದ ರಾತ್ರಿ ವೇಳೆ ವಾಹನ ಸಂಚಾರ ಕಡಿಮೆ ಇತ್ತು. ಈಗ ರಾತ್ರಿಯಲ್ಲೂ ಜನರ ಓಡಾಟ ಹೆಚ್ಚಾಗಬಹುದು. ಪೊಲೀಸರಿಗೆ ರಾತ್ರಿ ಗಸ್ತಿನ ಕೆಲಸ ಈಗ ಮತ್ತೆ ಹೆಚ್ಚಾಗಲಿದೆ.

ರಾತ್ರಿ ಸಂಭವಿಸಬಹುದಾದ ಗಂಭೀರವಾದ ಅಪರಾಧ ತಡೆಯಲು ಹೆಚ್ಚಿನ ಸಿದ್ಧತೆ ಮಾಡಬೇಕಿದೆ. ಪೂರ್ಣ ಪ್ರಮಾಣದ ಮೂರು ಶಿಫ್ಟ್‌ಗಳಲ್ಲಿ ಪೊಲೀಸರು ಕೆಲಸ ಮಾಡಬೇಕಾಗುತ್ತದೆ. ಗಸ್ತು ವ್ಯವಸ್ಥೆಗೆ ಹೆಚ್ಚಿನ ಸಿಬ್ಬಂದಿ ಹಾಗೂ ಇತರ ಸಂಪನ್ಮೂಲಗಳನ್ನು ಪೊಲೀಸ್ ಇಲಾಖೆ ಸಿದ್ಧ ಮಾಡಿಕೊಳ್ಳಬೇಕಿದೆ.

ತಪ್ಪಲಿದೆಯೇ ಪೊಲೀಸ್ ಕಿರಿಕಿರಿ

ರಾತ್ರಿ ಕರ್ಫ್ಯೂ ನೆಪದಲ್ಲಿ ಪೊಲೀಸರು ರಸ್ತೆ ಬದಿಯ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ನೀಡಿದ್ದ ಕಿರಿಕಿರಿ ತಪ್ಪಲಿದೆಯೇ ಎಂಬುದು ಈಗಿರುವ ಪ್ರಶ್ನೆ.

‘ರಾತ್ರಿ 10 ಗಂಟೆ ನಂತರ ಕರ್ಫ್ಯೂ ಇದ್ದರೂ 9.30ರಿಂದಲೇ ಪೊಲೀಸರ ಕಿರಿಕಿರಿ ಆರಂಭವಾಗುತ್ತಿತ್ತು. ಅವರಿಗೆ ಮಾಮೂಲಿ ನೀಡದಿದ್ದರೆ ಠಾಣೆಗೆ ಕರೆದೊಯ್ದು ಕೂರಿಸಿಕೊಳ್ಳುತ್ತಿದ್ದರು’ ಎಂದು ಮದ್ಯದ ಅಂಗಡಿ ಮಾಲೀಕರು ಆರೋಪಿಸುತ್ತಾರೆ.

‘ಬೆಂಗಳೂರಿನಲ್ಲಿ ಶೇ 95ರಷ್ಟು ಮದ್ಯದ ಅಂಗಡಿಗಳು ರಾತ್ರಿ 11.30ಕ್ಕೆ ಮುಚ್ಚುತ್ತವೆ. ಪೊಲೀಸರು ಮತ್ತು ಅಬಕಾರಿ ಅಧಿಕಾರಿಗಳ ಕಿರುಕುಳದ ಬಗ್ಗೆ ಅಬಕಾರಿ ಸಚಿವರಿಗೆ ಮನವಿ ನೀಡಿ ಮನವರಿಕೆ ಮಾಡಿಕೊಟ್ಟಿದ್ದೆವು. ಬಳಿಕ ಸರ್ಕಾರ ರಾತ್ರಿ ಕರ್ಫ್ಯೂ ವಾಪಸ್ ಪಡೆದಿದೆ. ಪೊಲೀಸರ ಕಿರುಕುಳ ತಪ್ಪಿದಂತಾಗಿದೆ’ ಎಂದು ಬೆಂಗಳೂರು ನಗರ ಜಿಲ್ಲೆ ಮದ್ಯ ವ್ಯಾಪಾರಿಗಳ ಸಂಘದ ಅಧ್ಯಕ್ಷ ಲೋಕೇಶ್ ತಿಳಿಸಿದರು.


ರಾತ್ರಿ ಕರ್ಫ್ಯೂ ತೆರವಾದ ಬಳಿಕ ಚರ್ಚ್ ಸ್ಟ್ರೀಟ್‌ನಲ್ಲಿನ ಜನ ಸಂಚಾರ

ಮಧ್ಯರಾತ್ರಿವರೆಗೆ ಬಸ್ ಸಂಚಾರ

ರಾತ್ರಿ ಕರ್ಫ್ಯೂ ಇದ್ದ ಕಾರಣ ಬಿಎಂಟಿಸಿ ಬಸ್‌ಗಳ ಸಂಚಾರ ರಾತ್ರಿ 10 ಗಂಟೆ ಮಾತ್ರ ಇತ್ತು. ಇದೀಗ ಅದನ್ನು ಕೋವಿಡ್ ಪೂರ್ವದಲ್ಲಿ ಇದ್ದಂತೆ ಮಧ್ಯ ರಾತ್ರಿ ವರೆಗೆ ವಿಸ್ತರಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್ ಪೂರ್ವದಲ್ಲಿ ಕೆಲವು ಮಾರ್ಗಗಳಲ್ಲಿ ಮಧ್ಯರಾತ್ರಿ ತನಕ ಬಸ್‌ಗಳ ಕಾರ್ಯಾಚರಣೆ ಇತ್ತು. ಅವುಗಳನ್ನು ಈಗ ಮತ್ತೆ ಆರಂಭಿಸಲಾಗಿದೆ ಎಂದು ಹೇಳಿದರು.

ಎರಡನೇ ಅಲೆ ಕಡಿಮೆಯಾದ ಬಳಿಕ ನಿಧಾನವಾಗಿ ಬಿಎಂಟಿಸಿ ಬಸ್‌ಗಳ ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಿದೆ. ದಿನದ ವರಮಾನ ಕೂಡ ಗಣನೀಯವಾಗಿ ಏರಿಕೆಯಾಗಿದೆ. ದಿನಕ್ಕೆ ₹3 ಕೋಟಿ ವರಮಾನ ಸಂಗ್ರಹವಾಗುತ್ತಿದೆ ಎಂದು ವಿವರಿಸಿದರು.

ಕೋವಿಡ್ ಪೂರ್ವದಲ್ಲಿ ದಿನಕ್ಕೆ ₹3.50 ಕೋಟಿ ವರಮಾನ ಸಂಗ್ರಹವಾಗುತ್ತಿತ್ತು. ವೋಲ್ವೊ ಬಸ್‌ಗಳ ಸಂಚಾರ, ವಿಮಾನ ನಿಲ್ದಾಣ ಮಾರ್ಗದ ಕಾರ್ಯಾಚರಣೆ ಸುಸ್ಥಿರಗೊಳ್ಳಬೇಕಿದೆ ಎಂದು ತಿಳಿಸಿದರು.

‘ತಡರಾತ್ರಿಯೂ ಬಸ್ ಸಂಚಾರ ಇರಲಿದೆ ಎಂದು ಬಿಎಂಟಿಸಿ ಅಧಿಕಾರಿಗಳು ಹೇಳುತ್ತಾರೆ. ರಾತ್ರಿ 10ರ ಬಳಿಕ ಬಿಎಂಟಿಸಿ ಬಸ್‌ಗಳು ಯಾವ ರಸ್ತೆಯಲ್ಲೂ ಕಾಣಿಸುವುದಿಲ್ಲ. ದೂರದ ಊರುಗಳಿಂದ ಬಂದಿಳಿಯುವ ಪ್ರಯಾಣಿಕರು ದುಬಾರಿ ದರ ಪಾವತಿಸಿ ಆಟೋ ರಿಕ್ಷಾ ಅಥವಾ ಟ್ಯಾಕ್ಸಿಯಲ್ಲೇ ಹೋಗಬೇಕಾದ ಅನಿವಾರ್ಯತೆ ಇದೆ’ ಎಂದು ಪ್ರಯಾಣಿರಕರು ದೂರುತ್ತಾರೆ.

ವಿಸ್ತರಣೆ ಆಗಬೇಕಿದೆ ಮೆಟ್ರೊ ರೈಲು ಸಮಯ



ರಾತ್ರಿ ಕರ್ಫ್ಯೂ ತೆರವುಗೊಳಿಸಿರುವ ಸರ್ಕಾರ, ಮೆಟ್ರೊ ರೈಲು ಸಂಚಾರ ಅವಧಿಯನ್ನು ವಿಸ್ತರಣೆ ಮಾಡಿಲ್ಲ. ಈ ಹಿಂದಿನಂತೆ ರಾತ್ರಿ 11 ಗಂಟೆ ವಿಸ್ತರಣೆ ಮಾಡಬೇಕು ಎಂಬ ಒತ್ತಡ ಆರಂಭವಾಗಿದೆ.

ಲಾಕ್‌ಡೌನ್ ತೆರವುಗೊಳಿಸಿದ ಬಳಿಕ ರಾತ್ರಿ 9ರ ವರೆಗೆ ಮೆಟ್ರೊ ರೈಲು ಸಂಚಾರಕ್ಕೆ ಅವಕಾಶ ನೀಡಲಾಗಿತ್ತು. ಪ್ರಯಾಣಿಕರ ಒತ್ತಾಯ ಹೆಚ್ಚಿದ ಬಳಿಕ ರೈಲು ಸೇವೆಯನ್ನು (ಸೆ.18) ಬೆಳಿಗ್ಗೆ 6ರಿಂದ ರಾತ್ರಿ 10ರವರೆಗೆ ವಿಸ್ತರಣೆ ಮಾಡಲಾಯಿತು.

ಬೈಯಪ್ಪನಹಳ್ಳಿ, ಕೆಂಗೇರಿ, ನಾಗಸಂದ್ರ ಮತ್ತು ರೇಷ್ಮೆ ಸಂಸ್ಥೆ ಮೆಟ್ರೊ ನಿಲ್ದಾಣಗಳಿಂದ ರಾತ್ರಿ 9.30ಕ್ಕೆ ಹಾಗೂ ಕೆಂಪೇಗೌಡ ಮೆಟ್ರೊ ನಿಲ್ದಾಣದಿಂದ (ಮೆಜೆಸ್ಟಿಕ್) ರಾತ್ರಿ 10ಕ್ಕೆ ಕೊನೆಯ ರೈಲು ಹೊರಡುತ್ತಿವೆ.

ರಾತ್ರಿ ಕರ್ಫ್ಯೂ ತೆರವುಗೊಳಿಸಿರುವ ಸರ್ಕಾರ, ಮೆಟ್ರೊ ರೈಲು ಸಂಚಾರದ ಅವಧಿಯನ್ನು ಕನಿಷ್ಠ 1 ಗಂಟೆ ಅಂದರೆ ರಾತ್ರಿ 11ರ ತನಕ ವಿಸ್ತರಣೆ ಮಾಡಬೇಕು ಎಂಬುದು ಪ್ರಯಾಣಿಕರ ಒತ್ತಾಯ.

ರಾತ್ರಿ ನಂಬಿರುವ ದುಡಿಯುವ ಕೈಗಳು

ಪಬ್, ಕ್ಲಬ್, ಹೋಟೆಲ್‌ಗಳಲ್ಲಿ ಕೆಲಸ ಮಾಡುವ ಸಾವಿರಾರು ಕಾರ್ಮಿಕರು ಬೆಂಗಳೂರಿನ ರಾತ್ರಿ ಜಗತ್ತನ್ನು ನಂಬಿಕೊಂಡಿದ್ದಾರೆ.

ಅದರಲ್ಲೂ ಡ್ಯಾನ್ಸ್‌ಬಾರ್‌ಗಳಲ್ಲಿ ಕೆಲಸ ಮಾಡುವವರಿಗೆ ಗ್ರಾಹಕರು ನೀಡುವ ಟಿಪ್ಸ್ ಬಿಟ್ಟರೆ ಸಂಬಳ ಎಂಬುದೇ ಇರುವುದಿಲ್ಲ. ಇದನ್ನು ನಂಬಿ ಜೀವನ ಕಟ್ಟಿಕೊಂಡಿದ್ದವರ ಪರಿಸ್ಥಿತಿ ಶೋಚನೀಯವಾಗಿತ್ತು.

ಪ್ರಮುಖ ವೃತ್ತಗಳಲ್ಲಿ ಟೀ, ಸಿಗರೇಟು ಮತ್ತು ಬನ್ ಮಾರಾಟ ಮಾಡಿಕೊಂಡೇ ಜೀವನ ನಡೆಸುವ ಜನರಿದ್ದಾರೆ. ಅಲ್ಲಲ್ಲಿ ಸೈಕಲ್ ಅಥವಾ ಸ್ಕೂಟರ್ ನಿಲ್ಲಿಸಿಕೊಂಡೇ ರಾತ್ರಿ ಇಡೀ ವ್ಯಾಪಾರ ವಹಿವಾಟು ನಡೆಸುತ್ತಾರೆ. ಒಂದೂವರೆ ವರ್ಷದಿಂದ ಅವರ ಬದುಕಿಗೆ ಕವಿದಿದ್ದ ಕಾರ್ಮೋಡ ಈಗ ಸರಿದಂತಾಗಿದೆ.

ಕೋವಿಡ್: ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 7,989ಕ್ಕೆ ಇಳಿಕೆ ಕಂಡಿದ್ದು, 5 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ಗದಗ ಜಿಲ್ಲೆಯಲ್ಲಿ ಯಾವುದೇ ಸಕ್ರಿಯ ಪ್ರಕರಣಗಳು ವರದಿಯಾಗಿಲ್ಲ. 16 ಜಿಲ್ಲೆಗಳಲ್ಲಿ 100ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸೋಂಕಿತರಿದ್ದಾರೆ. ಬೆಂಗಳೂರಿನಲ್ಲಿ ಗರಿಷ್ಠ 6,419 ಸಕ್ರಿಯ ಪ್ರಕರಣಗಳಿವೆ.

ಸೋಮವಾರ ಹೊಸದಾಗಿ 283 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಅಲ್ಪ ಏರಿಕೆಯಾಗಿದ್ದು, ಶೇ 0.26 ರಷ್ಟು ವರದಿಯಾಗಿದೆ. ಬೆಳಗಾವಿ, ಬೀದರ್ ಸೇರಿದಂತೆ 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ದಕ್ಷಿಣ ಕನ್ನಡ (10), ಹಾಸನ(24), ಕೋಲಾರ (11), ಮೈಸೂರಿನಲ್ಲಿ (15) ಪ್ರಕರಣಗಳು ಎರಡಂಕಿಯಲ್ಲಿದೆ. 15 ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ ಒಂದಂಕಿಯಲ್ಲಿದೆ. ಬೆಂಗಳೂರಿನಲ್ಲಿ 159 ಪ್ರಕರಣಗಳು ವರದಿಯಾಗಿವೆ.

ಆರು ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಮೈಸೂರಿನಲ್ಲಿ ಇಬ್ಬರು ಹಾಗೂ ಬೆಂಗಳೂರು, ಕೊಪ್ಪಳ, ಶಿವಮೊಗ್ಗ ಮತ್ತು ಉಡುಪಿಯಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ಮರಣ ಪ್ರಮಾಣ ದರವು ಶೇ 2.12ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,118ಕ್ಕೆ ಏರಿಕೆಯಾಗಿದೆ. ಸೋಮವಾರ 1.05 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,52,990 ▲ ಒಟ್ಟು ಸೋಂಕಿತರು (12,52,831 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,419 ▲	12,30,274 ▲	16,296 ▲

ದಿನದ ಏರಿಕೆ	
ಹೊಸ ಪ್ರಕರಣ	159 ▲
ಗುಣಮುಖ	104 ▼
ಸಾವು	01 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	25.07 ಕೋಟಿ ▲	3.43ಕೋಟಿ
ಸಕ್ರಿಯ ಪ್ರಕರಣ	1.87 ಕೋಟಿ ▲	1.42ಲಕ್ಷ ▼
ಗುಣಮುಖ	22.69 ಕೋಟಿ ▲	3.37 ಕೋಟಿ
ಸಾವು	50.67 ಲಕ್ಷ ▲	4.61 ಲಕ್ಷ ▲

ದಿನದ ಮಾಹಿತಿ	ವಿಶ್ವ	ಭಾರತ
ಹೊಸ ಪ್ರಕರಣ	3.43 ಲಕ್ಷ ▲	11,451 ▼
ಗುಣಮುಖ	2.92 ಲಕ್ಷ ▼	13,204 ▼
ಸಾವು	4,678 ▼	266 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
23,165 ▲	30,305 ▼	39,165 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
92.28 ▼	15.65 ▲	9.86 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	1.40 ಲಕ್ಷ
ತಮಿಳುನಾಡು	36,220 ▲
ಕೇರಳ	33,716 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	66.17 ▲
ಕೇರಳ	50.15 ▲
ತಮಿಳುನಾಡು	27.09 ▲

ಪ್ರಜಾವಾಣಿ ಗ್ರಾಫಿಕ್ಸ್

‘ಕೊರಿಯರ್’ ನೆಪದಲ್ಲಿ ಸರ ಕದಿಯುತ್ತಿದ್ದವ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೊರಿಯರ್’ ನೀಡುವ ನೆಪದಲ್ಲಿ ಮನೆಗಳಿಗೆ ಹೋಗಿ ಮಹಿಳೆಯರ ಚಿನ್ನದ ಸರಗಳನ್ನು ಕಿತ್ತೊಯ್ಯುತ್ತಿದ್ದ ಆರೋಪಿ ಫರ್ವೀದ್ (26) ಎಂಬಾತನನ್ನು ತಿಲಕನಗರ ಪೊಲೀಸರು ಬಂಧಿಸಿದ್ದಾರೆ.

‘ನೆಲಮಂಗಲದ ಫರ್ವೀದ್, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಆತನಿಂದ 2 ಚಿನ್ನದ ಸರ, 2 ಕಾರು ಹಾಗೂ 4 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯದ ₹ 8.50 ಲಕ್ಷ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಜೀವನ ನಿರ್ವಹಣೆಗೆ ಸಂಬಳ ಸಾಲುತ್ತಿರಲಿಲ್ಲ. ಹೀಗಾಗಿ, ಸುಲಿಗೆ ಮಾಡಲಾರಂಭಿಸಿದ್ದ. ನಂತರ ವಾಹನ ಹಾಗೂ ಸರ ಕಳವು ಶುರು ಮಾಡಿದ್ದ. ಪ್ರಕರಣವೊಂದರಲ್ಲಿ ಜೈಲಿಗೂ ಹೋಗಿ ಬಂದಿದ್ದ’ ಎಂದರು.

ಮನೆ ಬಾಗಿಲು ಬಡಿದು ಕೃತ್ಯ: ‘ಒಂಟಿ ಮಹಿಳೆಯರು ಇರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದ ಆರೋಪಿ, ಕೊರಿಯರ್ ನೀಡುವ ನೆಪದಲ್ಲಿ ಮನೆಗಳಿಗೆ ಹೋಗಿ, ಬಾಗಿಲು ಬಡಿಯುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

‘ಮಹಿಳೆಯರು ಬಾಗಿಲು ತೆರೆಯುತ್ತಿದ್ದಂತೆ, ಕೊರಿಯರ್ ಬಂದಿರುವುದಾಗಿ ಹೇಳಿ ಮೊಬೈಲ್ ಸಂದೇಶ ತೋರಿಸುತ್ತಿದ್ದ. ಸಂದೇಶ ನೋಡುತ್ತಿದ್ದಾಗಲೇ ಮಹಿಳೆಯರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗುತ್ತಿದ್ದ’ ಎಂದೂ ಹೇಳಿದರು.

ದಿಕ್ಕುತಪ್ಪಿದ್ದ ವಿದ್ಯಾರ್ಥಿ ರಕ್ಷಣೆ

ಮಾಗಡಿ: ಸಾವನದುರ್ಗದ ಪ್ರವಾಸಕ್ಕೆ ಬಂದು ಬೆಟ್ಟ ಹತ್ತಿ ಇಳಿಯುವಾಗ ದಾರಿತಪ್ಪಿ ಬಿರುಕಿನಲ್ಲಿ ಮೂರು ದಿನ ಸಿಲುಕಿದ್ದ ವಿದ್ಯಾರ್ಥಿಯನ್ನು ಪೊಲೀಸರು ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಸೋಮವಾರ ರಕ್ಷಿಸಿದ್ದಾರೆ.

ಬೆಂಗಳೂರಿನ ನಾರಾಯಣ ಕಾಲೇಜಿನ ವಿದ್ಯಾರ್ಥಿ ಕೃತಿಕ್ ಎಂಬಾತನನ್ನು ರಕ್ಷಿಸಲಾಗಿದೆ.


ಕೃತಿಕ್

ಶುಕ್ರವಾರ ಸಾವನದುರ್ಗಕ್ಕೆ ಪ್ರವಾಸ ಬಂದಿದ್ದ ಆತ ಬೆಟ್ಟ ಹತ್ತಿ ಎರಡನೇ ಸುತ್ತಿನ ಕೋಟೆಯಲ್ಲಿ ಕೆಳಗೆ ಇಳಿಯುವ ವೇಳೆ ದಾರಿ ತಪ್ಪಿದ್ದರು. ಬಂಡೆಗಳ ಬಿರುಕಿನಲ್ಲಿ ಜಾರಿ ಮೂರು ದಿನ ಕಳೆದಿದ್ದರು.

ವಿದ್ಯಾರ್ಥಿಯ ತಂದೆ ಡಿ.ಆರ್.ಡಿ.ಒದಲ್ಲಿ ವಿಜ್ಞಾನಿಯಾಗಿದ್ದಾರೆ. ಅರಣ್ಯ ಸಿಬ್ಬಂದಿ ಮತ್ತು ಪೊಲೀಸರು ಕಾರ್ಯಾಚರಣೆ ನಡೆಸಿ ವಿದ್ಯಾರ್ಥಿಯನ್ನು ರಕ್ಷಿಸಿ ಪೋಷಕರ ವಶಕ್ಕೆ ಒಪ್ಪಿಸಿದ್ದಾರೆ.

ಅಪರಾಧ ಸುದ್ದಿ

ಜಿಎಸ್‌ಟಿ ನಿರೀಕ್ಷಕರ ಮೇಲೆ ಹಲ್ಲೆ

ಬೆಂಗಳೂರು: ಸರಕು ಸೇವಾ ತೆರಿಗೆ (ಜಿಎಸ್‌ಟಿ) ನಿರೀಕ್ಷಕ ವಿನಯ್ ಮಂಡಲ್ ಎಂಬುವರ ಮೇಲೆ ಹಲ್ಲೆ ನಡೆದಿದ್ದು, ಈ ಬಗ್ಗೆ ಕೋರಮಂಗಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ‘ಹಲ್ಲೆಗೀಡಾಗಿರುವ ವಿನಯ್ ಮಂಡಲ್ ದೂರು ನೀಡಿದ್ದಾರೆ. ಕೋರಮಂಗಲದ ಪಬ್‌ವೊಂದರ ಮಾಲೀಕ ರಾಕೇಶ್ ಗೌಡ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ದೊಮ್ಮಲೂರು ನಿವಾಸಿ ವಿನಯ್, ನ. 5ರಂದು ರಾತ್ರಿ 8 ಗಂಟೆಗೆ ಪಬ್‌ಗೆ ಹೋಗಿದ್ದರು. ಇದೇ ಸಂದರ್ಭದಲ್ಲಿ ಬಿಲ್ ವಿಚಾರವಾಗಿ ರಾಕೇಶ್‌ಗೌಡ ಹಾಗೂ ಇತರರು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಮಾತಿಗೆ ಮಾತು ಬೆಳೆದಿತ್ತು. ಆರೋಪಿಗಳು, ವಿನಯ್ ಅವರನ್ನು ಕೊಠಡಿಯೊಂದರಲ್ಲಿ ಅಕ್ರಮ ಬಂಧನದಲ್ಲಿಟ್ಟು ಹಲ್ಲೆ ಮಾಡಿದ್ದರು ಎನ್ನಲಾಗಿದೆ. ಈ ಬಗ್ಗೆ ಆರೋಪಿಗಳನ್ನು ವಿಚಾರಣೆ ನಡೆಸಬೇಕಿದೆ’ ಎಂದೂ ಮೂಲಗಳು ತಿಳಿಸಿವೆ.

ಉಡುಗೊರೆ ಸ್ವೀಕರಿಸಿದ ಪೊಲೀಸರಿಗೆ ಒಳ ಉಡುಪು!

ಬೆಂಗಳೂರು: ಬಾಗಲಗುಂಟೆ ಠಾಣೆಯ ಪೊಲೀಸರು ಸೇವಾ ಶಿಷ್ಟಾಚಾರ ಉಲ್ಲಂಘಿಸಿ ಮಾಜಿ ಶಾಸಕರಿಂದ ಶರ್ಟ್ ಮತ್ತು ಪ್ಯಾಂಟ್ ಬಟ್ಟೆ ಉಡುಗೊರೆಯಾಗಿ ಪಡೆದ ಘಟನೆಯನ್ನು ಖಂಡಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಕಾರ್ಯಕರ್ತರು, ಅಲ್ಲಿನ ಪೊಲೀಸರಿಗೆ ಒಳ ಉಡುಪು ಮತ್ತು ಬಟ್ಟೆ ಹೊಲಿಸಿಕೊಳ್ಳಲು ಹಣ ನೀಡಲು ಮುಂದಾದರು!

ಈ ಬಗ್ಗೆ ಫೇಸ್ ಬುಕ್ ಖಾತೆಯಲ್ಲಿ ಬರೆದುಕೊಂಡಿರುವ (ಕೆಆರ್‌ಎಸ್) ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿಕೃಷ್ಣಾರೆಡ್ಡಿ, ‘ಉಡುಗೊರೆ ಸ್ವೀಕರಿಸಿದ ಕುರಿತು ಇಲಾಖೆಯಿಂದ ವಿಚಾರಣೆ ನಡೆಯುತ್ತಿದೆ. ಈ ಘಟನೆ ನನ್ನ ಕೈ ಮೀರಿ ನಡೆದಿದೆ ಎಂದು ಠಾಣಾಧಿಕಾರಿ ಸುನೀಲ್ ವಿಷಾದ ವ್ಯಕ್ತಪಡಿಸಿದ್ದಾರೆ’ ಎಂದಿದ್ದಾರೆ.

‘ಪೊಲೀಸ್ ಸೇವಾ ನಿಯಮಗಳ ಪ್ರಕಾರ ಉಡುಗೊರೆ ಪಡೆಯುವುದು ನಿಯಮಬಾಹಿರ. ನಾವು ತೆಗೆದುಕೊಂಡು ಹೋಗಿದ್ದ ಒಳ ಉಡುಪುಗಳನ್ನು ಪೊಲೀಸರು ತೆಗೆದುಕೊಳ್ಳಲಿಲ್ಲ. ಅಲ್ಲದೆ, ಸ್ಥಳದಲ್ಲಿಯೇ ಸಂಗ್ರಹಿಸಿದ್ದ ₹ 1,500 ದೇಣಿಗೆಯನ್ನೂ ಸ್ವೀಕರಿಸಲಿಲ್ಲ’ ಎಂದಿದ್ದಾರೆ.

‘ಈ ಪ್ರಕರಣದ ಕುರಿತು ಪೊಲೀಸ್ ಇಲಾಖೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಅಲ್ಲದೆ, ರಾಜ್ಯ ಎಲ್ಲ ಠಾಣೆಗಳ ಸಿಬ್ಬಂದಿಗೆ ಪೊಲೀಸ್ ನಡವಳಿಕೆ ಕುರಿತು ಸ್ಪಷ್ಟ ಸಂದೇಶದ ಸುತ್ತೋಲೆ ಹೊರಡಿಸಬೇಕು. ಈ ವಿಚಾರವಾಗಿ ಸದ್ಯದಲ್ಲಿಯೇ ಪೊಲೀಸ್ ಮಹಾನಿರ್ದೇಶಕರನ್ನು ಭೇಟಿ ಮಾಡಲಿದ್ದೇವೆ. ಪೊಲೀಸರನ್ನು ಭ್ರಷ್ಟ ಅಧಿಕಾರಿಗಳ ಗುಲಾಮಗಿರಿಯಿಂದ ಹೊರ ತರುವುದು ನಮ್ಮ ಗುರಿ’ ಎಂದಿದ್ದಾರೆ.

ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ಅಕ್ರಮ: ಚನ್ನಪ್ಪ ಗೌಡ ನೆಲ್ಲೂರು ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ಭಾರಿ ಅಕ್ರಮ ನಡೆಯುತ್ತಿದೆ. ಇದನ್ನು ಚುನಾವಣಾ ಅಧಿಕಾರಿಗಳು ತಡೆಯದಿದ್ದರೆ, ಭ್ರಷ್ಟಾಚಾರಿಗಳು ಚುನಾವಣೆಯಲ್ಲಿ ಗೆದ್ದು ಸಂಘವನ್ನು ಹಾಳು ಮಾಡಲಿದ್ದಾರೆ’ ಎಂದು ಚುನಾವಣೆಯ ಅಭ್ಯರ್ಥಿ ಹಾಗೂ ಆಮ್ ಆದ್ಮಿ ಪಕ್ಷದ ಮುಖಂಡ ಚನ್ನಪ್ಪ ಗೌಡ ನೆಲ್ಲೂರು ಆತಂಕ ವ್ಯಕ್ತಪಡಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಒಕ್ಕಲಿಗರ ಸಂಘದ ಚುನಾವಣೆಯ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ತಿಳಿಯುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ನಕಲಿ ಮತದಾರರ ಹೆಸರು ನೋಂದಣಿಯಾಗಿದೆ’ ಎಂದು ಆರೋಪಿಸಿದರು.

‘ಮತದಾರರ ಪಟ್ಟಿಯಲ್ಲಿ ಹಲವರಿಗೆ ಒಂದೇ ವಿಳಾಸವಿದೆ. ಕೆಲವರಿಗೆ ವಿಳಾಸವೇ ಇಲ್ಲ. ಮತದಾರರಿಗೆ ತಪ್ಪು ಮೊಬೈಲ್ ನಂಬರ್ ನಮೂದಿಸಲಾಗಿದ್ದು, ಇನ್ನೂ ಕೆಲವರ ಮೊಬೈಲ್ ಸಂಖ್ಯೆಯೇ ಇಲ್ಲ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ ಸಾವಿರಾರು ಮತದಾರರಿಗೆ ಒಂದೇ ಮೊಬೈಲ್ ಸಂಖ್ಯೆ ನೀಡಲಾಗಿದೆ’ ಎಂದು ದೂರಿದರು.

‘ಮತದಾರರ ಪಟ್ಟಿಯಲ್ಲೇ ಈ ರೀತಿಯ ಅಕ್ರಮ ಸ್ಪಷ್ಟವಾಗುತ್ತಿದೆ. ಭ್ರಷ್ಟ ಅಭ್ಯರ್ಥಿಗಳು ಗೆದ್ದರೆ, ಸಂಘದ ಘನತೆಗೆ ಧಕ್ಕೆಯಾಗಲಿದೆ. ಅಕ್ರಮವಾಗಿ ಗೆಲುವು ಸಾಧಿಸುವವರು ಒಕ್ಕಲಿಗರ ಹಿತ ಕಾಪಾಡುತ್ತಾರೆಂದು ಹೇಗೆ ತಾನೇ ನಿರೀಕ್ಷಿಸಲು ಸಾಧ್ಯ’ ಎಂದು ಪ್ರಶ್ನಿಸಿದರು.

‘ಒಕ್ಕಲಿಗರ ಸಂಘದ ಚುನಾವಣಾ ಅಧಿಕಾರಿಗಳು, ಆಡಳಿತಾಧಿಕಾರಿಗಳು ಹಾಗೂ ಸಹಕಾರ ಇಲಾಖೆಯ ಬೆಂಗಳೂರು ಜಿಲ್ಲಾ ನೋಂದಣಾಧಿಕಾರಿಗಳಿಗೆ ಲಿಖಿತ ದೂರು ಸಲ್ಲಿಸಿದ್ದೇನೆ. ಚುನಾವಣಾ ಅಧಿಕಾರಿಗಳು ತಕ್ಷಣವೇ ಅಕ್ರಮಗಳನ್ನು ತಡೆದು, ಪಾರದರ್ಶಕವಾಗಿ ಚುನಾವಣೆ ನಡೆಸಬೇಕು’ ಎಂದು ಒತ್ತಾಯಿಸಿದರು.

ಭೂಹೋರಾಟ ಸಮಿತಿ ಸದಸ್ಯ ಬಿ.ಎಚ್.ಸುರೇಶ್, ‘ಒಕ್ಕಲಿಗರ ಸಂಘದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕು ಹಾಗೂ ಸಮುದಾಯದ ಜನರಿಗೆ ನ್ಯಾಯ ಸಿಗಬೇಕೆಂದರೆ ಚುನಾವಣೆಯು ನ್ಯಾಯಯುತವಾಗಿ ನಡೆಯಬೇಕು. ನಕಲಿ ಮತದಾರರನ್ನು ತೆಗೆದು ಹಾಕಿ, ಪರಿಷ್ಕೃತ ಪಟ್ಟಿಯನ್ನು ಬಿಡುಗಡೆ ಮಾಡಬೇಕು’ ಎಂದು ಆಗ್ರಹಿಸಿದರು.

‘ಇಪಿಎಸ್–95’ ಪಿಂಚಣಿದಾರರ ಮಾಸಿಕ ಸಭೆ

ಬೆಂಗಳೂರು: ಕೇಂದ್ರ ಸರ್ಕಾರವು ಪಿಂಚಣಿದಾರರ ಸಮಸ್ಯೆಗಳನ್ನು ಪರಿಹರಿಸದೆ ಇರುವುದರ ವಿರುದ್ಧ ಮುಂದಿನ ಹೋರಾಟದ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುವ ಸಂಬಂಧ ‘ಇಪಿಎಸ್–95’ ಯೋಜನೆಯ ಪಿಂಚಣಿದಾರರು ಲಾಲ್‌ಬಾಗ್‌ನಲ್ಲಿ ಸಭೆ ನಡೆಸಿದರು.

ಕೇಂದ್ರ ಸರ್ಕಾರದ ಧೋರಣೆ ಖಂಡಿಸಿ ಪಿಂಚಣಿದಾರರು ಮಾಸಿಕ ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಇದೇ 11ರಂದು ನಡೆಯಲಿರುವ ನ್ಯಾಷನಲ್ ಎಜಿಟೇಶನ್ ಕಮಿಟಿ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಬೆಂಗಳೂರು ಮತ್ತು ಇತರ ಭಾಗಗಳಲ್ಲಿನ ಎಲ್ಲ ಪಿಂಚಣಿ ಸಂಘಟನೆಗಳನ್ನು ಒಗ್ಗೂಡಿಸಿ ಮುಂದಿನ ಹೋರಾಟದ ಬಗ್ಗೆ ನಿರ್ಧರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಚಿತ್ರಾವಳಿ


ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನಗರದ ಧರ್ಮರಾಯಸ್ವಾಮಿ ದೇವಾಲಯಕ್ಕೆ ಭಾನುವಾರ ಭೇಟಿ ನೀಡಿದರು. ಇದೇ ವೇಳೆ ರಾಜೀವ್ ನೃಪತುಂಗ ಅವರು ಬರೆದಿರುವ ‘ಧರ್ಮೋವಿವರ್ಧತಿ’ ಪುಸ್ತಕ ಬಿಡುಗಡೆ ಮಾಡಿದರು. ವಿಧಾನ ಪರಿಷತ್ ಸದಸ್ಯ ಪಿ.ಆರ್.ರಮೇಶ್, ಶಾಸಕ ಉದಯ್ ಬಿ.ಗರುಡಾಚಾರ್ ಇದ್ದಾರೆ


ಅಂಗನವಾಡಿ ಕೇಂದ್ರಗಳು ಸೋಮವಾರದಿಂದ ಆರಂಭಗೊಂಡಿದ್ದರಿಂದ ನಗರದ ಪ್ಯಾಲೇಸ್ ಗುಟ್ಟಹಳ್ಳಿಯ ವೆಂಕಟರಂಗಪುರ ಅಂಗನವಾಡಿ ಕೇಂದ್ರದಲ್ಲಿ ಅಂಗನವಾಡಿ ಕಾರ್ಯಕರ್ತೆ ಶ್ವೇತಾ ಅವರು ಕೇಕ್ ಕತ್ತರಿಸಿ ಮಕ್ಕಳನ್ನು ಬರಮಾಡಿಕೊಂಡರು ಪ್ರಜಾವಾಣಿ ಚಿತ್ರ

ಹೋಟೆಲ್‌ಗಳಲ್ಲಿ ಶೇ 10ರವರೆಗೆ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರಿನ 100ಕ್ಕೂ ಹೆಚ್ಚು ಹೋಟೆಲ್‌ಗಳಲ್ಲಿ ಸೋಮವಾರದಿಂದಲೇ ಸರಾಸರಿ ಶೇ 10ರವರೆಗೆ ದರ ಏರಿಕೆ ಜಾರಿಯಾಗಿದೆ. ಒಟ್ಟಾರೆ ನಗರದ ಎಲ್ಲ ಹೋಟೆಲ್‌ಗಳಲ್ಲಿ ಡಿಸೆಂಬರ್ 1ರಿಂದ ಪರಿಷ್ಕೃತ ದರ ಜಾರಿಯಾಗಲಿದೆ’ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಂಘದ ವತಿಯಿಂದ ದರ ಏರಿಕೆಗೆ ಸಲಹೆಯಷ್ಟೇ ನೀಡಲಾಗಿದೆ. ಮಾಲೀಕರು ತಮ್ಮ ಅನುಕೂಲಕ್ಕೆ ತಕ್ಕಂತೆ ದರ ಹೆಚ್ಚಳ ಮಾಡುತ್ತಾರೆ. ಏಕಕಾಲಕ್ಕೆ ಎಲ್ಲ ಆಹಾರದ ದರಗಳನ್ನು ಏರಿಸುವುದರಿಂದ ಗ್ರಾಹಕರಿಗೂ ಸಮಸ್ಯೆಯಾಗುತ್ತದೆ. ಹಾಗಾಗಿ, ಹಂತ ಹಂತವಾಗಿ ಕೆಲವು ಆಹಾರ ದರಗಳನ್ನು ಏರಿಸುವ ಚಿಂತನೆ ಮಾಲೀಕರದ್ದು’ ಎಂದು ವಿವರಿಸಿದರು.

ಕೋವಿಡ್–19: ಮಕ್ಕಳ ಮೇಲೆ ಪರಿಣಾಮಗಳು ಕುರಿತು ಸಮಾಲೋಚನಾ ಸಭೆ

ಮಕ್ಕಳ ಬಜೆಟ್: ಸ್ಥಳೀಯ ಸಂಸ್ಥೆಗಳಿಗೆ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ಥಳೀಯ ಸಂಸ್ಥೆಗಳು ಬಜೆಟ್ ರೂಪಿಸುವಾಗ ಮಕ್ಕಳ ವಿಷಯಗಳಿಗೂ ಆದ್ಯತೆ ನೀಡಬೇಕು’ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಉಮಾ ಮಹಾದೇವನ್ ಸಲಹೆ ನೀಡಿದರು

ಯುನಿಸೆಫ್ ಮತ್ತು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ನಗರದಲ್ಲಿ ‘ಕೋವಿಡ್–19: ಮಕ್ಕಳ ಮೇಲೆ ಪರಿಣಾಮಗಳು’ ಕುರಿತು ಸೋಮವಾರ ಆಯೋಜಿಸಿದ್ದ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

‘ರಾಜ್ಯ ಮಟ್ಟದಲ್ಲಿ ಮಕ್ಕಳ ಬಜೆಟ್ ಕಲ್ಪನೆಯನ್ನು ಈ ವರ್ಷದಿಂದ ಆರಂಭಿಸಲಾಗಿದೆ. ಅದೇ ರೀತಿ ಮಕ್ಕಳ ಬಜೆಟ್ ಕಲ್ಪನೆಯನ್ನು ಸ್ಥಳೀಯ ಸಂಸ್ಥೆಗಳು ರೂಪಿಸಿಕೊಳ್ಳಬೇಕು. ಈ ಮೂಲಕ ಮಕ್ಕಳ ಸಮಸ್ಯೆಗಳನ್ನು ಪರಿಹರಿಸಲು ಪ್ರಾತಿನಿಧ್ಯ ನೀಡಬೇಕಾಗಿದೆ’ ಎಂದು ಸಲಹೆ ನೀಡಿದರು.

‘ಮಕ್ಕಳ ಮೇಲೆ ಕೋವಿಡ್ ಅಪಾರ ಪರಿಣಾಮ ಬೀರಿದೆ. ಕೆಲವೆಡೆ ಬಾಲ್ಯ ವಿವಾಹವಾದ ವರದಿಗಳಾಗಿವೆ.



ನಗರದಲ್ಲಿ ಸೋಮವಾರ ಮಕ್ಕಳ ಹಕ್ಕುಗಳ ಧ್ವಜವನ್ನು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಆಂತೋಣಿ ಸೆಬಾಸ್ಟಿಯನ್ ಅನಾವರಣಗೊಳಿಸಿದರು. ತಮಿಳುನಾಡು ಎಸ್‌ಸಿಪಿಸಿಆರ್ ಅಧ್ಯಕ್ಷೆ ಸರಸ್ವತಿ ರಂಗಸ್ವಾಮಿ, ಆರಾಧ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಉಮಾ ಮಹಾದೇವನ್ ಇದ್ದರು. –ಪ್ರಜಾವಾಣಿ ಚಿತ್ರ

ಅಂಗನವಾಡಿ ಕೇಂದ್ರಗಳು, ಶಾಲೆಗಳು ಮುಚ್ಚಿದ್ದರಿಂದ ಬೇರೆ, ಬೇರೆ ರೀತಿಯ ಪರಿಣಾಮಗಳಾಗಿವೆ. ರಾಜ್ಯದಲ್ಲಿ 66,361 ಅಂಗನವಾಡಿ ಕೇಂದ್ರಗಳಿವೆ. ಸದ್ಯ ಎರಡು ಗಂಟೆಗಳ ಕಾಲ ಮಾತ್ರ ತೆರೆಯಲು ಅವಕಾಶ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಪರಿಸ್ಥಿತಿ ವಿಶ್ಲೇಷಿಸಿ ಅವಧಿಯನ್ನು ವಿಸ್ತರಿಸಲಾಗುವುದು’ ಎಂದು ತಿಳಿಸಿದರು.

‘ಗ್ರಾಮೀಣ ಪ್ರದೇಶದಲ್ಲಿ 5,600 ಗ್ರಂಥಾಲಯಗಳಿವೆ. 10 ಲಕ್ಷ ಮಕ್ಕಳು ಈ ಗ್ರಂಥಾಲಯಗಳ ಸದುಪಯೋಗ ಪಡಿಸಿಕೊಂಡಿದ್ದಾರೆ. ಹಂತ ಹಂತವಾಗಿ ಈ ಗ್ರಂಥಾಲಯಗಳನ್ನು ಡಿಜಿಟಲ್‌ಗೆ ಪರಿವರ್ತಿಸುವ ಕಾರ್ಯ ನಡೆಯುತ್ತಿದೆ. ಈಗಾಗಲೇ 600 ಗ್ರಂಥಾಲಯಗಳನ್ನು ಡಿಜಿಟಲ್‌ಗೆ ಪರಿವರ್ತಿಸಲಾಗಿದೆ’ ಎಂದು ವಿವರಿಸಿದರು.

ಅಂಗವಿಕಲ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕ ವಿ.ಮುನಿರಾಜು, ‘2011ರ ಜನಗಣತಿ ಅನ್ವಯ ರಾಜ್ಯದಲ್ಲಿ 13.24 ಲಕ್ಷ ಅಂಗವಿಕಲರಿದ್ದಾರೆ. ಇವರಲ್ಲಿ 3.3 ಲಕ್ಷ ಮಕ್ಕಳಿದ್ದಾರೆ. ಈ ಮಕ್ಕಳ ಮೇಲೆ ಕೋವಿಡ್ ಗಂಭೀರ ಪರಿಣಾಮ ಬೀರಿದೆ. ಕೋವಿಡ್‌ನಿಂದ ಹಲವು ಪೋಷಕರು ಉದ್ಯೋಗ ಕಳೆದುಕೊಂಡಿದ್ದರಿಂದ ಮಕ್ಕಳಿಗೆ ಉತ್ತಮ ಪೌಷ್ಟಿಕ ಆಹಾರ ನೀಡಲು ಸಾಧ್ಯವಾಗಿಲ್ಲ’ ಎಂದು ವಿವರಿಸಿದರು.

ಚೈಲ್ಡ್ ಫಂಡ್ ಇಂಡಿಯಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನೀಲಂ ಮಾಖಿಜಾನಿ ಮಾತನಾಡಿ, ‘ಮಕ್ಕಳ ಅಭಿವೃದ್ಧಿ ವಿಷಯದಲ್ಲಿ ಪರಿಸ್ಥಿತಿ ಬದಲಾಗುತ್ತಿಲ್ಲ. ನಿಧಾನಗತಿಯಲ್ಲಿ ಪ್ರಗತಿ ಸಾಧಿಸಲಾಗುತ್ತಿದೆ. ಮನಸ್ಥಿತಿಯನ್ನು ಬದಲಾಯಿಸಿಕೊಂಡು ಯೋಜನೆಗಳನ್ನು ರೂಪಿಸಬೇಕಾಗಿದೆ’ ಎಂದು ಹೇಳಿದರು.

‘ಶಾಲೆಗಳಲ್ಲಿ ಧಾರ್ಮಿಕ ವಿಷಯ ಬೋಧನೆ ಬೇಡ’

‘ಶಾಲೆಗಳಲ್ಲಿ ಧಾರ್ಮಿಕ ವಿಷಯಗಳ ಬೋಧನೆಯಿಂದ ತಾರತಮ್ಯಕ್ಕೆ ಕಾರಣವಾಗುತ್ತಿದೆ. ಹೀಗಾಗಿ, ಇಂತಹ ವಿಷಯಗಳ ಬೋಧನೆಗೆ ಕಡಿವಾಣ ಹಾಕಬೇಕಾಗಿದೆ’ ಎಂದು ‘ಅಪ್ಸಾ’ ಸಂಸ್ಥೆ ಪ್ರತಿನಿಧಿಸುವ ವಿದ್ಯಾರ್ಥಿನಿ ಆರಾಧ್ಯಾ ಪ್ರತಿಪಾದಿಸಿದರು.

‘ವಿದ್ಯಾರ್ಥಿಗಳನ್ನು ಯಾವುದೇ ಧರ್ಮದಿಂದ ಗುರುತಿಸುವುದು ಸಲ್ಲದು. ಧಾರ್ಮಿಕ ವಿಷಯಗಳ ಬದಲು ವೈಜ್ಞಾನಿಕ ಚಿಂತನೆ ಮೂಡಿಸುವ ವಿಷಯಗಳನ್ನೇ ಹೆಚ್ಚು ಬೋಧಿಸಬೇಕು’ ಎಂದು ಅಭಿಪ್ರಾಯಪಟ್ಟರು.

‘ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿನಿಯರನ್ನು ಚುಡಾಯಿಸುವುದು ಕಡಿಮೆಯಾಗಿಲ್ಲ. ಕೆಲವು ವಿದ್ಯಾರ್ಥಿನಿಯರು ಮನೆಯಲ್ಲೂ ಈ ವಿಷಯ ಹೇಳುತ್ತಿಲ್ಲ. ಇಂತಹ ಪ್ರಕರಣಗಳು ಎಲ್ಲೆಡೆ ನಡೆಯುತ್ತಿವೆ’ ಎಂದು ಹೇಳಿದರು.

‘ಕೋವಿಡ್ ಸಮಯದಲ್ಲಿ ಹಲವು ಮಕ್ಕಳು ಶಾಲೆಯನ್ನು ತೊರೆದಿದ್ದಾರೆ. ನನ್ನ ಸ್ನೇಹಿತರು ಸಹ ಇವರಲ್ಲಿದ್ದಾರೆ. ಇವರನ್ನು ಮತ್ತೆ ಶಾಲೆಗೆ ಕರೆತರುವ ಕಾರ್ಯವಾಗಬೇಕು’ ಎಂದರು.

ಸುದ್ದಿ 2 ನಿಮಿಷ

ಬಿಜೆಪಿಯಿಂದ ಕೊಳಕು ರಾಜಕಾರಣ: ಸಿದ್ದರಾಮಯ್ಯ

ಮಂಡ್ಯ: ‘ನನ್ನ ಕಟೌಟ್ ಸುಟ್ಟ ಕೂಡಲೇ ನಾನು ಸುಟ್ಟು ಹೋಗುವುದಿಲ್ಲ ಅಥವಾ ನನ್ನನ್ನು ಪ್ರೀತಿಸುವವರು ಸುಟ್ಟು ಹೋಗುವುದಿಲ್ಲ. ಬಿಜೆಪಿಯವರಂಥ ಕೊಳಕರು, ಜಾತಿವಾದಿಗಳು ಯಾರೂ ಸಿಗುವುದಿಲ್ಲ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗುಡುಗಿದರು.

ನಗರದಲ್ಲಿ ಸೋಮವಾರ ಮಾತನಾಡಿದ ಅವರು, ‘ಕಾಂಗ್ರೆಸ್ ಅಧಿಕಾರಕ್ಕೆ ಬರುವ ಲಕ್ಷಣ ರಾಜ್ಯದಲ್ಲಿ ಕಾಣತೊಡಗಿದೆ. ಇಂಥ ಸಂದರ್ಭದಲ್ಲಿ ಬಿಜೆಪಿ ಕೊಳಕು ರಾಜಕಾರಣ ಮಾಡುತ್ತಿದೆ. ಯಾರೂ ಬಿಜೆಪಿಗೆ ಸೇರಬಾರದು’ ಎಂದು ಹೇಳಿದರು.

‘ಈ ಬಾರಿ ನಮ್ಮ ಸರ್ಕಾರ ಅಧಿಕಾರಕ್ಕೆ ಬರುತ್ತಾ?’ ಎಂದು ಅವರು ಕೇಳಿದಾಗ ಸಭಿಕರು ‘ಹೌದು ಹುಲಿಯಾ’ ಎಂದು ಹೇಳಿ ಚಪ್ಪಾಳೆ ತಟ್ಟಿದರು.

‘ಸಂವಿಧಾನ ಬದಲಾವಣೆ ಮಾಡಲಾಗುವುದು ಎಂದ ಪಕ್ಷಕ್ಕೆ ಹಲವರು ಹೋಗುತ್ತಿದ್ದಾರೆ ಎಂದು ಭಾಷಣದಲ್ಲಿ ನಾನು ಹೇಳಿದ್ದನ್ನು ಬಿಜೆಪಿ ತಿರುಚಿ ಅಪಪ್ರಚಾರ ಮಾಡುತ್ತಿದೆ ಎಂದು ಸಿದ್ದರಾಮಯ್ಯ ಅವರು ಉತ್ತರಿಸಿದರು.

₹1.54 ಕೋಟಿ ಆದಾಯ ಸಂಗ್ರಹ



ಹಾಸನ: ಹಾಸನಾಂಬೆ ಮತ್ತು ಸಿದ್ದೇಶ್ವರ ಜಾತ್ರಾ ಮಹೋತ್ಸವದಲ್ಲಿ ಈ ಬಾರಿ ಹುಂಡಿ ಹಣ ಹಾಗೂ ಟಿಕೆಟ್ ಮತ್ತಿತರ ಮೂಲಗಳಿಂದ ಒಟ್ಟು ₹1,54,37,940 ಹಣ ಸಂಗ್ರಹವಾಗಿದೆ.

ಹಾಸನಾಂಬೆ ದೇವಾಲಯದ ಹುಂಡಿಗಳಿಂದ ₹83,89,770 ಸಂಗ್ರಹವಾಗಿದ್ದರೆ, ಸಿದ್ದೇಶ್ವರ ದೇವಾಲಯದ ಒಂದು ಹುಂಡಿಯಿಂದ ₹6,50,355 ಕಾಣಿಕೆ ರೂಪದಲ್ಲಿ ಸಂಗ್ರಹವಾಗಿದೆ. ಅಲ್ಲದೆ, ಟಿಕೆಟ್ ಮಾರಾಟದಿಂದ ₹63,97,815 ಸಂಗ್ರಹವಾಗಿದೆ.

ದೇವಾಲಯದ ಆಡಳಿತಾಧಿಕಾರಿ ಬಿ.ಎ.ಜಗದೀಶ್, ತಹಶೀಲ್ದಾರ್ ನಟೇಶ್ ಸಮ್ಮುಖದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲಿನಲ್ಲಿ ಬೆಳಿಗ್ಗೆ 8 ಗಂಟೆಗೆ ಹುಂಡಿ ಹಣ ಎಣಿಕೆ ಕಾರ್ಯ ಆರಂಭವಾಗಿ ಸಂಜೆ 4.30ಕ್ಕೆ ಮುಕ್ತಾಯಗೊಂಡಿತ್ತು. ಅ.28ರಿಂದ ನ.6ರವರೆಗೆ ಹಾಸನಾಂಬ, ಸಿದ್ದೇಶ್ವರ ಜಾತ್ರಾ ಮಹೋತ್ಸವ ನಡೆದಿತ್ತು. ಬ್ಯಾಂಕ್ ಸಿಬ್ಬಂದಿ, ಕಂದಾಯ ಇಲಾಖೆ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ದೇವಾಲಯದ ಆಡಳಿತಾಧಿಕಾರಿ, ತಹಶೀಲ್ದಾರ್ ಎಣಿಕೆ ಕಾರ್ಯದಲ್ಲಿ ತೊಡಗಿದ್ದರು. ಹುಂಡಿ ಹಣವನ್ನು ಬ್ಯಾಂಕ್‌ಗೆ ಜಮಾ ಮಾಡಲಾಯಿತು.

ಹಲ್ಲೆ: ಪೊಲೀಸ್ ಕಸ್ಟಡಿಗೆ ವಿಷ್ಣು ಭಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದ ಪ್ರಕರಣದಲ್ಲಿ ಬಂಧಿಸಲಾಗಿದ್ದ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಇನ್ನೊಬ್ಬ ಆರೋಪಿ ವಿಷ್ಣು ಭಟ್‌ನನ್ನು ಮುಂದಿನ 4 ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ಜೀವನ್‌ಬಿಮಾನಗರ ಠಾಣೆ ವ್ಯಾಪ್ತಿಯ ಹೋಟೆಲ್‌ನಲ್ಲಿ ವಾಸವಿದ್ದ ಆರೋಪಿಗಳು, ಸಿಬ್ಬಂದಿ ಹಾಗೂ ವ್ಯವಸ್ಥಾಪಕನ ಮೇಲೆ ಹಲ್ಲೆ ಮಾಡಿದ್ದರು. ವ್ಯವಸ್ಥಾಪಕ ನೀಡಿದ್ದ ದೂರಿನಡಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ, ಆರೋಪಿಗಳು ಮಾದಕ ದ್ರವ್ಯ ಸೇವಿಸಿದ್ದು ಗೊತ್ತಾಗಿತ್ತು.

ಎನ್‌ಡಿಪಿಎಸ್ ಕಾಯ್ದೆಯಡಿಯೂ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಇಬ್ಬರ ಮನೆಗಳ ಮೇಲೂ ದಾಳಿ ಮಾಡಿದ್ದರು. ಡ್ರಗ್ಸ್ ಸಹ ಪತ್ತೆ ಹಚ್ಚಿದ್ದರು.

‘ಆರೋಪಿ ವಿಷ್ಣು ಭಟ್‌ನ ಇಂದಿರಾನಗರದ ಮನೆಯಲ್ಲಿ ಡ್ರಗ್ಸ್ ಸಿಕ್ಕಿದೆ. ಅದನ್ನು ಆತ ಎಲ್ಲಿಂದ ತರಿಸಿದ್ದ? ಡ್ರಗ್ಸ್ ಪೂರೈಸಿದ್ದ ಪೆಡ್ಲರ್ ಯಾರು? ಎಂಬುದನ್ನು ಪತ್ತೆ ಮಾಡಬೇಕಿದೆ. ಹೀಗಾಗಿ, ಆತನನ್ನು ಕಸ್ಟಡಿಗೆ ನೀಡುವಂತೆ ನ್ಯಾಯಾಲಯವನ್ನು ಕೋರಲಾಗಿತ್ತು. ನಮ್ಮ ಮನವಿಯನ್ನು ನ್ಯಾಯಾಲಯ ಮನ್ನಿಸಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಮತ್ತಷ್ಟು ಮಂದಿಗೆ ನೋಟಿಸ್: ವಿಷ್ಣು ಭಟ್ ಜೊತೆ ಪಾರ್ಟಿಗಳಲ್ಲಿ ಪಾಲ್ಗೊಂಡು ಡ್ರಗ್ಸ್ ಸೇವಿಸುತ್ತಿದ್ದವರ ಹಾಗೂ ಡ್ರಗ್ಸ್ ಮಾರುತ್ತಿದ್ದವರ ಮಾಹಿತಿಯನ್ನು ಪೊಲೀಸರು ಕಲೆ ಹಾಕುತ್ತಿದ್ದಾರೆ. ಪಟ್ಟಿ ಸಿದ್ಧಪಡಿಸಿ ಎಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸುವ ಸಾಧ್ಯತೆ ಇದೆ.

‘2 ತಿಂಗಳಲ್ಲಿ ಐಬಿಎಂ ಮೈಸೂರು ಕ್ಯಾಂಪಸ್’

ಬೆಂಗಳೂರು: ಸಾಫ್ಟ್‌ವೇರ್ ಎಂಜಿನಿಯರಿಂಗ್, ವಿನ್ಯಾಸ ಮತ್ತು ಅನಲಿಟಿಕ್ಸ್‌ಗಳಲ್ಲಿ ಪರಿಣತಿ ಹೊಂದಿರುವ ಐಬಿಎಂ ಸಮೂಹದ ‘ಕ್ಲೈಂಟ್ ಇನ್ನೋವೇಶನ್ ಸೆಂಟರ್’ಗೆ (ಸಿಐಸಿ) ಐಟಿ, ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಸೋಮವಾರ ಸಾಂಕೇತಿಕವಾಗಿ ಚಾಲನೆ ನೀಡಿದರು.

ವಿಕಾಸಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಈ ಕೇಂದ್ರವು ಮೈಸೂರಿನಿಂದ ಚಟುವಟಿಕೆ ನಡೆಸಲಿದ್ದು, ಎರಡು ತಿಂಗಳಲ್ಲಿ ಐಬಿಎಂ ಸಮೂಹ ಮೈಸೂರಿನಲ್ಲೂ ಕಚೇರಿ ಆರಂಭಿಸಲಿದೆ. ಈ ಕೇಂದ್ರವು ರಾಜ್ಯದ ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿ ಕ್ಷಿಪ್ರ ಮತ್ತು ಹೈಟೆಕ್ ಆರ್ಥಿಕತೆಯ ಬೆಳವಣಿಗೆಗೆ ನೆರವಾಗಲಿದೆ’ ಎಂದರು.

‘ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್‌ನ (ಕೆಡಿಇಎಂ) ಸ್ಪೋಕ್-ಶೋರ್ ನೀತಿಯಡಿಯಲ್ಲಿ 2025ರ ವೇಳೆಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ 10 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಇಟ್ಟುಕೊಳ್ಳಲಾಗಿದೆ. 2026ರ ವೇಳೆಗೆ ಮೈಸೂರು, ಹುಬ್ಬಳ್ಳಿ ಮತ್ತು ಮಂಗಳೂರು ಕ್ಲಸ್ಟರ್‌ಗಳಲ್ಲಿ 5 ಸಾವಿರ ಐಟಿ ಕಂಪನಿಗಳು ಮತ್ತು ನವೋದ್ಯಮಗಳು ನೆಲೆಯೂರುವಂತೆ ಮಾಡಲಾಗುವುದು’ ಎಂದು ಅವರು ವಿವರಿಸಿದರು.

ಕೆಡಿಇಎಂ ಅಧ್ಯಕ್ಷ ಬಿ.ವಿ.ನಾಯ್ಡು ಮಾತನಾಡಿ, ‘ಡಿಜಿಟಲ್ ಎಕಾನಮಿ ಮಿಷನ್ ಯೋಜನೆಯಡಿ 2025ರ ವೇಳೆಗೆ ರಾಜ್ಯಕ್ಕೆ ಕನಿಷ್ಠ 100 ಕಂಪನಿಗಳ ಗ್ಲೋಬಲ್ ಕೆಪಾಸಿಟಿ ಸೆಂಟರ್‌ಗಳನ್ನು (ಜಿಸಿಸಿ) ಆಕರ್ಷಿಸುವ ಗುರಿ ಇಟ್ಟುಕೊಳ್ಳಲಾಗಿದೆ’ ಎಂದರು.

ಐಬಿಎಂನ ವ್ಯವಸ್ಥಾಪಕ ಪಾಲುದಾರ ಅಮಿತ್ ಶರ್ಮಾ ಮಾತನಾಡಿ, ‘ಮೈಸೂರು ಸಿಐಸಿ ಕೇಂದ್ರವು ಭವಿಷ್ಯದ ತಂತ್ರಜ್ಞಾನ ವಲಯಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಮುಖ್ಯ ಪಾತ್ರ ವಹಿಸಲಿದೆ. ಈ ಆರ್ಥಿಕ ವರ್ಷದ ಪ್ರಸಕ್ತ ತ್ರೈಮಾಸಿಕ ಅವಧಿಯಲ್ಲಿ ಜಾಗತಿಕ ಮಟ್ಟದಲ್ಲಿ 10 ಸಾವಿರ ಜನರನ್ನು ನೇಮಿಸಿಕೊಳ್ಳಲಾಗುವುದು. ಇದರಿಂದಾಗಿ ಐಬಿಎಂ ಕಂಪನಿಯು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎಐ), ಹೈಬ್ರಿಡ್ ಕ್ಲೌಡ್ ಮುಂತಾದ ಕ್ಷೇತ್ರಗಳಲ್ಲಿ ಹೊಂದಿರುವ ಪರಿಣತಿಯು ಮತ್ತಷ್ಟು ಹೆಚ್ಚಾಗಲಿದೆ’ ಎಂದರು.

ಆಟೊ ಪ್ರಯಾಣ ದರ ₹5 ಹೆಚ್ಚಳ

ಒಂದನೇ ಪುಟದಿಂದ

‘ಹೊಸ ವಾಹನದ ಮುಖ ಬೆಲೆ, ಸಾರಿಗೆ ಇಲಾಖೆ ಶುಲ್ಕಗಳು, ಇಂಧನ ಹಾಗೂ ಎಲ್‌ಪಿಜಿ ಗ್ಯಾಸ್ ದರ ಏರಿಕೆ ಆಗಿದೆ. ಲಾಕ್‌ಡೌನ್‌ನಿಂದ ಆಟೊ ಚಾಲಕ ಜೀವನ ನಿರ್ವಹಣೆಗೆ ತೊಂದರೆ ಆಗಿದೆ. ಮಂಗಳೂರು ಹಾಗೂ ಉಡುಪಿ ನಗರಗಳಲ್ಲಿ ಈಗಾಗಲೇ ದರ ಹೆಚ್ಚಳ ಮಾಡಲಾಗಿದೆ. ಈ ಎಲ್ಲ ಅಂಶಗಳನ್ನು ಗಮನಿಸಿ ಹಾಗೂ ಆಟೊ ಚಾಲಕರ ಸಂಘಗಳ ಮನವಿ ಪರಿಶೀಲಿಸಿ, ಪ್ರಯಾಣ ದರವನ್ನು ಹೆಚ್ಚಿಸಲಾಗಿದೆ’ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

‘ನಿಗದಿತ ಪರಿಷ್ಕೃತ ದರ ಪಟ್ಟಿಯನ್ನು ಚಾಲಕರು ತಮ್ಮ ಆಟೊದಲ್ಲಿ ಪ್ರದರ್ಶಿಸಬೇಕು. ಪರಿಷ್ಕೃತ ದರಗಳಿಗೆ ತಕ್ಕಂತೆ ಮೀಟರ್‌ಗಳ ಅಂಕಿಗಳನ್ನು ಮಾರ್ಪಡಿಸಿ 2022ರ ಫೆಬ್ರವರಿ 28ರೊಳಗೆ (90 ದಿನಗಳು) ಪುನಃ ಸತ್ಯಾಪನೆ ಮಾಡಿಸಿ ಮುದ್ರೆ ಹಾಕಿಸಿಕೊಳ್ಳಬೇಕು’ ಎಂದೂ ಹೇಳಲಾಗಿದೆ.

	ಹಾಲಿ ದರ	ಪರಿಷ್ಕೃತ ದರ
	1.9 ಕಿ.ಮೀ.ಗೆ ₹25 (ಮೂರು ಜನ ಪ್ರಯಾಣಿಕರು)	2 ಕಿ.ಮೀ.ಗೆ ₹30 (ಮೂರು ಜನ ಪ್ರಯಾಣಿಕರು)
	1.9 ಕಿ.ಮೀ. ನಂತರದ ಪ್ರತಿ ಕಿ.ಮೀ.ಗೆ ₹13	2 ಕಿ.ಮೀ. ನಂತರ ಪ್ರತಿ ಕಿ.ಮೀ.ಗೆ; ₹15
ಕಾಯುವಿಕೆ ದರ	ಮೊದಲ ಐದು ನಿಮಿಷ ಉಚಿತ; ಮೊದಲ ಐದು ನಿಮಿಷದ ನಂತರ ಪ್ರತಿ ಹದಿನೈದು ನಿಮಿಷಕ್ಕೆ ₹5	ಮೊದಲ ಐದು ನಿಮಿಷ ಉಚಿತ; ಮೊದಲ ಐದು ನಿಮಿಷದ ನಂತರ ಪ್ರತಿ ಹದಿನೈದು ನಿಮಿಷಕ್ಕೆ; ₹5
ಪ್ರಯಾಣಿಕರ ಲಗೇಜು ದರ	ಮೊದಲ 20 ಕೆ.ಜಿ.ಗೆ ಉಚಿತ; 20 ಕೆ.ಜಿ ನಂತರ, ಪ್ರತಿ 20 ಕೆ.ಜಿ.ಗೆ ₹2	ಮೊದಲ 20 ಕೆ.ಜಿ.ಗೆ ಉಚಿತ; 20 ಕೆ.ಜಿ ನಂತರ, ಪ್ರತಿ 20 ಕೆ.ಜಿ.ಗೆ ₹5

ರಾತ್ರಿ ವೇಳೆ ದರ (ರಾತ್ರಿ 10 ಗಂಟೆಯಿಂದ ನಸುಕಿನ 5 ಗಂಟೆವರೆಗೆ) ಸಾಮಾನ್ಯ ದರ + ಸಾಮಾನ್ಯ ದರದ ಅರ್ಧಪಟ್ಟು

ರಾಜ್ಯಮಟ್ಟದ ಬುಡಕಟ್ಟು ಉತ್ಸವಕ್ಕೆ ಚಾಲನೆ

ಬುಡಕಟ್ಟು ಕಲೆ, ಸಂಸ್ಕೃತಿ ಅನಾವರಣ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕಾಡು ಜನರ ಆಹಾರ ಪದ್ಧತಿ ಪರಿಚಯಿಸುವ ತಿನಿಸುಗಳ ಸುವಾಸನೆ ಇಡೀ ಮೈದಾನವನ್ನು ಆವರಿಸಿತ್ತು. ರೋಗನಿರೋಧಕ ಶಕ್ತಿ ಹೆಚ್ಚಿಸುವ ಔಷಧೀಯ ಸಸ್ಯ, ಅರಣ್ಯ ಉಪ ಉತ್ಪನ್ನ ಪರಿಚಯಿಸುವ ಪ್ರದರ್ಶನ ಮತ್ತೊಂದೆಡೆ ಗಮನ ಸೆಳೆಯಿತು.

ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ, ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಆಶ್ರಯದಲ್ಲಿ ಇಲ್ಲಿನ ಹಳೆ ಮಾಧ್ಯಮಿಕ ಶಾಲಾ ಆವರಣದಲ್ಲಿ ಎರಡು ದಿನಗಳ ಬುಡಕಟ್ಟು ಉತ್ಸವದಲ್ಲಿನ ವಿಶೇಷ ಇದು.

ಬುಡಕಟ್ಟು ಸಮುದಾಯದ ಜನರ ಸಾಂಸ್ಕೃತಿಕ ವಿನಿಮಯದ ಉದ್ದೇಶದಿಂದ ಏರ್ಪಡಿಸಿದ್ದ ಉತ್ಸವ ಗಮನ ಸೆಳೆಯಿತು. ರಾಜ್ಯದ ಹಲವೆಡೆಯಿಂದ ಆದಿವಾಸಿ ಜನರು ಇಲ್ಲಿ ಸೇರಿದ್ದರು. ನಗರ ಜೀವನ ಶೈಲಿಯಿಂದ ಸೃಷ್ಟಿಯಾದ ಹಲವು ಕಾಯಿಲೆಗಳಿಗೆ ಕಾಡಿನ ಔಷಧೀಯ ಸಸ್ಯಗಳಲ್ಲಿ ಇರುವ ಪರಿಹಾರವನ್ನು ಖಾತರಿಪಡಿಸುವ ಮಳಿಗೆಗಳೇ ಹೆಚ್ಚಾಗಿದ್ದವು.

ಎಚ್.ಡಿ.ಕೋಟೆ ತಾಲ್ಲೂಕಿನ ಬಸವನಗಿರಿ ಹಾಡಿಯ ಬಸಮ್ಮ ಅವರು ತಯಾರಿಸಿದ ಔಷಧಗಳು ಅಪರೂಪ ಎನಿಸುವಂತೆ ಇದ್ದವು. ಛಾಯಾಗ್ರಾಹಕ ನಿಸರ್ಗ ಗೋವಿಂದರಾಜು ಅವರು ಏರ್ಪಡಿಸಿದ್ದ ಛಾಯಾಚಿತ್ರ ಪ್ರದರ್ಶನ ಗಮನ ಸೆಳೆಯಿತು. ಹುಣಸೂರು ತಾಲ್ಲೂಕಿನ ಹಲವು ಹಾಡಿಗಳಿಂದ ಬಂದಿರುವ ಆದಿವಾಸಿ ಜನರು ತಯಾರಿಸಿದ ಬಂಬೂ ಬಿರಿಯಾನಿಯ ಘಮಲು ಎಲ್ಲೆಡೆ ಪಸರಿಸಿತ್ತು. ಉತ್ಸವದ ಕೇಂದ್ರ ಬಿಂದುವಾಗಿದ್ದ ಆಹಾರ ಮಳಿಗೆ ಜನರನ್ನು ಆಕರ್ಷಿಸಿತು.



ಚಿತ್ರದುರ್ಗದಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ ಬುಡಕಟ್ಟು ಉತ್ಸವದಲ್ಲಿ ಗಮನ ಸೆಳೆದ ಬುಡಕಟ್ಟು ಕಲಾವಿದರು.

ಸಚಿವರಿಂದ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನೆ

ದೊಡ್ಡಜಾಲ ಗ್ರಾ.ಪಂ: ಕೇಂದ್ರ ಸಚಿವರ ಭೇಟಿ

ಯಲಹಂಕ: ಕೇಂದ್ರ ಪಂಚಾಯತ್ ರಾಜ್ ಖಾತೆ ರಾಜ್ಯಸಚಿವ ಕಪಿಲ್ ಮೋರೇಶ್ವರ್ ಪಾಟೀಲ್, ದೊಡ್ಡಜಾಲ ಗ್ರಾಮ ಪಂಚಾಯಿತಿ ಕಚೇರಿಗೆ ಸೋಮವಾರ ಭೇಟಿ ನೀಡಿ, ಪಂಚಾಯಿತಿ ವತಿಯಿಂದ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನೆ ನಡೆಸಿದರು.

ನಂತರ ಪಂಚಾಯಿತಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿದ ಅವರು, ಪಂಚಾಯಿತಿ ವತಿಯಿಂದ ದೊಡ್ಡಜಾಲ ಗ್ರಾಮದಲ್ಲಿ ನಿರ್ಮಿಸಿರುವ ಡಿಜಿಟಲ್ ಗ್ರಂಥಾಲಯಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಸಾದಹಳ್ಳಿ ಗೇಟ್ ಬಳಿ ಔಷಧಿ ಅಂಗಡಿ, ನವರತ್ನ ಅಗ್ರಹಾರ ಗ್ರಾಮದಲ್ಲಿ ಉದ್ಯಮಿ ರೊನಾಲ್ಡ್ ಕೊಲಾಸೊ ನೀಡಿದ ದೇಣಿಗೆಯಿಂದ ನಿರ್ಮಿಸಿರುವ ಸರ್ಕಾರಿ ಶಾಲೆಗೆ ಭೇಟಿ ನೀಡಿ, ತರಗತಿ ಕೊಠಡಿ, ಸ್ಮಾರ್ಟ್ ಕೊಠಡಿ, ಡಿಜಿಟಲ್ ಗ್ರಂಥಾಲಯ, ಊಟದ ಹಾಲ್ ಸೇರಿದಂತೆ ವಿವಿಧ ವಿಭಾಗಗಳನ್ನು ವೀಕ್ಷಿಸಿದರು. ನಂತರ ಗ್ರಾಮದಲ್ಲಿ ಅಳವಡಿಸಿರುವ ವೈಫೈ ಸಂಪರ್ಕ, ಸಿಸಿ ಟಿವಿ ಕ್ಯಾಮರಾ, ನೀರಿನ ಮೀಟರ್ ಅಳವಡಿಕೆ, ಕೊಳಚೆನೀರು ಸಂಸ್ಕರಣಾ ಘಟಕ, ಈಜುಕೊಳ ಹಾಗೂ ಬ್ಯಾಡ್ಮಿಂಟನ್ ಕೋರ್ಟ್ ಸೌಲಭ್ಯಗಳನ್ನು ವೀಕ್ಷಿಸಿದರು.

ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಶಿಲ್ಪಾನಾಗ್, ಬೆಂಗಳೂರು ನಗರ ಜಿಲ್ಲಾಪಂಚಾಯಿತಿ ಕಾರ್ಯನಿರ್ವಹಣಾ ಅಧಿಕಾರಿ ಸಂಗಪ್ಪ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಎಂ.ವೆಂಕಟೇಶ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹಂಸವೇಣಿ ವಿ. ಮಂಜುನಾಥ್, ಸದಸ್ಯ ಎನ್.ಕೆ.ಮಹೇಶ್ ಕುಮಾರ್, ಪಿಡಿಒ ಗಂಗಾರಾಮ್ ಇತರರು ಇದ್ದರು.

‘ಪುಣ್ಯಸ್ಮರಣೆ’ಯಲ್ಲಿ ಅಪ್ಪು ಅಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರ 11ನೇ ದಿನದ ಪುಣ್ಯಸ್ಮರಣೆ ಸೋಮವಾರ ನಡೆಯಿತು. ಸದಾಶಿವನಗರದಲ್ಲಿರುವ ಪುನೀತ್ ಅವರ ನಿವಾಸದಲ್ಲಿ ಬೆಳಗ್ಗೆ ಪೂಜಾಕಾರ್ಯದ ಬಳಿಕ, ಕುಟುಂಬದ ಸದಸ್ಯರು ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ಅವರ ಸಮಾಧಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಬಿಳಿ ಹೂವುಗಳಿಂದ ಅಲಂಕರಿಸಿದ ಸಮಾಧಿಯ ಆವರಣದಲ್ಲಿ, ಕೆಂಪು ಗುಲಾಬಿಯ ಎಸಳುಗಳ ಚಾದರಡಿ ಅಪ್ಪು ಚಿರನಿದ್ರೆಯಲ್ಲಿದ್ದರು. ಪ್ರೀತಿಯ ಅಪ್ಪುವಿನ ಅಗಲಿಕೆಯ ನೋವಿನಿಂದ ಕುಟುಂಬ ಇನ್ನೂ ಹೊರಬಂದಿಲ್ಲ ಎನ್ನುವುದಕ್ಕೆ ಸಾಕ್ಷಿ ಎಂಬಂತೆ ಇಡೀ ಕುಟುಂಬವೇ ದುಃಖದ ಮಡುವಿನಲ್ಲಿತ್ತು. ಅಪ್ಪನನ್ನು ಕಳೆದುಕೊಂಡ ನೋವು ಮಕ್ಕಳಾದ ವಂದಿತಾ ಹಾಗೂ ಧೃತಿ ಅವರ ಕಣ್ಣುಗಳಲ್ಲಿತ್ತು. ಪತ್ನಿ ಅಶ್ವಿನಿ ಮುಖದಲ್ಲೂ ನೋವು ಮಡುಗಟ್ಟಿತ್ತು. ಇವೆಲ್ಲವನ್ನೂ ನುಂಗಿಕೊಂಡೇ ನೆಚ್ಚಿನ ತಮ್ಮನಿಗೆ ಹಾಡೊಂದನ್ನು ಹೇಳುತ್ತಾ ರಾಘವೇಂದ್ರ ರಾಜ್‌ಕುಮಾರ್ ಹಾಗೂ ಕುಟುಂಬದ ಸದಸ್ಯರು ಸಮಾಧಿಗೆ ಆರತಿ ಎತ್ತಿದರು. ಶಿವರಾಜ್‌ಕುಮಾರ್ ಹಾಗೂ ಅವರ ಹಿರಿಯ ಪುತ್ರಿ ನಿರುಪಮಾ ಅಪ್ಪುವನ್ನು ನೆನೆದು ಕಣ್ಣೀರಾದರು. ಸ್ಟುಡಿಯೊ ಒಳಗಡೆಗೆ ಪೂಜೆ ಸಮಯದಲ್ಲಿ ಸಾರ್ವಜನಿಕರಿಗೆ ಪ್ರವೇಶವಿರಲಿಲ್ಲ. ಆದರೆ ದೂರದಲ್ಲಿದ್ದರೂ ಸಾವಿರಾರು ಅಭಿಮಾನಿಗಳ ಜೈಕಾರ ಅಲ್ಲಿಗೆ ತಲುಪಿತ್ತು.

ಸಮಾಧಿಗೆ ಪೂಜೆ ಸಲ್ಲಿಸಿದ ಬಳಿಕ ನಟರಾದ ಶಿವರಾಜ್‌ಕುಮಾರ್ ಹಾಗೂ ಶ್ರೀಮುರಳಿ, ಸ್ಟುಡಿಯೊದ ಹೊರಭಾಗದಲ್ಲಿ ನೆರೆದಿದ್ದ ಅಭಿಮಾನಿಗಳಿಗೆ ಅನ್ನ ಸಂತರ್ಪಣೆ ಮಾಡಿದರು. ಅಪ್ಪು ಮೇಲಿನ ಪ್ರೀತಿಯಿಂದ ಸಮಾಧಿಗೆ ನಮನ ಸಲ್ಲಿಸಲು ಅಭಿಮಾನಿಗಳು ಸಾವಿರಾರು ಸಂಖ್ಯೆಯಲ್ಲಿ ಇನ್ನೂ ಹರಿದುಬರುತ್ತಿದ್ದರು.

ಪುನೀತ್ ಅವರ ಸಮಾಧಿಗೆ ಪೂಜೆ ಸಲ್ಲಿಸಿದ ಬಳಿಕ ಸದಾಶಿವ ನಗರದಲ್ಲಿರುವ ಮನೆಯಲ್ಲಿ ಪುನೀತ್ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು. ಭಾರವಾದ ಹೃದಯದಿಂದಲೇ ಶಿವರಾಜ್‌ಕುಮಾರ್ ಹಾಗೂ ರಾಘವೇಂದ್ರ ರಾಜ್‌ಕುಮಾರ್ ಎಲ್ಲರನ್ನೂ ಬರಮಾಡಿಕೊಂಡರು. ಚಿತ್ರರಂಗದ ದೊಡ್ಡಣ್ಣ, ದತ್ತಣ್ಣ, ದೇವರಾಜ್, ಅವಿನಾಶ್, ಉಪೇಂದ್ರ, ದರ್ಶನ್, ಗಣೇಶ್, ದುನಿಯಾ ವಿಜಯ್, ಅಜಯ್ ರಾವ್, ರವಿಶಂಕರ್, ರಕ್ಷಿತ್ ಶೆಟ್ಟಿ, ಧ್ರುವ ಸರ್ಜಾ, ಸುಧಾರಾಣಿ, ಮೇಘನಾ ರಾಜ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಸಚಿವರು ಪುನೀತ್ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು. ರಾಜ್‌ಕುಮಾರ್ ಹಾಗೂ ಪಾರ್ವತಮ್ಮ ರಾಜ್‌ಕುಮಾರ್ ಅವರ ಕುಟುಂಬದ ಸದಸ್ಯರು, ಊರಿನ ಸ್ನೇಹಿತರೂ ಇದ್ದರು. ಪುನೀತ್ ಅವರ ಮನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗೆ ಮೊದಲ ಪಂಕ್ತಿಯಲ್ಲೇ ಊಟ ಹಾಕಿದ ಕುಟುಂಬ ಸದಸ್ಯರು ದೊಡ್ಮನೆಯ ಗುಣವನ್ನು ಮತ್ತಷ್ಟು ಎತ್ತಿಹಿಡಿದರು.



ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ರಾಜ್‌ಕುಮಾರ್ ಅವರ ಸಮಾಧಿಗೆ ಪೂಜೆ ಸಲ್ಲಿಸಿದ ಕುಟುಂಬದ ಸದಸ್ಯರು –ಪ್ರಜಾವಾಣಿ ಚಿತ್ರ

ಅಪ್ಪುವಿಗೆ ನೆಚ್ಚಿನ ಖಾದ್ಯ

ಮಾಂಸದ ಖಾದ್ಯಗಳನ್ನು ಬಹಳ ಇಷ್ಟಪಡುತ್ತಿದ್ದ ಪುನೀತ್ ಅವರಿಗೆ ನೆಚ್ಚಿನ ಖಾದ್ಯಗಳು ತಯಾರಾಗಿದ್ದವು. ಸಮಾಧಿಯ ಮುಂದೆ ಅಪ್ಪುವಿನ ನೆಚ್ಚಿನ ಸಿಹಿ ತಿನಿಸುಗಳು, ತಟ್ಟೆ ಇಡ್ಲಿ, ಮುದ್ದೆ, ಮಟನ್ ಬಿರಿಯಾನಿ, ಕೈಮಾ ಉಂಡೆ, ಕಾಲ್‌ಸೂಪು, ಮಟನ್ ಕುರ್ಮ, ಕಬಾಬ್, ಬೇಯಿಸಿದ ಮೊಟ್ಟೆ ಸೇರಿದಂತೆ ಬಗೆಬಗೆಯ ಮಾಂಸದ ಖಾದ್ಯಗಳನ್ನು ತಯಾರಿಸಿ ಎಡೆ ಇಡಲಾಗಿತ್ತು.

ಭಾವುಕರಾದ ನಟ ಸಿದ್ಧಾರ್ಥ್

‘ಪುನೀತ್ ಅಮರ. ಅವರು ಓರ್ವ ಪ್ರತಿಭಾನ್ವಿತ, ಸರಳ ವ್ಯಕ್ತಿ. ಪ್ರತಿ ಬಾರಿಯೂ ಅವರನ್ನು ಭೇಟಿಯಾದಾಗ ನಮ್ಮನ್ನು ಅವರಲ್ಲಿ ಒಬ್ಬರಂತೆ ಕಾಣುತ್ತಿದ್ದರು. ಎಲ್ಲರನ್ನೂ ಹೊಗಳುತ್ತಿದ್ದರು. ಯಾರ ಬಗ್ಗೆಯೂ ಕೆಟ್ಟದಾಗಿ ಮಾತನಾಡುತ್ತಿರಲಿಲ್ಲ. ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸುತ್ತಿದ್ದ ಪುನೀತ್ ಅವರಂತೆ ಮತ್ತೊಬ್ಬರಿರಲು ಸಾಧ್ಯವಿಲ್ಲ’ ಎಂದ ತೆಲುಗು ನಟ ಸಿದ್ಧಾರ್ಥ್ ‘ರೆಸ್ಟ್ ಇನ್ ಪವರ್ ಅಪ್ಪು’ ಎನ್ನುತ್ತಾ ಭಾವುಕರಾಗಿ ಕಣ್ಣೀರು ಹಾಕಿದರು.

ಇದೇ 16ರ ಬಳಿಕ ಕುಟುಂಬದ ಜೊತೆ ಚರ್ಚೆ

ಪುನೀತ್ ಅವರ ನಿವಾಸಕ್ಕೆ ಭೇಟಿ ನೀಡಿ ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ‘ಪುನೀತ್ ಅಭಿಮಾನಿಗಳಿಗೆ ಅನ್ನಸಂತರ್ಪಣೆ ಕಾರ್ಯಕ್ರಮವಿದ್ದು, ಇದನ್ನು ಅಚ್ಚುಕಟ್ಟಾಗಿ ನಡೆಸಲು ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಅವರು ಸಿದ್ಧತೆ ನಡೆಸಿದ್ದಾರೆ. ಇದಕ್ಕೆ ಸರ್ಕಾರದ ಕಡೆಯಿಂದ ಆಗಬೇಕಾದ ಎಲ್ಲ ಸಹಕಾರ ನೀಡುತ್ತೇವೆ. ನ.16ರಂದು ಚಲನಚಿತ್ರ ವಾಣಿಜ್ಯ ಮಂಡಳಿಯು ‘ಪುನೀತ ನಮನ’ ಕಾರ್ಯಕ್ರಮ ನಡೆಸುತ್ತಿದ್ದು, ಇದಾದ ಬಳಿಕ ಕುಟುಂಬದ ಸದಸ್ಯರ ಜೊತೆಗೆ ಕುಳಿತು, ಅವರ ಅಭಿಲಾಷೆ ಏನಿದೆ? ಅಪ್ಪು ಸ್ಮರಣಾರ್ಥವಾಗಿ ನಡೆಸಬೇಕಾದ ಕಾರ್ಯಕ್ರಮಗಳೇನು? ಸರ್ಕಾರ ಏನು ಮಾಡಬೇಕು? ಬೇರೆ ಬೇರೆ ಕಡೆ ನಡೆಸುವ ಕಾರ್ಯಕ್ರಮದ ಕುರಿತು ಚರ್ಚಿಸುತ್ತೇನೆ’ ಎಂದರು.



ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ರಾಜ್‌ಕುಮಾರ್ ಅವರ ಸಮಾಧಿಗೆ ಪೂಜೆ ಸಲ್ಲಿಸಿದ ಪುನೀತ್ ಕುಟುಂಬದ ಸದಸ್ಯರು

‘ಅಪ್ಪು ಅಮರಶ್ರೀ’

ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರ ಪದ್ಮಶ್ರೀ ಪ್ರಶಸ್ತಿ ನೀಡಬೇಕು ಎನ್ನುವ ಕೂಗು ಅಭಿಮಾನಿಗಳಿಂದ ಹಾಗೂ ರಾಜಕೀಯ ಮುಖಂಡರಿಗೆ ಕೇಳಿಬರುತ್ತಿರುವ ಬೆನ್ನಲ್ಲೇ ಈ ಕುರಿತು ಪ್ರತಿಕ್ರಿಯೆ ನೀಡಿರುವ ನಟ ಶಿವರಾಜ್‌ಕುಮಾರ್, ‘ಪದ್ಮಶ್ರೀ ಅಲ್ಲ ಯಾವ ಶ್ರೀ ಕೊಟ್ಟರೂ ಅಪ್ಪು ಅಮರಶ್ರೀ. ಅದಕ್ಕಿಂತ ದೊಡ್ಡ ಪ್ರಶಸ್ತಿ ಬೇಕಾಗಿಲ್ಲ. ಅಪ್ಪು ಯಾವತ್ತಿದ್ದರೂ ಅಮರವಾಗಿರುತ್ತಾನೆ. ಪದ್ಮಶ್ರೀ ಅಥವಾ ಪದ್ಮವಿಭೂಷಣ, ಹೆಸರಿನ ಪಕ್ಕದಲ್ಲಿ ಇರುವ ಕೇವಲ ಒಂದು ಶೀರ್ಷಿಕೆಯಷ್ಟೇ. ಅಪ್ಪು ಎಲ್ಲರ ಆತ್ಮದಲ್ಲಿ ಶ್ರೀ ಆಗಿರುತ್ತಾನೆ’ ಎಂದಿದ್ದಾರೆ.

ಪುನೀತ್ ಸಮಾಧಿಗೆ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಿವರಾಜ್‌ಕುಮಾರ್, ‘ಅಪ್ಪುವನ್ನು ನೆನಸಿಕೊಂಡಾಗ ಪದಗಳೇ ಬರುವುದಿಲ್ಲ. ಅತ್ತು ದುಃಖ ಕಮ್ಮಿ ಮಾಡಿಕೊಳ್ಳಬಹುದು. ಆದರೆ ಈ ನೋವು ನಾನು ಜೀವಂತವಾಗಿರುವವರೆಗೂ ಇರುತ್ತದೆ. ಜೀವ ಹೋದ ಮೇಲೂ ಈ ನೋವು ಕಾಡಬಹುದು. ಅಂಥಹ ವ್ಯಕ್ತಿತ್ವ ಅಪ್ಪುವದ್ದು. ಚಿಕ್ಕವಯಸ್ಸಿನಿಂದಲೂ ನಾವೇ ಅವನನ್ನು ಆರಾಧಿಸಿದ್ದೇವೆ. ಅವನ ಬೆಳವಣಿಗೆಯನ್ನು ನೋಡಿ ಖುಷಿಪಟ್ಟವರು. ಇನ್ನು ಅಭಿಮಾನಿಗಳು ಇನ್ನೆಷ್ಟು ಆರಾಧಿಸಿರಬೇಡ. ಅಪ್ಪು ನಿಜವಾಗಲೂ ಸಂತೋಷದಿಂದ ಇರಬೇಕು ಎಂದರೆ ಅಭಿಮಾನಿಗಳು ಪ್ರಾಣ ಕಳೆದುಕೊಳ್ಳಬಾರದು. ಅವನ ಹೆಸರನ್ನು ಉಳಿಸಿಕೊಳ್ಳಲು ನೋಡಿ. ಅವನ ಜೀವ ಇನ್ನೂ ಅಮರವಾಗಿರಲಿ. ಅಪ್ಪು ದಾರಿಯನ್ನು ಮುಂದುವರಿಸಲು ನೋಡಿ. ನಿಮ್ಮ ಕೈಲಾದ ಸಹಾಯವನ್ನು ಮಾಡಿ’ ಎಂದರು.



ಕಂಠೀರವ ಸ್ಟುಡಿಯೊ ಹೊರಭಾಗದಲ್ಲಿ ಅಭಿಮಾನಿಗಳಿಗೆ ಅನ್ನಸಂತರ್ಪಣೆ ಮಾಡಿದ ಶಿವರಾಜ್‌ಕುಮಾರ್

11 ದಿನ ಕಳೆದರೂ ಇದನ್ನು ನಂಬಲಾಗುತ್ತಿಲ್ಲ. ನಗುಮುಖ ನೆನಪಿನಿಂದ ದೂರವಾಗುತ್ತಿಲ್ಲ. ಯುವನಾಯಕರನ್ನು ಕಳೆದುಕೊಳ್ಳುತ್ತಿದ್ದೇವೆ. ಇದು ದುಃಖದ ವಿಷಯ. ಅವರಿಗೆ ಯಾವ ಪದ್ಮಶ್ರೀಯೂ ಬೇಡ. ಅವರು ಅಮರಶ್ರೀ. ನಮ್ಮ ನೆನಪಿನಲ್ಲಿ ಅವರು ಸದಾ ಅಮರರಾಗಿರುತ್ತಾರೆ. –**ದೇವರಾಜ್**, ನಟ

ಈ ನೋವನ್ನು ಜೀರ್ಣಿಸಿಕೊಳ್ಳಲು ಆಗುತ್ತಿಲ್ಲ. ಪುತ್ರಶೋಕದಲ್ಲಿ ಇಡೀ ಕುಟುಂಬವಿದೆ. ರಕ್ತಸಂಬಂಧಿಗಳಿಗಷ್ಟೇ ಅಲ್ಲ ಇಡೀ ರಾಜ್ಯ ಪುತ್ರನನ್ನು ಕಳೆದುಕೊಂಡ ದುಃಖದಲ್ಲಿದೆ. ಜನರ ಪ್ರೀತಿ ನೋಡಲಾದರೂ ಅಪ್ಪು ಬದುಕಿಬರಬೇಕಿತ್ತು. ಅಪ್ಪು ಮತ್ತೆ ಕನ್ನಡಿಗನಾಗಿ ಹುಟ್ಟಲಿ. ಅಪ್ಪು ಜೊತೆ ‘ದ್ವಿತ್ವ’ ಚಿತ್ರದಲ್ಲಿ ನಟಿಸುವ ನನ್ನ ಕನಸು ಕನಸಾಗೇ ಉಳಿಯಿತು. –**ಶ್ರುತಿ**, ನಟಿ

ಪುನೀತ್ ರಾಜ್‌ಕುಮಾರ್ ಎಂಬ ವ್ಯಕ್ತಿಗೆ ಸಾವಿಲ್ಲ. ನಮ್ಮ ಹೃದಯದಲ್ಲಿ ಉಳಿದುಕೊಂಡಿದ್ದಾರೆ. ಅಪ್ಪು ಗಳಿಸಿರುವ ಪ್ರೀತಿ ನೋಡಲು ಮಾತುಗಳಿಲ್ಲ. ಸಮಾಧಿ ದರ್ಶನಕ್ಕೆ ಬರುತ್ತಿರುವ ಜನರೇ ಇದಕ್ಕೆ ಸಾಕ್ಷಿ. ಪುನೀತ್ ಅಮರ. –**ಸುಮಲತಾ ಅಂಬರೀಷ್**, ಸಂಸದೆ, ನಟಿ

ಕಂದಾ ಎಂದು ಕರೆದರೆ ಮಾಮಾ ಎಂದು ಓಡೋಡಿ ಬರುತ್ತಿದ್ದ. ಸಣ್ಣ ವಯಸ್ಸಿನಿಂದಲೂ ಹೀಗೆಯೇ ಇದ್ದ. ಅಪ್ಪಾಜಿ ಅಪ್ಪಿಕೊಂಡಾಗೇ ನೀವು ಅಪ್ಪಿಕೊಳ್ಳುತ್ತೀರಾ ಎನ್ನುತ್ತಿದ್ದ. ಅಪ್ಪು ತೋರಿಸಿಕೊಟ್ಟ ದಾರಿಯಲ್ಲಿ ಯುವಕರು ನಡೆಯಲಿ. –**ಶ್ರೀನಾಥ್**, ನಟ

ಈ ದುಃಖ ನಮ್ಮೆಲ್ಲರನ್ನೂ ಒಂದುಗೂಡಿಸಿದೆ. ಹೀಗಾಗಿ ಅಪ್ಪುವನ್ನು ಕಳೆದುಕೊಂಡೆವೋ, ಪಡೆದುಕೊಂಡೆವೋ ಎನ್ನುವ ಗೊಂದಲ ಇದೆ. ಆದರೆ ನಾವು ಅಪ್ಪುವನ್ನು ಕಳೆದುಕೊಂಡಿಲ್ಲ. ಸದಾಕಾಲ ಪಡೆದುಕೊಂಡಿದ್ದೇವೆ. –**ಟಿ.ಎಸ್.ನಾಗಾಭರಣ**, ನಿರ್ದೇಶಕ

ಇಡೀ ದೇಶದಲ್ಲಿ ಅಪ್ಪುವನ್ನು ಕೊಂಡಾಡುತ್ತಿದ್ದಾರೆ ಎಂದರೆ ಅವನ ವ್ಯಕ್ತಿತ್ವ ಅಂಥಹದು. ತಂದೆಗೆ ತಕ್ಕ ಮಗ ಅಪ್ಪು. ಆತನಿಗೆ ನಾನು ಅಣ್ಣ ಅನ್ನುವುದಕ್ಕಿಂತ ಮಿಗಿಲಾಗಿ ನನ್ನ ಮಗ ಅವನು. ನನ್ನ ಮಗನನ್ನೇ ಕಳೆದುಕೊಂಡಿದ್ದೇನೆ ಎನ್ನುವ ರೀತಿ ಆಗಿದೆ. ನನ್ನ ಬಲಗೈಯನ್ನೇ ಕಳೆದುಕೊಂಡಿದ್ದೇನೆ. ಮೊನ್ನೆ ತಾನೇ ಅಣ್ಣನ ಸಿನಿಮಾ ನಿರ್ದೇಶನ ಮಾಡುತ್ತೇನೆ ಎಂದಿದ್ದ ಅಪ್ಪು. ಇದನ್ನು ನೆನೆಸಿಕೊಂಡಾಗಲೇ ನೋವಾಗುತ್ತದೆ. –**ಶಿವರಾಜ್‌ಕುಮಾರ್**, ನಟ

ಹೇಗೆ ಬದುಕಿ ತೋರಿಸಬೇಕು ಎಂದು ಅಪ್ಪು ಅವರು ನಮಗೆ ನೀಡಿರುವ ಪಾಠದಿಂದ ಅವರು ನಮ್ಮ ಜೊತೆಗೆ ಯಾವತ್ತೂ ಇರುತ್ತಾರೆ. ಭೌತಿಕವಾಗಿ ನಮ್ಮ ಜೊತೆಗೆ ಇಲ್ಲ ಎನ್ನುವ ನೋವು ಇದ್ದೇ ಇರುತ್ತದೆ. –**ಧನಂಜಯ್**, ನಟ

ರಾಜ್ಯ ನಾಗರಿಕ ಸೇವಾ ಹುದ್ದೆಗಳ ನೇಮಕಾತಿಗೆ ಸಂಪುಟ ಸಭೆ ತೀರ್ಮಾನ

ನೇಮಕ, ಮುಂಬಡ್ತಿಗೆ ಹುದ್ದೆ ಆಧಾರಿತ ನೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು:ರಾಜ್ಯ ನಾಗರಿಕ ಸೇವಾ ಹುದ್ದೆಗಳ ನೇಮಕಾತಿ ಮತ್ತು ಮುಂಬಡ್ತಿಯಲ್ಲಿ ರಿಕ್ತ ಸ್ಥಾನ ಆಧರಿಸಿ ಭರ್ತಿ ಮಾಡುವ ಬದಲು, ಹುದ್ದೆ ಆಧಾರಿತ ನೀತಿಯನ್ನು ಜಾರಿ ಮಾಡಲು ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿದೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಈಗ ಹುದ್ದೆಗಳ ಸಂಖ್ಯೆ ಮತ್ತು ಖಾಲಿ ಹುದ್ದೆಗಳನ್ನು ಆಧರಿಸಿ ಭರ್ತಿ ಮಾಡಲಾಗುತ್ತಿದೆ. ಶೇ 50 ರಷ್ಟು ಹುದ್ದೆಗಳನ್ನು ಮುಂಬಡ್ತಿ ಮೂಲಕವೂ ಮತ್ತು ಶೇ 50 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುತ್ತಿದೆ. ಮಂಜೂರಾದ ಹುದ್ದೆಗಳ ಆಧಾರದಲ್ಲಿ ನೇಮಕ ಮಾಡುವ ಸಂದರ್ಭದಲ್ಲಿ ಗೊಂದಲ ಉಂಟಾಗುತ್ತಿದೆ ಎಂದು ಅವರು ತಿಳಿಸಿದರು.

ಇದೀಗ ರಾಷ್ಟ್ರೀಯ ಮಟ್ಟದಲ್ಲಿ ತೀರ್ಮಾನ ಮಾಡಿದಂತೆ ರಾಜ್ಯದಲ್ಲೂ ಒಟ್ಟು ಹುದ್ದೆಗಳನ್ನು ಆಧರಿಸಿ ಮುಂಬಡ್ತಿ ಎಷ್ಟು ಮತ್ತು ನೇರ ನೇಮಕಾತಿ ಎಷ್ಟು ಎಂಬುದನ್ನು ತೀರ್ಮಾನಿಸಲು ನೀತಿಯೊಂದನ್ನು ರೂಪಿಸಲಾಗಿದೆ ಎಂದು ಮಾಧುಸ್ವಾಮಿ ಹೇಳಿದರು.

ಸಂಪುಟ ಸಭೆಯ ಪ್ರಮುಖ ತೀರ್ಮಾನಗಳು:

- ದಕ್ಷಿಣಕನ್ನಡ, ಉಡುಪಿ, ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಗೆ ಕಿಂಡಿ ಅಣೆಕಟ್ಟು ನಿರ್ಮಿಸುವ ‘ಪಶ್ಚಿಮವಾಹಿನಿ’ ಯೋಜನೆಗೆ 2021–22 ನೇ ಸಾಲಿಗೆ ₹500 ಕೋಟಿ ಅನುದಾನ ನೀಡಲು ಆಡಳಿತಾತ್ಮಕ ಅನುಮೋದನೆ. ಈ ಯೋಜನೆಯಡಿ ₹3,986.25 ಕೋಟಿ ವೆಚ್ಚದಲ್ಲಿ 1348 ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸಲಾಗುವುದು.
- ಉಪ ಖನಿಜಗಳ ಗುತ್ತಿಗೆ ಅವಧಿ ಕುರಿತು ಕರ್ನಾಟಕ ಉಚ್ಚ ಖನಿಜ ರಿಯಾಯಿತಿ ತಿದ್ದುಪಡಿ ನಿಯಮಗಳು 2021 ಕ್ಕೆ ಅನುಮೋದನೆ.
- ಬಳ್ಳಾರಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನ ಕ್ರಿಯಾ ಯೋಜನೆ–6 ರ ಅಡಿ ಅನುಮೋದನೆಗೊಂಡಿರುವ ₹ 30 ಕೋಟಿ ಅಂದಾಜು ವೆಚ್ಚದಲ್ಲಿ ಹೊಸಪೇಟೆ– ಬಳ್ಳಾರಿ ರಸ್ತೆಯ ಎಚ್‌ಎಲ್‌ಸಿ ಕಾಲುವೆಯಿಂದ ಇಂಗಳಗಿ ಕ್ರಾಸ್‌ವರೆಗೆ ಚತುಷ್ಪಥ ರಸ್ತೆ ಕಾಮಗಾರಿಗೆ ಒಪ್ಪಿಗೆ. ಇದೇ ಟ್ರಸ್ಟ್‌ನ ಕ್ರಿಯಾ ಯೋಜನೆ ಬಳ್ಳಾರಿ–3 (ದಕ್ಷಿಣ) ಮುಂಡರಗಿ ಬಡಾವಣೆಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ₹12.75 ಕೋಟಿ ವೆಚ್ಚ ಕಾಮಗಾರಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ₹17.32 ಕೋಟಿ ಅಂದಾಜು ವೆಚ್ಚದ ಕಾಮಗಾರಿಗೆ ಒಪ್ಪಿಗೆ.
- ನೇಕಾರರ ಪ್ಯಾಕೇಜ್ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ ಘಟಕಗಳ ಸ್ಥಾಪನೆಗೆ ₹374.16 ಕೋಟಿ ಸಹಾಯಧನ ಒದಗಿಸುವ ಪರಿಷ್ಕೃತ ಯೋಜನೆಗೆ ಒಪ್ಪಿಗೆ.
- ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಡಿ 300 ಹಾಸಿಗಳ ಆಸ್ಪತ್ರೆಯನ್ನು 750 ಹಾಸಿಗೆಗಳ ಆಸ್ಪತ್ರೆಯಾಗಿ ಪರಿವರ್ತಿಸಲಾಗುವುದು. ಇದರಿಂದ ರಾಜ್ಯಕ್ಕೆ 50 ವೈದ್ಯಕೀಯ ಸೀಟುಗಳು ಹೆಚ್ಚುವರಿಯಾಗಿ ಸಿಗಲಿದೆ. 450 ಹಾಸಿಗೆಗಳ ಬೋಧಕ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ₹165.47 ಕೋಟಿ ಪರಿಷ್ಕೃತ ಅಂದಾಜಿಗೆ ಅನುಮತಿ.
- ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಕೆ.ಸೇಫ್–2 ಕ್ರಿಯಾ ಯೋಜನೆ ಅಂದಾಜು ₹399.84 ಕೋಟಿಗೆ ಒಪ್ಪಿಗೆ
- ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕು ಕನಕನಹಳ್ಳಿ ಗ್ರಾಮದ ಬಳಿ ಹರಿಯುವ ಹಳ್ಳಕ್ಕೆ ಸರಣಿ ಚೆಕ್‌ಡ್ಯಾಂ ನಿರ್ಮಾಣದ ಪರಿಷ್ಕೃತ ಅಂದಾಜು ₹11.34 ಕೋಟಿಗೆ ಆಡಳಿತಾತ್ಮಕ ಅನುಮೋದನೆ.
- ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಮುದೇನೂರು–ಬಲಕುಂದಿ ಗ್ರಾಮಗಳ ನಡುವೆ ವೇದಾವತಿ ನದಿಗೆ ಅಡ್ಡಲಾಗಿ ಸೇತುವೆ ಮತ್ತು ಬ್ಯಾರೇಜ್ ನಿರ್ಮಾಣ ಕಾಮಗಾರಿಗೆ ₹35 ಕೋಟಿಗೆ ಅನುಮೋದನೆ.
- ಹೆದ್ದಾರಿ ಅಭಿವೃದ್ಧಿ ಯೋಜನೆಯ ₹1891.90 ಕೋಟಿ ಪರಿಷ್ಕೃತ ಯೋಜನಾ ಮೊತ್ತಕ್ಕೆ ಅನುಮತಿ.
- ದಾವಣಗೆರೆ– ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಾಂಡೋಮಟ್ಟಿಯಲ್ಲಿ ಬಸವ ವಿದ್ಯಾಪೀಠ ವಿರಕ್ತಮಠಕ್ಕೆ ಹಂಚಿಕೆಯಾದ ನಾಗರಿಕ ಸೌಲಭ್ಯ ನಿವೇಶನದ ಗುತ್ತಿಗೆ ಮೊತ್ತ ಕಡಿಮೆ ಮಾಡಲು ನಿರ್ಧಾರ.

ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ

ವಿಧಾನಮಂಡಲದ ಚಳಿಗಾಲದ ಅಧಿವೇಶನವನ್ನು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಆದರೆ, ದಿನಾಂಕವನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗುವುದು ಎಂದು ಮಾಧುಸ್ವಾಮಿ ತಿಳಿಸಿದರು.

ಅಧಿವೇಶನ ಬಹುತೇಕ ಡಿ.13 ರಿಂದ 24 ರವರೆಗೆ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

‘7 ಜಿಲ್ಲೆಗಳು ಕಿತ್ತೂರು ಕರ್ನಾಟಕ’

ಉತ್ತರಕನ್ನಡ, ಬೆಳಗಾವಿ, ಧಾರವಾಡ, ವಿಜಯಪುರ, ಬಾಗಲಕೋಟೆ, ಗದಗ ಮತ್ತು ಹಾವೇರಿ ಜಿಲ್ಲೆಗಳನ್ನು ‘ಕಿತ್ತೂರು ಕರ್ನಾಟಕ’ ಎಂದು ನಾಮಕರಣ ಮಾಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಈ ಹಿಂದೆ ಈ ಜಿಲ್ಲೆಗಳನ್ನು ‘ಮುಂಬೈ ಕರ್ನಾಟಕ’ ಎಂದು ಕರೆಯಲಾಗುತ್ತಿತ್ತು.

ಅಗ್ಗದ ದರದಲ್ಲಿ ಮರಳು

ಒಂದನೇ ಪುಟದಿಂದ

- ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ‘ಮರಳು ಸಮಿತಿ’ಗಳ ರಚನೆ.
- ಮರಳು ಗಣಿಗಾರಿಕೆ ಮತ್ತು ಸಾಗಣೆಯ ಉಸ್ತುವಾರಿಯನ್ನು ಈ ಸಮಿತಿಗಳು ಮೇಲುಸ್ತುವಾರಿ ವಹಿಸಲಿವೆ. ಯಾವುದೇ ನಿಯಮಗಳ ಉಲ್ಲಂಘನೆ ಮಾಡಿದಲ್ಲಿ ದಂಡಿಸುವ ಅಧಿಕಾರ ನೀಡಲಾಗಿದೆ.
- ಸ್ವಂತ ಬಳಕೆಗಾಗಿ ಟ್ರ್ಯಾಕ್ಟರ್, ಎತ್ತಿನ ಬಂಡಿ, ದ್ವಿಚಕ್ರವಾಹನಗಳಲ್ಲಿ ಮರಳು ಸಾಗಣೆ ಮಾಡಿದರೆ ಪ್ರಕರಣ ದಾಖಲಿಸುವುದಿಲ್ಲ. ಆದರೆ, ಬೇರೆ ಜಿಲ್ಲೆಗಳಿಗೆ ಸಾಗಣೆ ಮಾಡುವಂತಿಲ್ಲ. ಒಂದು ವೇಳೆ ಸಾಗಣಿಕೆ ಮಾಡಿದರೆ ಪ್ರಕರಣ ದಾಖಲಿಸಲಾಗುವುದು.
- ದ್ವಿಚಕ್ರ ವಾಹನ, ಎತ್ತಿನಗಾಡಿ, ಟ್ರ್ಯಾಕ್ಟರ್, ಕತ್ತೆ ಮೇಲೆ ಮರಳು ಕೊಂಡೊಯ್ಯುವ ರೈತರು ಮತ್ತು ಬಡವರಿಗೆ ರಾಯಧನದ ವಿನಾಯಿತಿ ನೀಡಲಾಗುವುದು.
- ಪಟ್ಟಾ ಭೂಮಿಯಲ್ಲಿ ಮರಳು ಗಣಿಗಾರಿಕೆ ನಿಷೇಧಿಸಲಾಗಿದ್ದರೂ, ಜಿಲ್ಲಾ ಮತ್ತು ತಾಲ್ಲೂಕು ಮರಳು ಸಮಿತಿಗಳಿಂದ ಅನುಮತಿ ಪಡೆಯುವುದು ಕಡ್ಡಾಯ. ಇದಕ್ಕೆ ಸಮಿತಿಗಳು ಸಮಜಾಯಿಷಿ ನೀಡಬೇಕು.
- ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯು ಗಣಿಗಾರಿಕೆ ಸಂಬಂಧ ಹೊರಡಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

ಹಟ ಸಾಧಿಸಿದ ಆರೋಗ್ಯ ಸಚಿವ ಸುಧಾಕರ್

ಕಾಂಗ್ರೆಸ್ ವಿರೋಧದ ಮಧ್ಯೆಯೂ ಕೊಚಿಮುಲ್ ವಿಭಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಕಷ್ಟು ವಿರೋಧದ ಮಧ್ಯೆಯೂ ಕೋಲಾರ– ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವನ್ನು (ಕೊಚಿಮುಲ್) ಬೇರ್ಪಡಿಸಿ, ಚಿಕ್ಕಬಳ್ಳಾಪುರಕ್ಕೆ ಪ್ರತ್ಯೇಕ ಹಾಲು ಒಕ್ಕೂಟ ಸ್ಥಾಪನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರ ಒತ್ತಾಯದ ಮೇರೆಗೆ ಚಿಕ್ಕಬಳ್ಳಾಪುರಕ್ಕೆ ಪ್ರತ್ಯೇಕ ಒಕ್ಕೂಟ ನೀಡಲು ಸಚಿವ ಸಂಪುಟ ಸೋಮವಾರ ಒಪ್ಪಿಗೆ ನೀಡಿತು.

ಕೊಚಿಮುಲ್ ಪ್ರತ್ಯೇಕಿಸುವ ಸುಧಾಕರ್ ಅವರ ಪ್ರಸ್ತಾವನೆಗೆ ಕೋಲಾರ ಜಿಲ್ಲೆಯ ಕಾಂಗ್ರೆಸ್ ಶಾಸಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಇದು ಬಿಜೆಪಿ–ಕಾಂಗ್ರೆಸ್ ನಾಯಕರ ಮಧ್ಯದ ವಾಕ್ಸಮರ, ಆರೋಪ– ಪ್ರತ್ಯಾರೋಪಕ್ಕೂ ಕಾರಣವಾಗಿತ್ತು. ಕೊನೆಗೂ ತಮ್ಮ ಹಟವನ್ನು ಸಾಧಿಸಿ, ಪ್ರತ್ಯೇಕ ಒಕ್ಕೂಟ ಸ್ಥಾಪಿಸುವಲ್ಲಿ ಸುಧಾಕರ್ ಯಶಸ್ವಿಯಾಗಿದ್ದಾರೆ.

‘ಚಿಕ್ಕಬಳ್ಳಾಪುರ ಪ್ರತ್ಯೇಕ ಜಿಲ್ಲೆಯಾಗಿ 14 ವರ್ಷಗಳು ಕಳೆದರೂ ಕೊಚಿಮುಲ್ ಪ್ರತ್ಯೇಕವಾಗಿರಲಿಲ್ಲ. ರೈತರು ಹಾಗೂ ಹಾಲು ಉತ್ಪಾದಕರು ಯಾವುದೇ ಸಮಸ್ಯೆಗಳಿದ್ದರೂ ಕೋಲಾರಕ್ಕೆ ಪ್ರಯಾಣಿಸಬೇಕಿತ್ತು. ಚಿಕ್ಕಬಳ್ಳಾಪುರ ಪ್ರತ್ಯೇಕ ಜಿಲ್ಲೆಯಾಗಿರುವುದರಿಂದ ಪ್ರತ್ಯೇಕವಾದ ಒಕ್ಕೂಟ, ಆಡಳಿತ ಮಂಡಳಿ ಅಗತ್ಯವಿತ್ತು. ಇದಕ್ಕಾಗಿ ಕೊಚಿಮುಲ್ ವಿಭಜಿಸಬೇಕಾಗಿತ್ತು’ ಎಂದು ಸುಧಾಕರ್ ಅವರು ಪ್ರತಿಕ್ರಿಯಿಸಿದ್ದಾರೆ.

‘ಕೊಚಿಮುಲ್ ಷೇರುಗಳಲ್ಲಿ ₹35 ಕೋಟಿ ಮೊತ್ತ ಚಿಕ್ಕಬಳ್ಳಾಪುರಕ್ಕೆ ಸೇರುತ್ತದೆ. ₹15 ಕೋಟಿ ಅಧಿಕ ಮೊತ್ತ ಅಭಿವೃದ್ಧಿ ನಿಧಿ ಇದೆ. ಮೀಸಲು ನಿಧಿಯಲ್ಲೂ ಚಿಕ್ಕಬಳ್ಳಾಪುರಕ್ಕೆ ಪ್ರತ್ಯೇಕ ಪಾಲು ಇದೆ. ಎರಡು ಲಕ್ಷ ಲೀಟರ್ ಹಾಲು ಉತ್ಪಾದಿಸುವ ಚಾಮರಾಜನಗರ ಹಾಗೂ 50 ಸಾವಿರ ಲೀಟರ್ ಹಾಲು ಉತ್ಪಾದಿಸುವ ಬೀದರ್, ಕಲಬುರಗಿ ಜಿಲ್ಲೆಗಳಿಗೆ ಪ್ರತ್ಯೇಕ ಹಾಲು ಒಕ್ಕೂಟಗಳಿವೆ. ಇದನ್ನು ಉದಾಹರಣೆಯಾಗಿ ಪರಿಗಣಿಸಿದರೆ ಚಿಕ್ಕಬಳ್ಳಾಪುರ ಕೂಡ ಪ್ರತ್ಯೇಕ ಒಕ್ಕೂಟ ಹೊಂದುವುದು ನ್ಯಾಯಯುತ ಬೇಡಿಕೆಯಾಗಿತ್ತು. ಆಡಳಿತದ ಮತ್ತು ರೈತರ ಹಿತದೃಷ್ಟಿಯಿಂದ ಸೂಕ್ತವೂ ಆಗಿತ್ತು. ಬೇಸಿಗೆಯಲ್ಲೂ ಜಿಲ್ಲೆಯಲ್ಲಿ 3.50 ಲಕ್ಷ ಹಾಲು ಉತ್ಪಾದನೆ ಆಗುತ್ತದೆ. ಪ್ರತ್ಯೇಕ ಒಕ್ಕೂಟ ಮಾಡುವುದರಿಂದ ಯಾವುದೇ ಸಮಸ್ಯೆಯೇ ಇಲ್ಲ’ ಎಂದು ಸುಧಾಕರ್ ಹೇಳಿದರು.

ಕೋಲಾರಕ್ಕೆ ಅನ್ಯಾಯ



ಕೆ.ವೈ. ನಂಜೇಗೌಡ

ಒಕ್ಕೂಟ ವಿಭಜನೆ ಮಾಡಿರುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಒಕ್ಕೂಟದ ವಿಭಜನೆಗೂ ಮುನ್ನ ಕೋಲಾರದಲ್ಲಿ ಎಂವಿಕೆ ಗೋಲ್ಡನ್ ಡೇರಿ ಮಾಡುವಂತೆ ಮುಖ್ಯಮಂತ್ರಿಗಳಿಗೆ ಜಿಲ್ಲೆಯ ಜನಪ್ರತಿನಿಧಿಗಳೆಲ್ಲಾ ಒತ್ತಾಯಿಸಿದ್ದೆವು. ಇದಕ್ಕೆ ಮುಖ್ಯಮಂತ್ರಿಗಳು ಒಪ್ಪಿದ್ದರು. ಆದರೆ, ಮುಖ್ಯಮಂತ್ರಿಗಳು ಯಾವುದೋ ಒತ್ತಡಕ್ಕೆ ಮಣಿದು ಸಂಪುಟ ಸಭೆಯಲ್ಲಿ ಒಕ್ಕೂಟದ ವಿಭಜನೆಗೆ ಸಮ್ಮತಿಸಿದ್ದಾರೆ. ಈ ಸರ್ಕಾರ ಕೋಲಾರ ಜಿಲ್ಲೆಗೆ ಅನ್ಯಾಯ ಮಾಡಿದೆ ಮತ್ತು ಎಂ.ವಿ.ಕೃಷ್ಣಪ್ಪ ಅವರಿಗೆ ಅಗೌರವ ತೋರಿದೆ.

ಕೆ.ವೈ.ನಂಜೇಗೌಡ, ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ಕೋಚಿಮುಲ್) ಅಧ್ಯಕ್ಷರು ಹಾಗೂ ಮಾಲೂರು ಶಾಸಕರು

ಬೊಮ್ಮಾಯಿ ತವರು ಜಿಲ್ಲೆಗೂ ಒಕ್ಕೂಟ

ಬೆಂಗಳೂರು:ಧಾರವಾಡ ಹಾಲು ಒಕ್ಕೂಟದಿಂದ ಹಾವೇರಿ ಜಿಲ್ಲೆಯನ್ನು ಬೇರ್ಪಡಿಸಿ, ಹಾವೇರಿಗೆ ಪ್ರತ್ಯೇಕ ಹಾಲು ಒಕ್ಕೂಟ ನೀಡಲು ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಹಾವೇರಿ ಮುಖ್ಯಮಂತ್ರಿಯವರ ತವರು ಜಿಲ್ಲೆಯಾಗಿರುವುದರಿಂದ ಪ್ರತ್ಯೇಕ ಹಾಲು ಒಕ್ಕೂಟ ನೀಡಲಾಗಿದೆ ಎಂದು ವ್ಯಾಖ್ಯಾನಿಸಲಾಗಿದೆ.

ಇದೇ 11ರವರೆಗೆ ಮಳೆ ತಗ್ಗುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಕ್ಷ ದ್ವೀಪದಲ್ಲಿ ಉಂಟಾಗಿದ್ದ ವಾಯುಭಾರ ಕುಸಿತದ ಪ್ರಬಲತೆ ಕಡಿಮೆಯಾಗಿರುವುದರಿಂದ ರಾಜ್ಯದಲ್ಲಿ ನ.11ರವರೆಗೆ ಮಳೆ ತಗ್ಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ವಾಯುಭಾರ ಕುಸಿತ ಪ್ರಬಲವಾಗಿದ್ದರಿಂದ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಕಳೆದ ಎರಡು ದಿನಗಳು ಹೆಚ್ಚು ಮಳೆಯಾಗಿತ್ತು. ಅದರ ಪ್ರಭಾವ ತಗ್ಗಿರುವುದರಿಂದ ಮಳೆ ತುಸು ಬಿಡುವು ಪಡೆದುಕೊಳ್ಳಲಿದೆ’ ಎಂದು ಹವಾಮಾನ ತಜ್ಞ ಸದಾನಂದ ಅಡಿಗ ವಿವರಿಸಿದರು.

‘ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದ ಮುನ್ಸೂಚನೆಗಳು ಕಂಡುಬಂದಿವೆ. ಇದು ತಮಿಳುನಾಡು ಕರಾವಳಿಗೂ ವ್ಯಾಪಿಸುವುದರಿಂದ ರಾಜ್ಯದ ದಕ್ಷಿಣ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ನ.11ರಿಂದ ಮತ್ತೆ ಹೆಚ್ಚಾಗಬಹುದು’ ಎಂದರು.

‘ಎರಡು ದಿನಗಳಿಂದ ಗರಿಷ್ಠ ತಾಪಮಾನದ ಪ್ರಮಾಣವೂ ಕುಸಿತ ಕಂಡಿದ್ದು, ಸರಾಸರಿ 25 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುತ್ತಿದೆ. ಇದರಿಂದ ವಾತಾವರಣ ಸಂಪೂರ್ಣವಾಗಿ ಬದಲಾಗಿದೆ. ಜಿಟಿಜಿಟಿ ಮಳೆ, ಮೋಡ ಕವಿದ ವಾತಾವರಣದಿಂದ ಬಿಸಿಲು ಮರೆಯಾಗಿದೆ. ಮುಂದಿನ ಎರಡು ದಿನಗಳವರೆಗೆ ಬೆಂಗಳೂರು ಸೇರಿದಂತೆ ಬಹುತೇಕ ಜಿಲ್ಲೆಗಳಲ್ಲಿ ಇದೇ ರೀತಿಯ ವಾತಾವರಣ ಇರಲಿದೆ’ ಎಂದು ಮಾಹಿತಿ ನೀಡಿದರು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಹೆಚ್ಚು ಮಳೆಯಾಗುವ ಸಾಧ್ಯತೆ ಇರುವುದರಿಂದ 11ರಂದು ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಒಣಹವೆ ಮುಂದುವರಿದಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	10,570	10,449
ಹಾರಂಗಿ	2,859	2,857.44	1,461	800
ಕಬಿನಿ	2,284	2,283.85	1,930	700
ಹೇಮಾವತಿ	2,922	2,909.31	3,602	3,556
ಲಿಂಗನಮಕ್ಕಿ	1,819	1,814.15	2,571	-
ಸೂಪಾ (ಮೀ)	564	555.80	476.30	3,546.33
ಮಾಣಿ	594.36	586.88	138	-
ತುಂಗಭದ್ರಾ	1,633	1,632.43	11,445	9,431
ಮಲಪ್ರಭಾ	2,079.50	2,077.41	-	2,144
ಘಟಪ್ರಭಾ	2,175	2,170.30	-	2,924
ಭದ್ರಾ	186	185.40	2,354	3,558
ಆಲಮಟ್ಟಿ (ಮೀ)	519.60	518.78	-	1,805
ನಾರಾಯಣಪುರ (ಮೀ)	492.25	491.30	738	2,511

*ನೆಲಮಟ್ಟದಿಂದ

ಮಹಿಳಾ ವಿವಿ: ವೈದೇಹಿ ಸೇರಿ ಮೂವರಿಗೆ ಗೌರವ ಡಾಕ್ಟರೇಟ್

ವಿಜಯಪುರ: ಇಲ್ಲಿಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಮಂಗಳವಾರ (ನ.9) ನಡೆಯುವ ಘಟಿಕೋತ್ಸವದಲ್ಲಿ ಲೇಖಕಿ ವೈದೇಹಿ ಸೇರಿದಂತೆ ಮೂವರು ಸಾಧಕರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದು ವಿ.ವಿ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲಾ ಹೇಳಿದರು.

‘ವೈದೇಹಿ’ ಕಾವ್ಯನಾಮದಿಂದ ಖ್ಯಾತರಾಗಿರುವ ಮಣಿಪಾಲದ ಜಾನಕಿ ಶ್ರೀನಿವಾಸ ಮೂರ್ತಿ (ಸಾಹಿತ್ಯ), ಬೆಂಗಳೂರಿನ ಡಾ.ಸುಮಾ ಸುಧೀಂದ್ರ (ಸಂಗೀತ) ಮತ್ತು ಮುಂಬೈನ ಕಲ್ಪನಾ ಸರೋಜ್ (ಉದ್ಯಮಶೀಲತೆ–ಮಹಿಳಾ ಸಬಲೀಕರಣ) ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರದಾನ ಮಾಡಲಿದ್ದಾರೆ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಗರಿಷ್ಠ ಅಂಕಗಳನ್ನು ಗಳಿಸಿ ತೇರ್ಗಡೆಯಾದ 76 ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳ ವಿತರಣೆ, 48 ವಿದ್ಯಾರ್ಥಿನಿಯರಿಗೆ ಪಿಎಚ್‌.ಡಿ ಪದವಿ ಪ್ರದಾನ ಮಾಡಲಾಗುವುದು. 11,208 ವಿದ್ಯಾರ್ಥಿನಿಯರು ಪದವಿ ಪಡೆಯಲು ಅರ್ಹರಾಗಿದ್ದಾರೆ ಎಂದು ಮಾಹಿತಿ ನೀಡಿದರು.



ವೈದೇಹಿ



ಸುಮಾ ಸುಧೀಂದ್ರ



ಕಲ್ಪನಾ ಸರೋಜ್

‘2ಎ ಮೀಸಲಾತಿಗೆ ಪಂಚಮಸಾಲಿ ಕೀಚಕರೇ ಅಡ್ಡಿ’

ಕುಷ್ಟಗಿ (ಕೊಪ್ಪಳ ಜಿಲ್ಲೆ): ‘ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ದೊರೆಯದಂತೆ ಮಾಡಲು ರಾಜ್ಯ ಸರ್ಕಾರದ ಭಾಗವಾಗಿರುವ ನಮ್ಮ ಸಮುದಾಯದ ಕೆಲ ಕೀಚಕರೂ ಕಾಲೆಳೆಯುವವರ ಜತೆ ಸೇರಿಕೊಂಡಿದ್ದಾರೆ’ ಎಂದು ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಆರೋಪಿಸಿದರು.

ತಾಲ್ಲೂಕಿನ ಕಡೆಕೊಪ್ಪ ಗ್ರಾಮದಲ್ಲಿ ನಡೆದ ಕಿತ್ತೂರ ರಾಣಿ ಚನ್ನಮ್ಮ ಜಯಂತ್ಯುತ್ಸವದಲ್ಲಿ ಮಾತನಾಡಿದ ಅವರು, ‘ಹೋರಾಟವನ್ನು ಹತ್ತಿಕ್ಕಲು ಅನೇಕರು ಪ್ರಯತ್ನಿಸುತ್ತಿದ್ದಾರೆ. ಅವರಲ್ಲಿ ನಮ್ಮವರೂ ಸೇರಿರುವುದು ದುರದೃಷ್ಟಕರ’ ಎಂದರು.

ಭತ್ತದ ಬೋರೇಗೌಡರಿಗೆ ಪ್ರಶಸ್ತಿ



ಮಂಡ್ಯ: ಸಸ್ಯ ತಳಿ ಸಂರಕ್ಷಣೆಗೆಂದು ನವದೆಹಲಿಯ ರೈತರ ಹಕ್ಕುಗಳ ಪ್ರಾಧಿಕಾರ ನೀಡುವ 'ಪ್ಲಾಂಟ್ ಜೀನೊಮ್ ಸಾವಿಯರ್ ಅವಾರ್ಡ್'ಗೆ ತಾಲ್ಲೂಕಿನ ಶಿವಳ್ಳಿಯ ಬೋರೇಗೌಡ (ಭತ್ತದ ಬೋರೇಗೌಡ) ಭಾಜನರಾಗಿದ್ದಾರೆ.

ಸ್ಥಳೀಯ ಬೀಜ ವೈವಿಧ್ಯವನ್ನು ಸಂರಕ್ಷಿಸಲು ಶ್ರಮಿಸುವ ಬೀಜ ಸಂರಕ್ಷಕರು ಮತ್ತು ಸಮುದಾಯ ಸಂಘಟನೆಗಳಿಗೆ ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿಯು ₹ 1 ಲಕ್ಷ, ಪ್ರಮಾಣ ಪತ್ರ ಒಳಗೊಂಡಿದೆ.

ರತ್ನ ಚೂಡಿ, ಸೇಲಂಸಣ್ಣ, ಚಿನ್ನಪನ್ನಿ, ಸಿದ್ದಸಣ್ಣ, ರಾಜಮುಡಿ, ರಾಜಭೋಗ, ನವರ, ಕಾಗೆಸಾಳಿ, ಅಂಬೇ ಮೋಹರ್ ಸೇರಿದಂತೆ 210 ಭತ್ತದ ತಳಿ ಸಂರಕ್ಷಣೆ ಮಾಡಿರುವ ಬೋರೇಗೌಡ ಅವರು, ಇದೇ 11 ರಂದು ದೆಹಲಿಯ ಪುಸಾದ ಎ.ಪಿ. ಶಿಂದೆ ಸಿಂಪೋಸಿಯಮ್ ಕಾಂಪ್ಲೆಕ್ಸ್ ಆವರಣದಲ್ಲಿ ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಬರಿಗಾಲಲ್ಲಿ ರಾಷ್ಟ್ರಪತಿ ಭವನಕ್ಕೆ ಬಂದ ಹರೇಕಳ ಹಾಜಬ್ಬ • ಪೇಜಾವರ ಶ್ರೀಗಳಿಗೆ ಪದ್ಮವಿಭೂಷಣ ಪ್ರದಾನ

ತುಳಸಿಗೌಡ, ಸಂಕೇಶ್ವರ, ಡಾ.ಗಂಗಾಧರ್‌ಗೆ 'ಪದ್ಮಶ್ರೀ'



ನವದೆಹಲಿಯಲ್ಲಿ ಸೋಮವಾರ ನಡೆದ ಪದ್ಮಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ (ವಿಶ್ವೇಶ ತೀರ್ಥ ಶ್ರೀಗಳಿಗೆ ಮರಣೋತ್ತರ ಪದ್ಮವಿಭೂಷಣ) , ತುಳಸಿ ಗೌಡ, ಡಾ.ಬಿ.ಎನ್‌.ಗಂಗಾಧರ, ವಿಜಯ ಸಂಕೇಶ್ವರ, ಕೆ.ಎಸ್‌. ಜಯಲಕ್ಷ್ಮಿ, ಹಾಗೂ ಹರೇಕಳ ಹಾಜಬ್ಬ ಅವರು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಂದ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದರು

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹನೀಯರಿಗೆ ನೀಡಲಾಗುವ 2020ನೇ ಸಾಲಿನ ಅತ್ಯುನ್ನತ ನಾಗರಿಕ ಗೌರವವಾದ 'ಪದ್ಮ' ಪ್ರಶಸ್ತಿಗಳನ್ನು ಸೋಮವಾರ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಪ್ರದಾನ ಮಾಡಿದರು.

ಉಡುಪಿಯ ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮೀಜಿ ಅವರಿಗೆ ಮರಣೋತ್ತರವಾಗಿ ನೀಡಲಾದ 'ಪದ್ಮವಿಭೂಷಣ' ಪ್ರಶಸ್ತಿಯನ್ನು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸ್ವೀಕರಿಸಿದರು. ಶ್ರೀಗಳು ಪಾದುಕೆಗಳನ್ನು ಬಿಚ್ಚಿಟ್ಟು ಪ್ರಶಸ್ತಿ ಸ್ವೀಕರಿಸಿದರು.

ರಾಜಕಾರಣಿಗಳಾದ ಜಾರ್ಜ್ ಫರ್ನಾಂಡಿಸ್, ಅರುಣ್ ಜೇಟ್ಲಿ ಹಾಗೂ ಸುಷ್ಮಾ ಸ್ವರಾಜ್ ಅವರನ್ನೂ ಅತ್ಯುತ್ತಮ ಸೇವೆಗಾಗಿ 'ಪದ್ಮವಿಭೂಷಣ' (ಮರಣೋತ್ತರ) ಪ್ರಶಸ್ತಿಯಿಂದ ಗೌರವಿಸಲಾಯಿತು.

ಒಲಿಂಪಿಕ್ ಪದಕ ವಿಜೇತ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು (ಪದ್ಮಭೂಷಣ), ಬಾಲಿವುಡ್ ನಟಿ ಕಂಗನಾ ರನೌತ್ (ಪದ್ಮಶ್ರೀ) ಮತ್ತಿತರರು ಪ್ರಶಸ್ತಿ ಸ್ವೀಕರಿಸಿದ ಪ್ರಮುಖರು.

ಕಿತ್ತಳೆ ಹಣ್ಣು ಮಾರಾಟ ಮಾಡಿ ಗಳಿಸಿದ ಹಣದಲ್ಲಿ ಶಾಲೆ ಆರಂಭಿಸುವ ಮೂಲಕ ಶಿಕ್ಷಣದ ಮಹತ್ವ ಸಾರಿ 'ಅಕ್ಷರ ಸಂತ' ಎಂದೇ ಹೆಸರಾಗಿರುವ ಹರೇಕಳ ಪೊಸಪಡ್ಪು ಗ್ರಾಮದ ಹರೇಕಳ ಹಾಜಬ್ಬ ಅವರು ಬರಿಗಾಲಲ್ಲಿ ತೆರಳಿ 'ಪದ್ಮಶ್ರೀ' ಪ್ರಶಸ್ತಿ ಸ್ವೀಕರಿಸಿದರು.

'ನಮ್ಮೂರಲ್ಲಿ ಶಾಲೆ ನಿರ್ಮಿಸಲು ಹಣಕಾಸಿನ ನೆರವು ನೀಡಿದ ಪ್ರತಿಯೊಬ್ಬರಿಗೂ ಈ ಪ್ರಶಸ್ತಿಯ ಗೌರವ ಸಲ್ಲಬೇಕು. ಅದೇ ರೀತಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಊರಲ್ಲಿ ಪದವಿಪೂರ್ವ ಕಾಲೇಜನ್ನೂ ಆರಂಭಿಸುವ ಕನಸಿದೆ. ಆ ಕನಸನ್ನು ನನಸಾಗಿಸಲು ಕೋಟ್ಯಂತರ ರೂಪಾಯಿ ಬೇಕಿದೆ. ಸರ್ಕಾರ ಹಾಗೂ ಜನರು ಅದಕ್ಕೂ ನೆರವು ನೀಡಲಿದ್ದಾರೆ' ಎಂದು ಪ್ರಶಸ್ತಿ ಸ್ವೀಕರಿಸಿದ ನಂತರ ಅವರು 'ಪ್ರಜಾವಾಣಿ' ಎದುರು ಆಶಾಭಾವ ವ್ಯಕ್ತಪಡಿಸಿದರು.

ರಾಜ್ಯದಲ್ಲಿನ ಸರ್ಕಾರಿ ಶಾಲೆಗಳು ಯಾವುದೇ ಖಾಸಗಿ ಶಾಲೆಗಳಿಗೆ ಕಡಿಮೆ ಇಲ್ಲ. ಮೇಧಾವಿ ಶಿಕ್ಷಕರು ಗುಣಮಟ್ಟದ ಶಿಕ್ಷಣ ದೊರೆಯಲು ಕಾರಣರಾಗಿದ್ದಾರೆ. ವಿದ್ಯಾರ್ಥಿಗಳು ಖಾಸಗಿ ಶಾಲೆಯ ಬದಲು ಸರ್ಕಾರಿ ಶಾಲೆಯಲ್ಲೇ ಓದಬೇಕು ಎಂದು ಅವರು ಮನವಿ ಮಾಡಿದರು.

ಲಕ್ಷಕ್ಕೂ ಅಧಿಕ ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವ ಸಾರಿರುವ ಉತ್ತರ ಕನ್ನಡ ಜಿಲ್ಲೆಯ ಹೊನ್ನಳ್ಳಿ ಗ್ರಾಮದ ಹಾಲಕ್ಕಿ ಸಮುದಾಯದ ತುಳಸಿ ಗೌಡ, ಉದ್ಯಮಿ, ಸಾರಿಗೆ ಮತ್ತು ಮಾಧ್ಯಮ ಕ್ಷೇತ್ರದಲ್ಲಿನ ಸಾಧನೆಗಾಗಿ ಗದುಗಿನ ವಿಜಯ ಸಂಕೇಶ್ವರ, (ಸಂಸ್ಕೃತ ಪತ್ರಿಕೆ 'ಸುಧರ್ಮ' ಸಂಸ್ಥಾಪಕರಾದ ಕೆ.ವಿ. ಸಂಪತ್‌ಕುಮಾರ್ (ಮರಣೋತ್ತರ) ಹಾಗೂ ಅವರ ಪತ್ನಿ, ವಿದೂಷಿ ಕೆ.ಎಸ್. ಜಯಲಕ್ಷ್ಮಿ , ವೈದ್ಯಕೀಯ ಕ್ಷೇತ್ರದ ಡಾ.ಬಿ.ಎನ್. ಗಂಗಾಧರ (ನಿಮ್ಹಾನ್ಸ್) ಅವರೂ 'ಪದ್ಮಶ್ರೀ' ಸ್ವೀಕರಿಸಿದರು.

2020ನೇ ಸಾಲಿನ 'ಪದ್ಮ' ಪ್ರಶಸ್ತಿಯನ್ನು ಕೋವಿಡ್ ಕಾರಣ ಈ ವರ್ಷ ಪ್ರದಾನ ಮಾಡಲಾಗಿದ್ದು, 2021ನೇ ಸಾಲಿನ ಪ್ರಶಸ್ತಿಗಳನ್ನು ಮಂಗಳವಾರ ಪ್ರದಾನ ಮಾಡಲಾಗುವುದು.

ಸಾಹಿತಿ ಡಾ.ಚಂದ್ರಶೇಖರ ಕಂಬಾರ, ಕಲಾವಿದೆ ಮಂಜಮ್ಮ ಜೋಗತಿ ಮತ್ತಿತರರು 2021ನೇ ಸಾಲಿನಲ್ಲಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಪದ್ಮವಿಭೂಷಣ

ವಿಶ್ವೇಷ ತೀರ್ಥ ಸ್ವಾಮೀಜಿ (ಉಡುಪಿ, ಮರಣೋತ್ತರ, ಆಧ್ಯಾತ್ಮ), ಜಾರ್ಜ್ ಫರ್ನಾಂಡಿಸ್ (ಮರಣೋತ್ತರ, ರಾಜಕಾರಣಿ)

ಪದ್ಮಶ್ರೀ

ಕೆ.ವಿ. ಸಂಪತ್‌ಕುಮಾರ್ (ಮರಣೋತ್ತರ, ಸಂಸ್ಕೃತ ಪತ್ರಿಕೆ 'ಸುಧರ್ಮ' ಸಂಸ್ಥಾಪಕ), ವಿದುಷಿ ಕೆ.ಎಸ್. ಜಯಲಕ್ಷ್ಮಿ (ಸಂಸ್ಕೃತ ಪತ್ರಿಕೆ 'ಸುಧರ್ಮ' ಸಂಸ್ಥಾಪಕಿ), ಡಾ.ಬಿ.ಎನ್. ಗಂಗಾಧರ (ವೈದ್ಯಕೀಯ, ನಿಮ್ಹಾನ್ಸ್), ವಿಜಯ ಸಂಕೇಶ್ವರ (ಉದ್ಯಮಿ), ಹರೇಕಳ ಹಾಜಬ್ಬ (ಅಕ್ಷರ ಸಂತ), ತುಳಸಿ ಗೌಡ (ಲಕ್ಷ ಸಸಿ ನೆಟ್ಟ ಮಹಿಳೆ)

ಬಿಟ್‌ಕಾಯಿನ್: ವಿದೇಶ ಹಾಗೂ ಕೇಂದ್ರ ತನಿಖಾ ತಂಡಗಳ ತನಿಖೆ

ಸುಳಿವಿಗೆ 'ಐ.ಪಿ ವಿಳಾಸ'ದ ಮೊರೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: 'ಬಿಟ್ ಕಾಯಿನ್ (ಬಿಟಿಸಿ)' ಹಗರಣದ ಬಗ್ಗೆ ಮಾಹಿತಿ ಕಲೆಹಾಕುತ್ತಿರುವ ವಿದೇಶದ ಹಾಗೂ ಕೇಂದ್ರ ಸರ್ಕಾರದ ತನಿಖಾ ತಂಡಗಳು, ಕಂಪ್ಯೂಟರ್ ಮೂಲಕ ನಡೆದಿದೆ ಎನ್ನಲಾದ ಬಿಟಿಸಿ ಅಕ್ರಮ ವರ್ಗಾವಣೆ ಪತ್ತೆಗಾಗಿ ಐ.ಪಿ (ಇಂಟರ್‌ನೆಟ್ ಪ್ರೋಟೋಕಾಲ್ ಅಡ್ರೆಸ್) ವಿಳಾಸಗಳನ್ನು ಪರಿಶೀಲಿಸುತ್ತಿವೆ.

ಬಿಟಿಸಿ ಹಗರಣ ದಿನಕ್ಕೊಂದು ತಿರುವು ಪಡೆಯುತ್ತಿದೆ. ಇದರ ಮಧ್ಯೆಯೇ ವಿದೇಶದ ಹಾಗೂ ಕೇಂದ್ರದ ತನಿಖಾ ತಂಡಗಳು ಸದ್ದಿಲ್ಲದೇ ತನಿಖೆ ಚುರುಕುಗೊಳಿಸಿದ್ದು, ಈಗಾಗಲೇ ಸಾಕಷ್ಟು ಪುರಾವೆಗಳನ್ನು ಕಲೆಹಾಕಿರುವ ಬಗ್ಗೆ ಮಾಹಿತಿ ಇದೆ.

'ಹಗರಣದ ಮೂಲ ಸೂತ್ರಧಾರ ಎನ್ನಲಾದ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯನ್ನು (26) ವಿಚಾರಣೆ ನಡೆಸಿದ್ದ ರಾಜ್ಯದ ಎರಡು ತನಿಖಾ ಸಂಸ್ಥೆಗಳ ಮೇಲೆಯೇ ಹೆಚ್ಚು ಅನುಮಾನವಿದೆ. ಅದೇ ಆಯಾಮದಲ್ಲಿ ತನಿಖೆ ನಡೆದಿದೆ. ರಾಜ್ಯದ ಕೆಲ ಪೊಲೀಸರೂ ಈ ತನಿಖೆಗೆ ಸಹಕಾರ ನೀಡುತ್ತಿದ್ದಾರೆ' ಎಂದೂ ಮೂಲಗಳು ಹೇಳಿವೆ.

'ಬಿಟಿಸಿ ವರ್ಗಾವಣೆಗೆ ಕೆಲವೆಡೆ ಲ್ಯಾಪ್‌ಟಾಪ್ ಹಾಗೂ ಕಂಪ್ಯೂಟರ್ ಬಳಸಿರುವ ಮಾಹಿತಿ ತನಿಖಾ ತಂಡಗಳಿಗೆ ಲಭಿಸಿದೆ. ಅಕ್ರಮಕ್ಕೆ ಬಳಸಿದ್ದ ಅಂತರ್ಜಾಲದ ಐ.ಪಿ ವಿಳಾಸಗಳನ್ನು (ಇಂಟರ್‌ನೆಟ್ ಪ್ರೋಟೋಕಾಲ್ ಅಡ್ರೆಸ್) ಕಲೆ ಹಾಕುತ್ತಿರುವ ತನಿಖಾ ತಂಡಗಳು, ಅವುಗಳನ್ನೇ ಪ್ರಾಥಮಿಕ ಸುಳಿವಾಗಿ ಪರಿಗಣಿಸಿ ತನಿಖೆ ಮುಂದುವರಿಸಿವೆ' ಎಂದೂ ತಿಳಿಸಿವೆ.

ಶ್ರೀಕೃಷ್ಣನ ಮೂಲಕವೇ ವರ್ಗಾವಣೆ ?: 'ಹಣ ವಿನಿಮಯ ಏಜೆನ್ಸಿಗಳ ಸರ್ವರ್ ಹಾಗೂ ಆನ್‌ಲೈನ್ ಗೇಮಿಂಗ್ ಜಾಲತಾಣಗಳನ್ನು ಹ್ಯಾಕ್ ಮಾಡಿ ಶ್ರೀಕೃಷ್ಣ, ಬಿಟ್ ಕಾಯಿನ್ ರೂಪದಲ್ಲಿ ಹಣ ದೋಚುತ್ತಿದ್ದ. ಆತನ ಮೂಲಕವೇ ಬಿಟ್ ಕಾಯಿನ್‌ಗಳನ್ನು ಬೇರೊಬ್ಬರು ಅಕ್ರಮವಾಗಿ ವರ್ಗಾಯಿಸಿಕೊಂಡಿರುವ ಆರೋಪಗಳು ಸದ್ಯಕ್ಕಿವೆ' ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.

'ರಾಜ್ಯದ ಎರಡು ತನಿಖಾ ಸಂಸ್ಥೆಗಳ ಐ.ಪಿ ಅಡ್ರೆಸ್‌ಗಳು, ಅಕ್ರಮ ವರ್ಗಾವಣೆಗೆ ಬಳಕೆಯಾಗಿರುವ ಪ್ರಾಥಮಿಕ ಮಾಹಿತಿ ತನಿಖಾ ತಂಡಗಳಿಗೆ ಗೊತ್ತಾಗಿದೆ. ಆದರೆ, ಐ.ಪಿ ಅಡ್ರೆಸ್‌ಗಳನ್ನು ಬದಲಾಯಿಸಿ ಪ್ರಕರಣದ ದಿಕ್ಕು ತಪ್ಪಿಸುವ ಪ್ರಯತ್ನ ನಡೆದಿರುವ ಅನುಮಾನವಿದೆ. ಹೀಗಾಗಿ, ತನಿಖಾ ತಂಡಗಳು ಐ.ಪಿ ಅಡ್ರೆಸ್ ವಿಷಯದಲ್ಲಿ ಇದುವರೆಗೂ ಯಾವುದೇ ಅಂತಿಮ ನಿರ್ಧಾರಕ್ಕೆ ಬಂದಿಲ್ಲ. ಮತ್ತಷ್ಟು ಮಾಹಿತಿ ಕಲೆಹಾಕುವತ್ತ ಗಮನ ಹರಿಸಿವೆ.'

ಹೊರದೇಶಕ್ಕೆ ವರ್ಗಾವಣೆ?: 'ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿ ಅಂಕಿಗಳ ರೂಪದಲ್ಲಷ್ಟೇ ನೋಡಲು ಸಿಗುವ ಬಿಟ್ ಕಾಯಿನ್ ವ್ಯವಹಾರ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದೆ. ಬ್ಯಾಂಕ್ ಹಾಗೂ ಯಾವುದೇ ಮಧ್ಯವರ್ತಿಗಳಿಲ್ಲದೆ ಕಡಿಮೆ ವರ್ಗಾವಣೆ ಶುಲ್ಕದಲ್ಲಿ ವಹಿವಾಟು ನಡೆಸಬಹುದಾಗಿದೆ' ಎಂದು ಮೂಲಗಳು ತಿಳಿಸಿವೆ.

'ಶ್ರೀಕೃಷ್ಣನ ಮೂಲಕ ಬಿಟಿಸಿ ಮಾಹಿತಿ ತಿಳಿದುಕೊಂಡು, ಆತನ ಮೂಲಕವೇ ಹೊರದೇಶಗಳ ಮಧ್ಯವರ್ತಿಗಳಿಗೆ ಬಿಟಿಸಿ ವರ್ಗಾವಣೆ ಮಾಡಿರುವ ಆರೋಪವಿದೆ. ಆದರೆ, ಈ ವರ್ಗಾವಣೆಗೆ ನಿಖರ ಪುರಾವೆ ಸದ್ಯಕ್ಕೆ ಲಭ್ಯವಾಗಿಲ್ಲ. ಕರ್ನಾಟಕದ ಸೈಬರ್ ಲ್ಯಾಬ್ ಒಂದರ ನೆರವು ಪಡೆದಿರುವ ತನಿಖಾ ತಂಡಗಳು, ಐ.ಪಿ ಅಡ್ರೆಸ್ ಮೂಲಕವೇ ಪ್ರಕರಣದ ಜಾಡು ಭೇದಿಸಲು ಯತ್ನಿಸುತ್ತಿವೆ' ಎಂದೂ ಹೇಳಿವೆ.

'ಮೊದಲ ಪ್ರಕರಣದಲ್ಲೇ ಜಾಮೀನು'

'ನೆದರ್ಲೆಂಡ್ಸ್‌ನಲ್ಲಿ ಬಿ.ಎಸ್ಸಿ ಮುಗಿಸಿ ಬೆಂಗಳೂರಿಗೆ ಬಂದಿದ್ದ ಶ್ರೀಕೃಷ್ಣ, ಇಲ್ಲಿಯ ಸ್ನೇಹಿತರ ಜೊತೆ ಹೆಚ್ಚು ಓಡಾಡುತ್ತಿದ್ದ. 2017ರಲ್ಲಿ ಮೊದಲ ಬಾರಿಗೆ ಪೋಕರ್ ಬಾಜಿ ಆನ್‌ಲೈನ್ ಗೇಮಿಂಗ್ ಜಾಲತಾಣ ಹ್ಯಾಕ್ ಮಾಡಿ, ₹ 50 ಲಕ್ಷ ದೋಚಿದ್ದ. ಜಾಲತಾಣದ ಸಿಇಒ ಅವರು ಬೆಂಗಳೂರು ನಗರ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಕರಣದಲ್ಲಿ ಶ್ರೀಕೃಷ್ಣನ ಮೂವರು ಸ್ನೇಹಿತರನ್ನು ಪೊಲೀಸರು ಬಂಧಿಸಿದ್ದರು. ಶ್ರೀಕೃಷ್ಣ ಮಾತ್ರ ತಲೆಮರೆಸಿಕೊಂಡಿದ್ದ. ಆದರೆ, ಆತ ಅಂತರರಾಷ್ಟ್ರೀಯ ಹ್ಯಾಕರ್ ಎಂಬ ಮಾಹಿತಿ ಯಾರಿಗೂ ಗೊತ್ತಿರಲಿಲ್ಲ.'

'ನ್ಯಾಯಾಲಯದಿಂದ ಜಾಮೀನು ಪಡೆದಿದ್ದ ಆರೋಪಿ ಶ್ರೀಕೃಷ್ಣ, ವಕೀಲರ ಜೊತೆ ಠಾಣೆಗೆ ಹಾಜರಾಗಿದ್ದ. ಕಾನೂನು ಪ್ರಕ್ರಿಯೆ ಮುಗಿಸಿ ಆತನನ್ನು ವಾಪಸು ಕಳುಹಿಸಲಾಗಿತ್ತು. ಈ ಪ್ರಕರಣ ರಾಜಿಯಲ್ಲಿ ಇತ್ಯರ್ಥವಾಗಿತ್ತು. ಅದಾದ ನಂತರ, ಶ್ರೀಕೃಷ್ಣ ಸಾಕಷ್ಟು ಸೈಬರ್ ಅಪರಾಧಗಳನ್ನು ಎಸಗಿದ್ದಾನೆ' ಎಂದೂ ತಿಳಿಸಿವೆ.

'ಐ.ಪಿ ಅಡ್ರೆಸ್ ಅಂತಿಮವಲ್ಲ'

'ಐ.ಪಿ ಅಡ್ರೆಸ್ ಹೊಂದಾಣಿಕೆಯಾದ ಮಾತ್ರಕ್ಕೆ ಪ್ರಕರಣದ ಪುರಾವೆ ಸಿಕ್ಕಿತು ಎಂದು ಹೇಳಲಾಗದು. ಪ್ರತಿಯೊಂದು ಅಂತರ್ಜಾಲ ವ್ಯವಸ್ಥೆಯ ಐ.ಪಿ ಅಡ್ರೆಸ್ ಬದಲಾಯಿಸುವ ಆಧುನಿಕ ತಂತ್ರಜ್ಞಾನ ನಮ್ಮಲ್ಲಿದೆ. ಆ್ಯಪ್‌ಗಳ ಮೂಲಕವೂ ಐ.ಪಿ ಅಡ್ರೆಸ್ ಬದಲಾವಣೆ ಮಾಡಬಹುದು. ಆದರೆ, ಸದ್ಯ ಸಿಕ್ಕಿರುವ ಐ.ಪಿ ಅಡ್ರೆಸ್‌ಗಳ ಖಚಿತತೆ ತಿಳಿಯಲು ತಾಂತ್ರಿಕ ತಜ್ಞರ ಮೂಲಕ ತನಿಖಾ ತಂಡಗಳು ತನಿಖೆ ಮುಂದುವರಿಸಿವೆ' ಎಂದು ಗುಪ್ತದಳದ ಅಧಿಕಾರಿಯೊಬ್ಬರು ಹೇಳಿದರು.




'ಬಿಟ್ ಕಾಯಿನ್: ತಪ್ಪಿತಸ್ಥರ ಹೆಸರು ಬಹಿರಂಗಪಡಿಸಲಿ'

ಬೆಂಗಳೂರು: 'ಬಿಟ್ ಕಾಯಿನ್ ಹಗರಣದಲ್ಲಿ ಯಾರೆಲ್ಲ ಭಾಗಿಯಾಗಿದ್ದಾರೆ, ಯಾರೆಲ್ಲ ಆರೋಪಿಗಳು, ಆಡಳಿತ ಪಕ್ಷದವರು ಎಷ್ಟು ಮಂದಿ ಇದ್ದಾರೆ ಎಂದು ತನಿಖೆ ನಡೆಸಿ ಸರ್ಕಾರವೇ ತಪ್ಪಿತಸ್ಥರ ಹೆಸರುಗಳನ್ನು ಬಹಿರಂಗಪಡಿಸಲಿ' ಎಂದು ಕಾಂಗ್ರೆಸ್ ಶಾಸಕ ಎನ್.ಎ. ಹ್ಯಾರಿಸ್ ಆಗ್ರಹಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಸರ್ಕಾರದ ಬಳಿ ಅಧಿಕಾರವಿದೆ. ತನಿಖಾ ಸಂಸ್ಥೆಗಳಿವೆ. ಎಲ್ಲ ಆರೋಪಗಳ ಬಗ್ಗೆ ತನಿಖೆ ನಡೆಸಲಿ' ಎಂದರು.

ಅಬ್ದುಲ್ ಜಬ್ಬಾರ್ ಅಧಿಕಾರ ಸ್ವೀಕಾರ 16ರಂದು



ಬೆಂಗಳೂರು: ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ಅಬ್ದುಲ್ ಜಬ್ಬಾರ್ ಇದೇ 16ರಂದು ಅಧಿಕಾರ ಸ್ವೀಕರಿಸಲಿದ್ದಾರೆ.

ಶಾಸಕ ಎನ್.ಎ. ಹ್ಯಾರಿಸ್ ಜೊತೆ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅಬ್ದುಲ್ ಜಬ್ಬಾರ್, '16ರಂದು ಬೆಳಿಗ್ಗೆ 10.30ಕ್ಕೆ ಅರಮನೆ ಮೈದಾನದ ನಲಪಾಡ್ ಪೆವಿಲಿಯನ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ' ಎಂದರು.



ಎಲ್ಲೆಡೆಯಿಂದ ಬಂದ ಬೇರೆಯವರ ಭಯದ ಕಥೆಗಳೇ ನಮ್ಮ ತಲೆಯಲ್ಲಿ ಬೆಳೆದು ಹೆಮ್ಮರವಾಗುತ್ತವೆ. ನಾವು ಭಯ ಮತ್ತು ಆತಂಕಕ್ಕೆ ಒಳಗಾದಾಗ ನಮ್ಮ ಮೆದುಳು ಹೇಳಿದ್ದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲ.

ಬೇರೆಯವರ ಭಯ ನಿಮಗೆ ಬೇಡ

ರಮ್ಯಾ ಶ್ರೀಹರಿ

ನಮ್ಮ ನಡೆ-ನುಡಿಗಳು, ಮೌಲ್ಯ-ಆಕಾಂಕ್ಷೆಗಳು ಸುತ್ತಲ ಪ್ರಪಂಚದ ಪ್ರಭಾವದಿಂದಲೇ ಭಾಗಶಃ ರೂಪುಗೊಳ್ಳುತ್ತಿರುತ್ತದೆ. ನಮ್ಮ ಪರಿಸರದಲ್ಲಿ ಕೆಲವೊಮ್ಮೆ ನಡೆಯುವ ಅತಿರೇಕದ ವಿದ್ಯಮಾನಗಳಿಂದ ನಮ್ಮ ಭಾವನಾತ್ಮಕ ಪ್ರಪಂಚ ಅಲ್ಲೋಲಕಲ್ಲೋಲಗೊಳ್ಳುವುದೂ ಸಹಜವೇ. ಸುಖ, ದುಃಖ, ಭಯ, ಆತಂಕ, ಪ್ರೀತಿ ಎಲ್ಲಕ್ಕೂ ಸ್ಪಂದಿಸುವುದನ್ನು ಮತ್ತು ಸಂದರ್ಭಕ್ಕೆ ತಕ್ಕಂತೆ ವರ್ತಿಸುವುದನ್ನೂ ನಾವು ಸಮಾಜದಿಂದಲೇ ನೋಡಿ ಕಲಿಯುವುದು. ನೋಡಿ ಕಲಿಯುವ ಗುಣವಿರುವುದರಿಂದಲೇ ಹಲವು ವಿಷಯಗಳನ್ನು ನಾವು ಸ್ವತಃ ಅನುಭವಿಸದೆಯೂ ಅರ್ಥಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ನಮ್ಮ ಜೊತೆಗಿರುವವರ ಭಾವನೆಗಳು ನಮ್ಮನ್ನು ತಟ್ಟದೆ ಇರಲು ಸಾಧ್ಯವೇ ಇಲ್ಲ. ಹಾಗಾಗಿಬಿಟ್ಟರೆ ನಮಗೂ ಜಡ ವಸ್ತುಗಳಿಗೂ ಯಾವ ಬೇಧವೂ ಇರುವುದಿಲ್ಲ. ಬೇರೆಯವರ ಭಾವನೆಗಳನ್ನು, ನೋವು, ನಲಿವುಗಳನ್ನು ಸ್ವತಃ ಅನುಭವಿಸದೆಯೂ ಗ್ರಹಿಸಿ ಸ್ಪಂದಿಸಬಲ್ಲ ಗುಣವಾದ ಸಹಾನುಭೂತಿಯೇ ಮಾನವ ಸಂಬಂಧಗಳ ಅಡಿಪಾಯ. ಆದರೆ ಅನ್ಯರ ಭಾವನೆಗಳನ್ನು ನಮ್ಮವೇ ಎನ್ನುವಷ್ಟು ತೀವ್ರವಾಗಿ ಬೇರೆಯವರ ಲೋಕದಲ್ಲೇ ನಾವು ಲೀನವಾಗಿಬಿಟ್ಟರೆ ಅಲ್ಲಿಂದಲೇ ನಮ್ಮ ಸಂಕಟದ ಪ್ರಾರಂಭವೂ ಹೌದು.

ಸಹಾನುಭೂತಿಯೂ ನಮ್ಮ ಮತ್ತು ನೋವನ್ನು ಅನುಭವಿಸುತ್ತಿರುವ ಅನ್ಯವ್ಯಕ್ತಿಯ ನಡುವಿನ ಸ್ಪಷ್ಟವಾದ ಗೆರೆಯಿಲ್ಲದೆ ಸಾಧ್ಯವಾಗುವುದಿಲ್ಲ. ಅನ್ಯರ ಸಂಕಟವನ್ನು ನನ್ನದೇ ಎಂದು ಭ್ರಮಿಸಿಕೊಂಡು ನಾನು ಸಂಕಟಪಡುವುದಕ್ಕೂ, ನಾನು ಸ್ವತಃ ನೋವಿನಲ್ಲಿಲ್ಲದಿದ್ದರೂ ಅನ್ಯರ ನೋವನ್ನು ಗ್ರಹಿಸಿ ಸ್ಪಂದಿಸುವುದಕ್ಕೂ ಬಹಳ ವ್ಯತ್ಯಾಸವಿದೆ. ಈ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಅರಿಯದೇ ಹೋದರೆ ಪ್ರಪಂಚದಲ್ಲಿ ನಡೆಯುವ ಎಲ್ಲದಕ್ಕೂ ಆತಂಕ ಪಡುತ್ತಾ, 'ನನಗೂ ಹೀಗೆ ಆಗಿಬಿಟ್ಟರೆ' ಎಂಬ ಭಯದಲ್ಲೇ ಇಡೀ ಜೀವನ ಕಳೆಯಬೇಕಾಗುತ್ತದೆ. ಭಯಕ್ಕೆ ಸೋಂಕಿನಂತೆ ಅತಿ ಶೀಘ್ರವಾಗಿ ಹಬ್ಬುವ ಗುಣವಿದೆ. ಆತಂಕ, ಉದ್ವಿಗ್ನತೆ ಒಬ್ಬರಿಂದೊಬ್ಬರಿಗೆ ಹರಡುತ್ತಾ, ನಮ್ಮ ಗಮನವನ್ನು ನಮ್ಮ ಬದುಕಿನಿಂದ ಬೇರೆಡೆಗೆ ಸೆಳೆಯುತ್ತದೆ. ಭಯಕ್ಕೆ ಹೇಗೆ ಹರಡುವ ಗುಣವಿದೆಯೋ, ನಿರ್ಭೀತಿಗೂ ಶಾಂತಿಗೂ ಧೈರ್ಯಕ್ಕೂ ಹಾಗೇ ಹರಡುವ ಗುಣವಿದೆ. ಸಾಧಾರಣ ವಿಷಯಕ್ಕೂ ಅತಿ ಭಯಪಡುವ, ಮಹತ್ತರ ಭಯಗಳಿಗೂ ಎದೆಗುಂದದ ಜನರ ನಡುವಿರುವ ವ್ಯತ್ಯಾಸ ಅವರು ಬೆಳೆದು ಬಂದ ಪರಿಸರವೇ ಆಗಿದೆ.

ಬದುಕು ಅನಿಶ್ಚಿತವಾದದ್ದು ಎನ್ನುವುದು ಎಲ್ಲರಿಗೂ ತಿಳಿದಿದ್ದರೂ, ದೈನಿಕದ ಓಟದಲ್ಲಿ, ಯಾವುದೋ ಸುಳ್ಳು ಭದ್ರತೆಯ ನೆರಳಿನಲ್ಲಿ ಅಡಗಿ, ಕಣ್ಣು ತೆರೆದು ಈ ಅನಿಶ್ಚಿತತೆಯನ್ನು ಕಾಣುವುದಕ್ಕೆ ಹೆದರಿ, ಹೇಗೋ ಬದುಕಿನ ಈ ಮೂಲಭೂತ ಸತ್ಯವನ್ನು ನಮ್ಮ ಅರಿವಿನಿಂದ ಮರೆಮಾಚಿರುತ್ತೇವೆ. ಎಂದೋ ಒಂದು ದಿನ ಯಾರದೋ ದುರಂತಕಥೆಯನ್ನು ಕೇಳಿ ಎಲ್ಲರೂ ಭಯ ಪಡುವ ಹೊತ್ತಿನಲ್ಲಿ ನಾವೂ ಭಯಭೀತರಾಗುವುದಕ್ಕೆ ಕಾರಣ ಇಷ್ಟು ದಿನ ಕಣ್ತಪ್ಪಿಸುತ್ತಿದ್ದ ಅನಿಶ್ಚಿತತೆ, ಅಭದ್ರತೆ, ಅಶಾಶ್ವತತೆ ಇಂದು ಮುಖಾಮುಖಿಯಾದದ್ದೇ ಆಗಿರುತ್ತದೆ. ಹೀಗೆ ಎಂದೋ ಒಂದು ದಿನ ಜನ ಮರುಳೋ ಜಾತ್ರೆ ಮರುಳೋ ಎಂಬ ಹೊತ್ತಿನಲ್ಲಿ ಮಾನವಜೀವನದ ಸುಂದರ ಸತ್ಯವಾದ ಅನಿಶ್ಚಿತತೆಗೆ ಮುಖಾಮುಖಿಯಾಗಿ ಭಯಬೀಳುವ ಬದಲು ದಿನವೂ ಶಾಂತವಾಗಿದ್ದುಕೊಂಡೇ ಈ ತತ್ವವನ್ನು ಚಿಂತಿಸಿದರೆ ಹೇಗೆ?

ಅನಿಶ್ಚಿತತೆಯನ್ನು ನಮ್ಮ ಬುದ್ಧಿ ಗ್ರಹಿಸುವುದಕ್ಕೆ ಮುಂಚೆಯೇ ಅದನ್ನು ಅನುಭವದಲ್ಲಿ ಕಂಡುಕೊಂಡಾಗ ಆಗುವ ದಿಗ್ಭ್ರಮೆಯೇ ಆತಂಕ. ದಿನನಿತ್ಯದ ಜೀವನದಲ್ಲಿ ಹೇಗೋ ಮರೆಯಾಗಿದ್ದು, ಕಾಣಲು ಇಷ್ಟವಿಲ್ಲದ್ದು ಒಂದು ದಿನ ಧುತ್ತೆಂದು ಬಂದು ಎದುರಿಗೆ ನಿಂತರೆ ಹೇಗಾಗುತ್ತದೆ? ನಮ್ಮನ್ನು ನಾವು ಕಂಡುಕೊಂಡಾಗಲಷ್ಟೇ ಬೇರೆಡೆಯಿಂದ ಬಂದ ಪ್ರಭಾವವನ್ನು ನಾವು ಗುರುತಿಸಬಹುದು. ಇಲ್ಲದಿದ್ದರೆ ಎಲ್ಲೆಡೆಯಿಂದ ಬಂದ ಬೇರೆಯವರ ಭಯದ ಕಥೆಗಳೇ ನಮ್ಮ ತಲೆಯಲ್ಲಿ ಬೆಳೆದು ಹೆಮ್ಮರವಾಗುತ್ತವೆ.

ಎಲ್ಲರೂ ಭಯಪಡುತ್ತಿರುವ ಹೊತ್ತಿನಲ್ಲಿ ನಾವೂ ಭಯ ಮತ್ತು ಆತಂಕಕ್ಕೆ ಒಳಗಾದಾಗ ನಮ್ಮ ಮೆದುಳು ಹೇಳಿದ್ದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲ. ಆತಂಕ ಸುಳ್ಳು ಸುಳ್ಳೇ ಎಚ್ಚರಿಕೆ ಗಂಟೆಯನ್ನು ಮೊಳಗಿಸುತ್ತದೆ. ಆತಂಕಕ್ಕೆ ಒಳಗಾದಾಗ ಯಾವ ತಾರ್ಕಿಕ ಪರಿಹಾರವೂ ಉಪಯೋಗಕ್ಕೆ ಬರುವುದಿಲ್ಲ. ಭಯಗ್ರಸ್ತ ಮನಸ್ಸಿನ ಜೊತೆ ವಾದ ಮಾಡುವುದಕ್ಕೂ ಒಂದು ವರ್ಷದ ಮಗುವಿನ ಜೊತೆ ವಾದ ಮಾಡುವುದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಉದಾಹರಣೆಗೆ ಆರೋಗ್ಯದ ಕುರಿತಾದ ಆತಂಕಕ್ಕೆ ಒಳಗಾದಾಗ ಎಷ್ಟೇ ಆರೋಗ್ಯ ತಪಾಸಣೆ ಮಾಡಿಸಿದರೂ, ಅಂಕಿ ಅಂಶಗಳನ್ನು ತಿಳಿದರೂ, ಯಾವ ವೈಜ್ಞಾನಿಕ ಮಾಹಿತಿ ಅರಿತರೂ ಆತಂಕ ಶಮನವಾಗುವುದಿಲ್ಲ. ಪದೇ ಪದೇ ಮನಸ್ಸಿನಲ್ಲಿ ಭಯಗ್ರಸ್ತ ಸಂದೇಹಗಳು ಹುಟ್ಟುತ್ತಿರುವಾಗ ಅದಕ್ಕೆ ಉತ್ತರ ಕೊಡುವಂತಹ ಯಾವ ಕೆಲಸವನ್ನೂ ಮಾಡದೆ ಅದನ್ನು ನಿರ್ಲಕ್ಷಿಸುವುದೊಳಿತು. ಮನಸ್ಸು ಶಾಂತವಾಗಿದ್ದಾಗಲಷ್ಟೇ ಅದು ವಿಜ್ಞಾನದ ಮಾತನ್ನು ಕೇಳುವುದು!

ನಾವು ಜೀವನಪೂರ್ತಿ ಭಯಗಳಲ್ಲೇ ಕಳೆದುಹೋಗುವಷ್ಟು ವಿವಿಧ ರೀತಿಯ ಭಯಗಳಿವೆ ಪ್ರಪಂಚದಲ್ಲಿ, ಜೀವನವೆಲ್ಲ ಕಲ್ಪಿತ ಅಪಾಯಗಳಿಂದ ತಪ್ಪಿಸಿಕೊಂಡು ಓಡುವುದರಲ್ಲೇ ಕಳೆದರೆ, ನಮಗೆ ಬೇಕಾದ್ದನ್ನು, ನಾವು ಪ್ರೀತಿಸಿದ್ದನ್ನು ಬೆನ್ನಟ್ಟಿಕೊಂಡು ಹೋಗುವ ಮಾನಸಿಕ ಶಕ್ತಿ ಇರುತ್ತದೆಯೇ? ಎಲ್ಲೆಡೆಯಿಂದಲೂ ಭಯ ನಮ್ಮ ಕಡೆಗೇ ಹರಿದುಬರುತ್ತಿರುವಾಗ, ಭಯದ ಕೈಗೇ ಸಿಗದ, ಎಂದಿಗೂ ಕಳೆದುಹೋಗದಂತಹ ಏನಿದೆ ನನ್ನ ಬಳಿ ಎಂದು ಅನೇಕ ಚಿಂತಕರು ಕೇಳಿಕೊಂಡಿದ್ದಾರೆ. ನಮ್ಮ ಅಸ್ತಿತ್ವದ ಬುನಾದಿ ಎನಿಸಿಕೊಂಡಿರುವ ಪ್ರಜ್ಞೆಯ ಬೆಳಕೊಂದು ನಮ್ಮೊಳಗಿದೆ. ಆ ಬೆಳಕಿನ ಪ್ರವಾಹದಲ್ಲಿ ಅನೇಕರು ಶಾಂತಿಯನ್ನು ಹುಡುಕಿಕೊಂಡಿದ್ದಾರೆ.

ಒಂದಾದ ಮೇಲೊಂದು ಭಯಗಳು ಬಂದಪ್ಪಳಿಸುತ್ತಿರುವಾಗ ಕಿರಿದಾದ, ಕತ್ತಲ, ತಳವಿಲ್ಲದ ಬಾವಿಯಲ್ಲಿ ಕುಸಿಯುತ್ತಿರುವ ಅನುಭವವಾಗುತ್ತದೆ. ಎಷ್ಟೇ ಕೆಳಗೆ ಹೋದರೂ, ಅದಕ್ಕೂ ಕೆಳಗಿನ ಪಾತಾಳದಲ್ಲಿ ಬೀಳಬಹುದೇನೋ ಎಂಬ ಭಯ ತೊಲಗುವುದೇ ಇಲ್ಲ. ಇದಕ್ಕೆ ಮದ್ದು ಅಂತಹ ಬಾವಿಯಲ್ಲಿಳಿಯದೆ, ವಿಶಾಲವಾದ ಹಚ್ಚ ಹಸುರಿನ ಬಯಲಿನಲ್ಲಿ ಎಳೆ ಬಿಸಿಲನ್ನು, ತಂಗಾಳಿಯನ್ನು ಸವಿಯುತ್ತಾ, ಇಂಪಾದ ಗಾನವನ್ನು ಆಲಿಸುತ್ತ ನಾವೂ ವಿಸ್ತಾರಗೊಳ್ಳುತ್ತ ಬದುಕಿನ ಸೌಂದರ್ಯದ ಕಡೆಗೆ ಮುಖಮಾಡುವುದಷ್ಟೇ. ❖

ಬೊಜ್ಜು ಅಳಿಯಲಿ 'ಸಕ್ಕರೆ' ಕರಗಲಿ

ಪುರುಷರಲ್ಲಿ ನಲವತ್ತು ಇಂಚುಗಳಿಗಿಂತ ಹಾಗೂ ಮಹಿಳೆಯರಲ್ಲಿ ಮೂವತ್ತೈದು ಇಂಚಿಗಿಂತಲೂ ಹೆಚ್ಚಾದ ಸೊಂಟದ ಸುತ್ತಳತೆಯು ಬಹು ಅಪಾಯಕಾರಿ. ಇದು ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳನ್ನು ಆಹ್ವಾನಿಸುತ್ತದೆ.



ಡಾ. ವಿನಯ ಶ್ರೀನಿವಾಸ್

ಈಗ ಏಳೆಂಟು ವರ್ಷಗಳಿಂದ ಮಧುಮೇಹದಿಂದ ಬಳಲುತ್ತಿರುವ ಹಿರಿಯ ಸ್ನೇಹಿತೆ ಆತಂಕದಿಂದ ಕರೆ ಮಾಡಿದ್ದರು. ನಡೆದದ್ದಿಷ್ಟೆ: ಆಕೆ ಈ ಬಾರಿ ವೈದ್ಯರ ಬಳಿ ತಪಾಸಣೆಗೆ ಹೋದಾಗ ರಕ್ತದ ಸಕ್ಕರೆ ಅಂಶವು ನಿಯಂತ್ರಣಕ್ಕೆ ಬರುತ್ತಿಲ್ಲವೆಂದೂ, ಇನ್‌ಸುಲಿನ್ ಚುಚ್ಚುಮದ್ದು ಬೇಕಾಗಬಹುದು ಎಂದೂ, ದೇಹತೂಕದ ಜೊತೆಗೆ ಹೊಟ್ಟೆಯ ಸುತ್ತಳತೆಯನ್ನು ಕಡಿಮೆ ಮಾಡಿಕೊಳ್ಳಲೇಬೇಕು ಎಂದು ವೈದ್ಯರು ಹೇಳಿದ್ದು ಅವರ ಆತಂಕಕ್ಕೆ ಕಾರಣವಾಗಿತ್ತು. ಬೇರೆ ದಾರಿಯಿಲ್ಲದೆ ಯೋಗತರಗತಿಗೆ ಸೇರಿ, ನಿಯಮಿತವಾಗಿ ಯೋಗಾಭ್ಯಾಸವನ್ನು ಶುರು ಮಾಡಿದ್ದರು. ಪರಿಣಾಮವಾಗಿ ಆಕೆಯ ದೇಹತೂಕದ ಜೊತೆಯಲ್ಲಿ ಒಂದಿಷ್ಟು ಹೊಟ್ಟೆಯ ಸುತ್ತಳತೆಯೂ ಕಡಿಮೆಯಾಗಿತ್ತು. ಈ ಬಾರಿ ವೈದ್ಯರಲ್ಲಿ ಹೋದಾಗ ಸಕ್ಕರೆ ಅಂಶ ಸ್ವಲ್ಪ ಮಟ್ಟಿನ ನಿಯಂತ್ರಣದಲ್ಲಿದ್ದುದು ನಿಜಕ್ಕೂ ಆಕೆಗೆ ಸಮಾಧಾನ ತಂದಿತ್ತು.

ಹೌದು, ಅಧಿಕ ದೇಹತೂಕ, ಅದರಲ್ಲಿಯೂ ಹೆಚ್ಚಾದ ಹೊಟ್ಟೆಯ ಅಥವಾ ಸೊಂಟದ ಸುತ್ತಳತೆ ಒಳ್ಳೆಯದಲ್ಲ. ಪುರುಷರಲ್ಲಿ ನಲವತ್ತು ಇಂಚುಗಳಿಗಿಂತ ಹಾಗೂ ಮಹಿಳೆಯರಲ್ಲಿ ಮೂವತ್ತೈದು ಇಂಚಿಗಿಂತಲೂ ಹೆಚ್ಚಾದ ಸೊಂಟದ ಸುತ್ತಳತೆಯು ಬಹು ಅಪಾಯಕಾರಿ. ಇದು ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳನ್ನು ಆಹ್ವಾನಿಸುತ್ತದೆ. ಈ ಮೂರು ಸಮಸ್ಯೆಗಳು ಚಯಾಪಚಯ ಕ್ರಿಯೆಗೆ ಸಂಬಂಧಿಸಿದ ಕಾಯಿಲೆಗಳಲ್ಲಿ (ಮೆಟಬಾಲಿಕ್ ಸಿಂಡ್ರೋಮ್) ಮುಖ್ಯವಾದುವು ಎಂದು ತಜ್ಞರು ಗುರುತಿಸುತ್ತಾರೆ.

ಶರೀರದ ಮಧ್ಯಭಾಗದಲ್ಲಿ ಶೇಖರವಾಗುವ ಈ ಕೊಬ್ಬಿನಾಂಶ ಬಹಳ ಅಪಾಯ. ಏಕೆಂದರೆ ಇದು ಯಕೃತ್ತು, ಮೇದೋಜೀರಕ ಗ್ರಂಥಿ ಮುಂತಾದ ಮುಖ್ಯ ಅಂಗಾಂಗಗಳ ಸುತ್ತಲೂ ಶೇಖರವಾಗಿರುತ್ತದೆ. ಇದು ಈ ಅಂಗಾಂಗಗಳ ಕಾರ್ಯಕ್ಷಮತೆಯನ್ನು ಕುಂಠಿತಗೊಳಿಸುತ್ತದೆ. ಅಲ್ಲದೆ, ಈ ಕೊಬ್ಬಿನಾಂಶವು ಒಂದು ಬಗೆಯ ಉರಿಯೂತ ಪ್ರಕ್ರಿಯೆಗೆ ಕಾರಣವಾಗಿ ಅಪಾಯಕರ ಪರಿಣಾಮಗಳನ್ನುಂಟುಮಾಡುತ್ತದೆ. ಒಂದು ಅಧ್ಯಯನದ ಪ್ರಕಾರ ವಿಶ್ವದಲ್ಲಿ ಯಕೃತ್ತಿನ ವೈಫಲ್ಯಕ್ಕೆ ಅದನ್ನು ಆವರಿಸುವ ಕೊಬ್ಬಿನಾಂಶವೇ ಪ್ರಮುಖ ಕಾರಣ ಎಂದು ಹೇಳಲಾಗುತ್ತಿದೆ. ಅಷ್ಟೇ ಏಕೆ, ಕೋವಿಡ್ ಕೂಡ ಬೊಜ್ಜು ಇದ್ದವರಲ್ಲಿ ಮಾರಣಾಂತಿಕವಾಗಿದ್ದನ್ನು ನಾವಿಲ್ಲಿ ಸ್ಮರಿಸಬಹುದು.

ಗಮನದಲ್ಲಿರಲಿ

ಮಧುಮೇಹ ಬರುವ ಮೊದಲೇ ಎಚ್ಚರವಹಿಸಿ: ವ್ಯಕ್ತಿಗೆ ಮಧುಮೇಹದ ಯಾವುದೇ ಗುಣಲಕ್ಷಣಗಳಿರದೆ, ಆತನ ರಕ್ತದ ಸಕ್ಕರೆ ಅಂಶವು ಸಾಮಾನ್ಯಕ್ಕಿಂತಲೂ ಸ್ವಲ್ಪ ಹೆಚ್ಚಿದ್ದು, ಆದರೆ ಮಧುಮೇಹ ಎಂದು ಪರಿಗಣಿಸಲು ಬೇಕಾದ ಪ್ರಮಾಣಕ್ಕಿಂತಲೂ ಕಡಿಮೆ ಇದ್ದಾಗ ಅಂತಹ ಸ್ಥಿತಿಯನ್ನು ಮಧುಮೇಹದ ಪೂರ್ವಸ್ಥಿತಿ (ಪ್ರಿ ಡಯಾಬಿಟಿಸ್) ಎನ್ನಬಹುದು. ಇಂತಹ ವ್ಯಕ್ತಿ ಸಾಮಾನ್ಯವಾಗಿ ಅತಿಯಾದ ದೇಹತೂಕ, ಹೆಚ್ಚಾದ ಸೊಂಟದ ಸುತ್ತಳತೆ, ರಕ್ತದಲ್ಲಿ ಹೆಚ್ಚಾದ ಕೊಬ್ಬಿನ ಅಂಶ, ಅಧಿಕ ರಕ್ತದೊತ್ತಡವನ್ನು ಹೊಂದಿರುತ್ತಾರೆ. ಈ ಸಮಸ್ಯೆಯಿಂದ ಬಳಲುವ ಶೇ. 50ರಷ್ಟು ಜನರು ಮುಂದಿನ ಹತ್ತು ವರ್ಷಗಳಲ್ಲಿ ಮಧುಮೇಹದಿಂದ ಬಳಲಬಹುದು. ಇನ್ನು ಕೆಲವರು ಮುಂದಿನ ಮೂರು ವರ್ಷಗಳಲ್ಲಿಯೇ ಮಧುಮೇಹಕ್ಕೆ ತುತ್ತಾಗಬಹುದು. ಆದರೆ, ನಿಯಮಿತವಾದ ನಡಿಗೆ ಮತ್ತು ಹೊಟ್ಟೆಯ ಸ್ನಾಯುಗಳಿಗೆ ಸೂಕ್ತ ವ್ಯಾಯಾಮವನ್ನು ಮಾಡಿ ತಮ್ಮ ಸಕ್ಕರೆ ಅಂಶವನ್ನು ನಿಯಂತ್ರಿಸಿ ಮಧುಮೇಹದಿಂದ ದೂರ ಉಳಿದಂತವರೂ ನಮ್ಮೊಂದಿಗಿದ್ದಾರೆ.

ಸಕ್ಕರೆಯ ಅಂಶದ ಮಟ್ಟವನ್ನು ನಿಯಂತ್ರಿಸಿ: ಈಗಾಗಲೇ ಮಧುಮೇಹದಿಂದ ಬಳಲುವವರು ಹೊಟ್ಟೆಯ ಸ್ನಾಯುಗಳಿಗೆ ಸೂಕ್ತ ವ್ಯಾಯಾಮಗಳನ್ನು ಮಾಡಿ, ಸೊಂಟದ ಸುತ್ತಳತೆಯನ್ನು ಕಡಿಮೆ ಮಾಡಿಕೊಳ್ಳಬೇಕು. ಇದರಿಂದ ರಕ್ತದ ಸಕ್ಕರೆ ಅಂಶವನ್ನು ಸುಲಭವಾಗಿ ನಿಯಂತ್ರಿಸುವುದು ಸಾಧ್ಯ. ಹೆಚ್ಚು ಮಾತ್ರೆಗಳು ಮತ್ತು ಇನ್‌ಸುಲಿನ್ ಬಳಸದೆ ಕಾಯಿಲೆಯನ್ನು ಹತೋಟಿಯಲ್ಲಿಡುವುದು ಸಾಧ್ಯ.

ಅಧಿಕ ರಕ್ತದೊತ್ತಡ ಬೇಡ: ನಿಯಮಿತ ವ್ಯಾಯಾಮವು ಹೊಟ್ಟೆಯ ಕೊಬ್ಬನ್ನು ಕರಗಿಸಿ ರಕ್ತದೊತ್ತಡವನ್ನು ನಿಯಂತ್ರಿಸಲೂ ಸಹಕಾರಿಯಾಗಬಲ್ಲದು.

ಹೃದಯವೂ ಕ್ಷೇಮ: ರಕ್ತದೊತ್ತಡ ಮತ್ತು ಸಕ್ಕರೆ ಅಂಶದ ನಿಯಂತ್ರಣದಿಂದ ಹೃದಯಾಘಾತದ ಸಂಭವವೂ ಕಡಿಮೆಯಾಗುತ್ತದೆ.

ಜೀವನಶೈಲಿ ಬದಲಾಗಲಿ

- ಸಾತ್ವಿಕ ಹಾಗೂ ಪೌಷ್ಟಿಕ ಆಹಾರ ನಿಮ್ಮದಾಗಿರಲಿ.
- ಅತಿಯಾದ ಸಿಹಿ ಪದಾರ್ಥಗಳು, ಇಂಗಾಲಯುಕ್ತ ಪಾನೀಯಗಳು, ಅತಿಯಾದ ಉಪ್ಪಿನ ಅಂಶ, ಸಂಸ್ಕರಿಸಿದ ಆಹಾರ, ಹಾಗೂ ಅತಿಯಾದ ಎಣ್ಣೆಯ ಅಂಶವಿರುವ ಆಹಾರ ಪದಾರ್ಥಗಳು ಬೇಡ.
- ನಿಯಮಿತವಾದ ವ್ಯಾಯಾಮವನ್ನು ರೂಢಿಸಿಕೊಳ್ಳಿ. ದಿನಕ್ಕೆ ಕನಿಷ್ಠ ನಲವತ್ತೈದು ನಿಮಿಷಗಳ ವ್ಯಾಯಾಮ ಸೂಕ್ತ. ಬೊಜ್ಜು ಕರಗಿಸುವ ಕಸರತ್ತೂ ನಿಮ್ಮ ವ್ಯಾಯಾಮದ ಭಾಗವಾಗಿರಲಿ.
- ನಿಮ್ಮ ಎತ್ತರ ಮತ್ತು ವಯಸ್ಸಿಗೆ ಸೂಕ್ತವಾದ ದೇಹತೂಕಕ್ಕಾಗಿ ಶ್ರಮಿಸಿ.
- ಇಪ್ಪತ್ತರ ಹರೆಯದಿಂದಲೇ ಬೊಜ್ಜು ಬರದಂತೆ ಕಾಳಜಿವಹಿಸಿ.
- ಮಹಿಳೆಯರು ಪ್ರಸವದ ಬಳಿಕ ಕಡ್ಡಾಯವಾಗಿ ವ್ಯಾಯಾಮ ಮಾಡಿ, ಮೊದಲಿನ ದೇಹತೂಕವನ್ನು ಕಾಪಾಡಿಕೊಳ್ಳಿ.
- ಮದ್ಯಪಾನ ಮತ್ತು ಧೂಮಪಾನವನ್ನು ವರ್ಜಿಸಿ.
- ಕನಿಷ್ಠ ವರ್ಷಕ್ಕೊಮ್ಮೆ ತಪ್ಪದೆ ವೈದ್ಯರಲ್ಲಿ ತೆರಳಿ, ನಿಮ್ಮ ರಕ್ತದೊತ್ತಡ, ದೇಹತೂಕ ಮತ್ತು ರಕ್ತದ ಸಕ್ಕರೆ ಅಂಶದ ಪರೀಕ್ಷೆ ಮಾಡಿಸಿಕೊಳ್ಳಿರಿ.

❖

ಸಾವು ಎಂದರೆ...

ಡಾ. ಕೆ.ಎಸ್. ಪವಿತ್ರ



ಮನುಷ್ಯನಿಗೆ ಸಾವಿನ ಅರಿವು ಉಂಟಾಗುವುದು ಬಾಲ್ಯದಲ್ಲಿ. 3-4 ವರ್ಷದ ಮಕ್ಕಳಲ್ಲಿ ಹಲವು ರೀತಿಯ ಭಯಗಳು ಕಂಡುಬರುತ್ತವೆಯಷ್ಟೆ. ಕತ್ತಲಲ್ಲಿ ದೆವ್ವ-ಪಿಶಾಚಿಗಳ ಭಯ, ಹೆತ್ತವರಿಂದ ದೂರವಾದೇನೆಂಬ ಹೆದರಿಕೆ, ಇಂಥವು. ಹಂತಹಂತವಾಗಿ ಮಕ್ಕಳು ಇಂಥ ಭಯಗಳಿಂದ ಹೊರಬರುತ್ತಾರೆ. ಇಷ್ಟೆಲ್ಲಾ ಭಯಗಳಿದ್ದರೂ 'ಸಾವಿನ ಭಯ ಚಿಕ್ಕಮಕ್ಕಳಲ್ಲಿ ಕಂಡುಬರುವುದು ಬಲು ಕಡಿಮೆ. ಸಾವು 'ಮತ್ತೆ ಮರಳಿ ಬಾರದಂತಹ ಅವಸ್ಥೆ' ಎಂಬ ತಿಳಿವು ಅವರಿಗಿರದಿರುವುದೇ ಇದಕ್ಕೆ ಪ್ರಮುಖ ಕಾರಣ. ಸುಮಾರು 7-8 ವರ್ಷಗಳ ಹೊತ್ತಿಗೆ ಸಾವು 'ಹಿಂದಿರುಗಿ ಬಾರದ ಸ್ಥಿತಿ' ಎಂಬುದು ಗೊತ್ತಾಗುತ್ತದೆ.

ನಮ್ಮ ವಾಹನಕ್ಕೆ ಅಪಘಾತವಾಗುವುದಿಲ್ಲ ಎಂದು ದೃಢವಾಗಿ ನಂಬಿರುತ್ತೇವೆ. ಬೇರೆಯವರಿಗೆ ಕೋವಿಡ್ ಬಂದು ಸಾಯಬಹುದು ಎಂದು ಒಪ್ಪಿದರೂ, ನಮಗೆ ಕೋವಿಡ್ ಬರಲು ಸಾಧ್ಯವಿಲ್ಲ ಎಂಬುದು ನಮ್ಮ ನಂಬಿಕೆ! ಮನೋವೈಜ್ಞಾನಿಕವಾಗಿಯೂ ಈ ನಂಬಿಕೆ ಜೀವಿಸಲು ಬಹು ಮುಖ್ಯ. ಸಿಗ್ಮಂಡ್ ಫ್ರಾಯ್ಡ್ ಪ್ರಕಾರ 'ನಮಗೆ ಯಾರಿಗೂ ನಮ್ಮ ಸಾವಿನಲ್ಲಿ ನಂಬಿಕೆಯೇ ಇಲ್ಲ'. ಅಂದರೆ ನಾವು ಸಾಯುವುದನ್ನು ಕಲ್ಪಿಸಿಕೊಳ್ಳಲೇ ಮನುಷ್ಯರಿಗೆ ಸಾಧ್ಯವಿಲ್ಲ. ಒಂದೊಮ್ಮೆ ನಾವು ಹಾಗೆ ಕಲ್ಪಿಸಿಕೊಳ್ಳಲು ಪ್ರಯತ್ನಿಸಿದರೆ, ನಾವಿನ್ನೂ ನಮ್ಮ ಸಾವಿನ ವೀಕ್ಷಕರೇ ಆಗಿರುತ್ತೇವಷ್ಟೇ. ಸುಪ್ತ ಮನಸ್ಸಿನಲ್ಲಿ ನಮಗಿರುವ ಗಟ್ಟಿ ಭರವಸೆ 'ನಾನು ಅಮರ' ಎನ್ನುವುದು!

'ಸಾವು' ಎಂಬುದು ಹೆಚ್ಚಿನವರಿಗೆ ಭಯ ಯಾವಾಗಲಾದರೊಮ್ಮೆ ತಂದರೂ ಕೆಲವರಿಗೆ ಅದು ಅತಿಭಯವಾಗಿ ಎರಗುತ್ತದೆ. ಇಲ್ಲಿ 'ಸಾವು' ಸಮಸ್ಯೆ ಎನ್ನುವುದಕ್ಕಿಂತ, 'ಸಾವಿನ ಭಯ'ವೇ ಸಮಸ್ಯೆ ಎನ್ನುವುದು ಗಮನಾರ್ಹ. ಆತಂಕಕ್ಕೆ ಸಂಬಂಧಿಸಿದ ಹಲವು ಕಾಯಿಲೆಗಳಲ್ಲಿ ಇದು ಕಂಡುಬರುತ್ತದೆ. ಮನೋವಿಜ್ಞಾನ ಇದನ್ನು 'ತೆನಟೋಫೋಬಿಯಾ' ಎಂದು ಕರೆಯುತ್ತದೆ.

'ಸಾವು' ಸಮಸ್ಯೆ ಎನ್ನುವುದಕ್ಕಿಂತ, 'ಸಾವಿನ ಭಯ'ವೇ ಸಮಸ್ಯೆ...

'ಸಾವಿನ ಭಯ' ಎಂದು ಮನೋವೈದ್ಯರ ಬಳಿ ಬರುವ ಬಹಳಷ್ಟು ಜನ ಹೇಳುವುದು 'ನನಗೆ ಏನಾದರೂ ಆದರೆ ಪರವಾಗಿಲ್ಲ ಡಾಕ್ಟ್ರೇ, ಆದರೆ ನನ್ನ ಚಿಕ್ಕ ಮಕ್ಕಳು ನಾನಿಲ್ಲದೆ ಹೇಗಿರುತ್ತಾರೋ ಎಂಬ ಚಿಂತೆ'. ಭಯದಲ್ಲಿ ಅವರು ಮತ್ತೆ ಮತ್ತೆ ತಮ್ಮ ಸಾವಿನ ಅನಂತರದಲ್ಲಿ ತಮ್ಮ ಮಕ್ಕಳು ಕಷ್ಟಪಡುವುದನ್ನು, ಚಿತ್ರಿಸಿಕೊಳ್ಳುವುದು ಸಾಮಾನ್ಯ. ವೃದ್ಧಾಪ್ಯದಲ್ಲಿ ಸಾವಿನ ಭಯದ ರೀತಿ ಬದಲಾಗುತ್ತದೆ.

ವೈಜ್ಞಾನಿಕವಾಗಿ ನಾವು ಸಾವನ್ನು ಕುರಿತು ಯೋಚಿಸುವ ರೀತಿ, ದೈನಂದಿನ ಬದುಕಿನಲ್ಲಿ ಧೋರಣೆ ಮತ್ತು ನಡವಳಿಕೆಯನ್ನು ನಿರ್ಧರಿಸುತ್ತದೆ. ಉದಾಹರಣೆಗೆ, 2016ರಲ್ಲಿ ನಡೆದ ಅಧ್ಯಯನವೊಂದರ ಪ್ರಕಾರ ಸಾವಿನ ಭಯ, ಸೇಡು ಮತ್ತು ರಾಜಕೀಯ ಹಿಂಸೆಯ ಮನೋಭಾವವನ್ನು ಹೆಚ್ಚಿಸಿದ್ದು ಕಂಡು ಬಂತು. ನೋವು ಮತ್ತ ಸಾವು ಎರಡರ ಬಗೆಗೂ ಪ್ರತ್ಯೇಕವಾಗಿ ಯೋಚಿಸಿ, ರಾಜಕೀಯ ಸಂಘರ್ಷಗಳ ಪರಿಹಾರವನ್ನು ಸೂಚಿಸಲು ಹೇಳಲಾಯಿತು. ಸಾವಿನ ಬಗ್ಗೆ ಕೇಂದ್ರೀಕರಿಸಿದ ಜನರು ಸೂಚಿಸಿದ ಮೊದಲ ಪರಿಹಾರ ಮಿಲಿಟರಿ ಕಾರ್ಯಾಚರಣೆ. ಸಾವಿನ ಭಯ, ಇತರ ಆತ್ಮೀಯರ ಸಾವಿನ ಶೋಕದ ಪ್ರಕ್ರಿಯೆಯನ್ನೂ ಸಂಕೀರ್ಣವಾಗಿಸುತ್ತದೆ.

ಮತ್ತೆ ಮತ್ತೆ ಅಪಾಯಕ್ಕೀಡಾಗುವುದು ಮೃತ್ಯುಭಯವನ್ನು ಕಡಿಮೆಯಾಗಿಸುವ ಬದಲು ಹೆಚ್ಚಿಸಬಹುದು. ದೈಹಿಕ ಆರೋಗ್ಯ ನಿರೀಕ್ಷೆಯಂತೆ ಮೃತ್ಯುಭಯವನ್ನು ಕಡಿಮೆ ಮಾಡುತ್ತದೆ. ಉತ್ತಮ ಸಂಬಂಧಗಳು, ಮತ್ತೊಬ್ಬರ ಬಳಿ ಆತಂಕಗಳನ್ನು ಹೇಳಿಕೊಳ್ಳುವುದು, ಸಾಮಾಜಿಕವಾಗಿ ಬೆರೆಯುವುದು ಭಯವನ್ನು ತಡೆಯುತ್ತದೆ. ವೃದ್ಧಾಪ್ಯದಲ್ಲಿರುವ ಹಿರಿಯರು ತಮ್ಮ ನಂತರದ ಪೀಳಿಗೆಯ ಕಿರಿಯರಿಗೆ ಮಾರ್ಗದರ್ಶನ ಮಾಡುವುದು, ತಮ್ಮ ಜೀವನದ ಹಿಂದಿನ ದಿನಗಳನ್ನು ಯಾವುದೇ ಪಶ್ಚಾತ್ತಾಪಗಳಿರದೆ ನೋಡುವ ಕಲೆಯನ್ನು ಕಲಿಸುವ ಅವಕಾಶ ತೆರೆಯುತ್ತದೆ. ಇದು ಸಾವನ್ನು 'ಸಹಜ ಹಂತ' ಎಂದು ಸ್ವೀಕರಿಸುವುದನ್ನು ಸಾಧ್ಯವಾಗಿಸುತ್ತದೆ. ಬದುಕಿಗೊಂದು ಅರ್ಥವನ್ನು ಹುಡುಕಿಕೊಳ್ಳುವುದು ಸಾವಿನ ಭಯವನ್ನು ಕಡಿಮೆಯಾಗಿಸುವುದಷ್ಟೇ ಅಲ್ಲ, ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ, ಸಾವಿನ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ. ಮಾರ್ಕ್ ಟ್ವೈನ್ ಹೇಳಿದ ಮಾತು: 'ಸಾವಿನ ಭಯವೆಂದರೆ, ಅದು ಹುಟ್ಟುವುದು ಬದುಕಲು ಹೆದರುವುದರಿಂದ! ಪೂರ್ಣವಾಗಿ ಬದುಕುವ ವ್ಯಕ್ತಿ ಯಾವ ಸಮಯದಲ್ಲಿಯೂ ಸಾಯಲು ಸಿದ್ಧನಾಗಿರುತ್ತಾನೆ!' ನಿಮ್ಮ ಕಲ್ಪನೆಯ ಅರ್ಥಪೂರ್ಣ ಬದುಕು ಯಾವುದೇ ಆಗಲಿ, ಅದನ್ನು ಬದುಕಲು ಆರಂಭಿಸಿ.

❖

ಕೊಲೆಸ್ಟ್ರಾಲ್ ಕ್ರೈಮ್ ಸ್ಟೋರಿ

ಕೆ. ಸಿ. ರಘು

ಕೊಲೆ ನಡೆದ ಜಾಗದಲ್ಲಿ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದು ಮಿಸ್ಟರ್ ಕೊಲೆಸ್ಟ್ರಾಲ್. ಇನ್ನೂ ನಿಖರವಾಗಿ ಹೇಳಬೇಕೆಂದರೆ ಮಿಸ್ಟರ್ ಎಲ್‌ಡಿಎಲ್ ಕೊಲೆಸ್ಟ್ರಾಲ್.

ಈ ಸ್ಪಷ್ಟನೆ ಏಕೆಂದರೆ ಕೊಲೆಸ್ಟ್ರಾಲ್ ಕುಟುಂಬದಲ್ಲಿ ಎಚ್‌ಡಿಎಲ್ ಮತ್ತು ವಿಎಲ್‌ಡಿಎಲ್ ಎಂಬ ಅಣ್ಣತಮ್ಮಂದಿರೂ ಇದ್ದಾರೆ. ಕೊಲೆಯನ್ನು ಹೃದಯಸ್ಪಂದನವನ್ನು ಹಿಸುಕಿ ಬಡಿತವನ್ನೇ ನಿಲ್ಲಿಸಿ ಮಾಡಲಾಗಿತ್ತು. ಕೊಲೆಯಾದ ಸ್ಥಳದಲ್ಲಿ ಸಿಕ್ಕಿದ್ದಾನೆಂಬ ಒಂದೇ ಕಾರಣಕ್ಕೆ ಎಲ್‌ಡಿಎಲ್ ಕೊಲೆಸ್ಟ್ರಾಲೇ ಕೊಲೆ ಮಾಡಿದ್ದೆಂದು ಹೇಳುವುದಾದರೂ ಹೇಗೆ? ಅಥವಾ ಆತನ ಮೂಲಕ ಈ ದುಷ್ಕೃತ್ಯವನ್ನು ಮಾಡಿಸಲಾಗಿದೆಯೇ? ಆತ ನಿಜವಾಗಿಯೂ ಆಕಸ್ಮಿಕವಾಗಿ ಅಲ್ಲಿ ಕಂಡುಬಂದದ್ದೇ? ಹೀಗೆ ಹತ್ತು ಹಲವು ಪ್ರಶ್ನೆಗಳು ಕ್ರೈಮ್ ಥ್ರಿಲ್ಲರ್ ಮಾದರಿಯಲ್ಲಿಯೇ ಹೊಳೆಯುವುದು ಸಹಜ.

ಕಾನೂನಿನಲ್ಲಿಯೂ ಒಂದು ಮಾತಿದೆ. ಸಾವಿರ ಅಪರಾಧಿಗಳಿಗೆ ಶಿಕ್ಷೆಯಾಗದಿದ್ದರೂ ಪರವಾಗಿಲ್ಲ, ಆದರೆ ಒಬ್ಬ ನಿರಪರಾಧಿಗೆ ಶಿಕ್ಷೆ ಆಗಕೂಡದು ಎಂದು. ಹಾಗೆಯೇ ಕಾನೂನುಗಳೆಲ್ಲವೂ ನ್ಯಾಯಕ್ಕೆ ಅಂಟಿಕೊಂಡಿವೆ ಎನ್ನುವುದೂ ತಪ್ಪೇ. ಇಲ್ಲಿ ನಡೆದಿರುವ ಅಪರಾಧವನ್ನು ವಿಶ್ಲೇಶಿಸುತ್ತಾ ಹೋದಾಗ ಸ್ಪೆಷಲ್ ಇನ್‌ವೆಸ್ಟಿಗೇಷನ್ ಟೀಮಿಗೆ ಕಾಣುವ ಕೆಲವು ವಿಚಾರಗಳು. ಎಲ್‌ಡಿಎಲ್ ಕೊಲೆಸ್ಟ್ರಾಲ್ ಜೊತೆಗೆ ಅವರ ದೊಡ್ಡಣ್ಣ ಸಾಧು-ಸಂತ ಎಚ್‌ಡಿಎಲ್ ಕೊಲೆಸ್ಟ್ರಾಲ್ ಏನಾದರೂ ಇದ್ದಿದ್ದರೆ ಎಲ್‌ಡಿಎಲ್ ಅನ್ನು ಈ ಕೆಲಸಕ್ಕೆ ಇಳಿಯಲು ಬಿಡುತ್ತಿರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಅವನಿಗೆ ಬುದ್ಧಿಯನ್ನು ಹೇಳಿ ಕೈಹಿಡಿದು ಸುರಕ್ಷಿತ ಸ್ಥಳಕ್ಕೆ ತಂದು ಕೂರಿಸುತ್ತಿದ್ದ. ಎಚ್‌ಡಿಎಲ್ ಅನ್ನು ಅಲ್ಲಿಲ್ಲದಂತೆ ಮಾಡಿ ಕುಗ್ಗಿಸಿ ಮತ್ತು ಕುಂದಿಸಿದ್ದು ಟ್ರೈಗ್ಲಿಸರೈಡ್ಸ್ ಎಂಬ ಇನ್ನೊಬ್ಬ ದಾಯಾದಿ. ಆ ದಾಯಾದಿಯ ಹುಟ್ಟು ಈ ಕೊಲೆಸ್ಟ್ರಾಲ್ ಕೊಬ್ಬಿನ ಕುಟುಂಬದ ಸದಸ್ಯರೇ ಅಲ್ಲದ M/s ಸ್ಟಾರ್ಚ್ ಅಂಡ್ ಶುಗರ್ ಫ್ಯಾಮಿಲಿ. ಆದರೆ ಈ ಕುಟುಂಬವನ್ನು ಕಟಕಟೆಯಲ್ಲಿ ನಿಲ್ಲಿಸುವುದಿಲ್ಲ. ಇದೇ ಸ್ಟಾರ್ಚ್ ಅಂಡ್ ಶುಗರ್ ಕುಟುಂಬ ಇನ್ಸುಲಿನ್‌ಗೆ ಹೆಂಡ ಕುಡಿಸಿ ಅಡ್ಡಾದಿಡ್ಡಿ ಬೀದಿರಂಪ ಮಾಡಿಸಿದ್ದರಿಂದ ಕೊಲೆಸ್ಟ್ರಾಲ್ ಈ ಕೆಲಸ ಮಾಡುವಂತಾಯಿತು ಎಂಬ ವಿಷಯವೂ ತಿಳಿದುಬರುತ್ತದೆ. ಜೊತೆಗೆ ಹೃದಯ ಮತ್ತು ದೇಹ ತನ್ನನ್ನು ತಾನು ರಕ್ಷಿಸಿಕೊಳ್ಳುವ ರಕ್ಷಣಾ ಕಾರ್ಯತಂತ್ರದಲ್ಲಿ ಆನುವಂಶಿಕವಾಗಿ ದೋಷಯುಕ್ತವಾದ್ದರಿಂದ ಕೊಲೆಸ್ಟ್ರಾಲನ್ನು ಕಂಟ್ರೋಲ್ ಮಾಡಲಾಗದೆ ತನ್ನ ಮೇಲೆ ತಾನೇ ಅನಾಹುತವನ್ನು ಎಳೆದುಕೊಂಡಿತೋ? ಮನೆಯ ಬೀಗಹಾಕದೆ ಹೃದಯದ ಕನ್ನಕ್ಕೆ ತಾನೇ ಎಡೆಮಾಡಿ ಕೊಟ್ಟ ತನ್ನ ಆಂತರ್ಯದ ದೋಷವನ್ನು ಪರಿಗಣಿಸದಿರುವುದು ಸರಿಯೇ?



ಕಾನೂನಿನಲ್ಲಿಯೂ ಯಾವುದೋ ಅಮಲಿನ ಉತ್ತೇಜನದಿಂದ ನಡೆದ ಅಪರಾಧಕ್ಕೆ ಸ್ವಲ್ಪ ವಿನಾಯಿತಿಯುಂಟು. ಈ ಕೊಲೆಸ್ಟ್ರಾಲ್‌ನ ಗುಣವೈಷಮ್ಯಕ್ಕೆ ಸೂರ್ಯನಮಸ್ಕಾರ ಉತ್ತಮವಾದ ಯೋಗ ಪರಿಹಾರ ಎನ್ನುವುದು ಸತ್ಯ. ಈ ಕೊಲೆಸ್ಟ್ರಾಲ್‌ನ ಕೆಟ್ಟಗುಣವನ್ನು ಮಿಸ್ಟರ್ ವಿಟಮಿನ್ ಡಿ ಆಗಿ ಪರಿವರ್ತಿಸಿ ಒಳ್ಳೆಯ ಕೆಲಸಕ್ಕೆ ಹಚ್ಚುವ ಕೆಲಸ ಮಾಡುವುದು ದೇಹವನ್ನು ಸೂರ್ಯನ ಬೆಳಕಿಗೆ ಒಡ್ಡಿದಾಗ. ಇದರೊಳಗೆ ಇನ್ನೊಂದು ಗುಮಾನಿ ಏನೆಂದರೆ ಇದೇ ಕೊಬ್ಬಿನ ಕುಟುಂಬದ ಸ್ಯಾಚುರೇಟ್ ಮತ್ತು ಲಿನೋಲಿಯೇಟ್ ಎಂಬ ಸದಸ್ಯರ ಪಾತ್ರವನ್ನೂ ಅಲ್ಲಗಳೆಯುವಂತಿಲ್ಲ ಎನ್ನುವುದು. ಸ್ಯಾಚುರೇಟ್ ಕೊಬ್ಬು ಹೆಚ್ಚಾದಂತೆಲ್ಲಾ ಎಲ್‌ಡಿಎಲ್‌ನ ದಮನಕಾರೀ ಗುಣ ಹೆಚ್ಚಾಗಿ ದೊಡ್ಡಣ್ಣ ಎ ಚ್‌ಡಿಎಲ್‌ನ ಸಾಧುಗುಣ ಸಂಕಟ ಪಡುವಂತಾಗುತ್ತದೆ. ಹಾಗೆಯೇ ಲಿನೋಲಿಯೇಟ್ (ಎನ್-6) ಹೃದಯದಲ್ಲಿ ಗಲಾಟೆ ಎಬ್ಬಿಸಿ ಕೊಲೆಸ್ಟ್ರಾಲ್ ಅನ್ನು ಪ್ರಚೋದಿಸಿ ಕೊಲೆಗೆ ಪ್ರೇರೇಪಿಸಿದ ಎನ್ನುವ ಮಾಹಿತಿಯೂ ಇದೆ. ವಿಜ್ಞಾನದ ಪರಿಭಾಷೆಯಲ್ಲಿ ಇದನ್ನು ಪ್ಲೇಟ್‌ಲೆಟ್ ಅಗ್ರಿಗೇಟರ್ ಎಂದು ಘೋಷಿಸಲಾಗಿದೆ. ಇತ್ತೀಚೆಗೆ ಇವರ ಜನಸಂಖ್ಯೆ ಮತ್ತು ಹಾವಳಿ ಹೆಚ್ಚಾಗಿದೆ ಎಂದು ಕಂಡುಬಂದಿದೆ. ಜೊತೆಗೆ ಮಾಫಿಯಾದಿಂದಲೇ ಮಾರುಕಟ್ಟೆಗೆ ಬಂದಿರುವ ಮಿಸ್ಟರ್ ವನಸ್ಪತಿಯ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಇದೇ ಕುಟುಂಬದ ಇನ್ನೊಬ್ಬ ಸದಸ್ಯ ಮಿಸ್ಟರ್ ಲಿನೋಲೆನೆಟ್ (ಎನ್-3) ಸಂಖ್ಯೆ ಮತ್ತು ಸಾಂದ್ರತೆ ಕಡಿಮೆಯಾಗಿರುವುದರಿಂದ ಎಲ್‌ಡಿಎಲ್ ಕೆಟ್ಟಕೆಲಸಕ್ಕೆ ಇಳಿಯಲು ಕಾರಣವಾಯಿತು. ಒಳ್ಳೆಯವರು ಒಂದಷ್ಟು ಸಂಖ್ಯೆಯಲ್ಲಿ ಇದ್ದರೆ ಅಂದರೆ ಕ್ರಿಟಿಕಲ್ ಮಾಸ್ ಎನ್ನುತ್ತಾರಲ್ಲಾ ಹಾಗೆ ಕೆಟ್ಟದ್ದು ನಡೆಯಲು ಅವಕಾಶಗಳು ಕಡಿಮೆಯಾಗುತ್ತಿದ್ದವು.

ಈ ನಡುವೆ ಈ ಕೊಲೆಸ್ಟ್ರಾಲ್ ಅನ್ನು ಒಂಟಿಯಾಗಿ ಬಿಡದೆ ಸದೃಢ ಮತ್ತು ಬಲಿಷ್ಠ ನಾರಿನೊಂದಿಗೆ (ಫೈಬರ್) ಕಟ್ಟಿಹಾಕಿದ್ದರೆ ಈ ಘಟನೆಯೇ ನಡೆಯುತ್ತಿರಲಿಲ್ಲ ಎನ್ನುವುದು ಫೊರೆನ್ಸಿಕ್ ಆಡಿಟ್ ಮೂಲಕ ತಿಳಿದಿದೆ.

ಕೊಲೆಯ ಹಣೆಪಟ್ಟಿಕಟ್ಟುವುದು ಸುಲಭ. ಇದು ದೈತ್ಯಲಾಭ ಪಡೆದುಕೊಳ್ಳುವ ಮಿಸ್ಟರ್ ಫಾರ್ಮಾ ಕುಟುಂಬದ ಕೈಚಳಕ ಎನ್ನುವ ಮಾತೂ ಕೇಳಿಬರುತ್ತಿದೆ. ಶರ್ಲಾಕ್ ಹೋಮ್ಸ್ 'Nothing is more misleading than obvious' ಎಂದಿದ್ದ. ❖



ಸುಭಾಷಿತ

ಸರಿಯಾದ ಕೆಲಸವನ್ನು ಮಾಡಲು ಯಾರು ಕಠಿಣ ಪ್ರಯತ್ನ ಮಾಡುತ್ತಾರೋ ಅಂತಹವರು ಯಾವಾಗಲೂ ಹುಚ್ಚರಂತೆ ಭಾಸವಾಗುತ್ತಾರೆ.
-ಸ್ಟೀಫನ್ ಕಿಂಗ್

ಟ್ವೆಂಟಿ-20 ಕ್ರಿಕೆಟ್ ವಿಶ್ವಕಪ್ ವೈಫಲ್ಯ ಕಲಿಸುವುದೇ ಪಾಠ?

ಈ ಸಲದ ಟ್ವೆಂಟಿ-20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿ ಕಣಕ್ಕಿಳಿದಿದ್ದ ಭಾರತ ತಂಡವು ನಾಲ್ಕರ ಘಟ್ಟ ಪ್ರವೇಶಿಸಲೂ ಸಾಧ್ಯವಾಗದೆ ಹೊರಬಿದ್ದಿದೆ. ಸೋಲು ಮತ್ತು ಗೆಲುವು ಆಟದ ಅವಿಭಾಜ್ಯ ಅಂಗ. ಆದರೆ ಸಾಮರ್ಥ್ಯಕ್ಕೆ ತಕ್ಕಂತೆ ಹೋರಾಟ ಮಾಡದೇ ಸೋಲುವುದನ್ನು ಶರಣಾಗತಿ ಎನ್ನಬಹುದು. ಅಂತಹ ಸೋಲನ್ನು ಭಾರತ ತಂಡ ಈ ಬಾರಿ ಅನುಭವಿಸಿದೆ. ಸೂಪರ್ 12ರ ಹಂತದ ಮೊದಲ ಎರಡು ಪಂದ್ಯಗಳಲ್ಲಿ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ವಿರುದ್ಧ ದಿಟ್ಟ ಹೋರಾಟ ನಡೆಸುವಲ್ಲಿ ತಂಡ ವಿಫಲವಾಗಿತ್ತು. ಆಟಗಾರರ ಹಾವಭಾವಗಳಲ್ಲಿ ಗೆಲುವಿನ ತುಡಿತ, ಛಲ ಕಾಣಲೇ ಇಲ್ಲ. ತಂಡವು ನಾಲ್ಕರ ಘಟ್ಟಕ್ಕೆ ಪ್ರವೇಶಿಸುವ ಅವಕಾಶ ಕಳೆದುಕೊಳ್ಳುವುದು ಆಗಲೇ ಬಹುತೇಕ ಖಚಿತವಾಗಿತ್ತು. ಭಾನುವಾರ ಅಫ್ಗಾನಿಸ್ತಾನ ತಂಡವು ನ್ಯೂಜಿಲೆಂಡ್ ಎದುರು ಸೋತ ನಂತರ ಇದ್ದ ಸಣ್ಣ ಆಸೆಯೂ ಕಮರಿತು. ಒಂಬತ್ತು ವರ್ಷಗಳ ನಂತರ ತಂಡವು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಲೂ ಸಾಧ್ಯವಾಗದೆ ನಿರಾಶೆ ಅನುಭವಿಸಿದೆ. ವ್ಯಾಪಕ ಟೀಕೆಗಳಿಗೆ ಗುರಿಯಾಗಿರುವ ತಂಡವು ಸಮಜಾಯಿಷಿ ಕೊಡಲು ವಿಧವಿಧವಾಗಿ ಪ್ರಯತ್ನಿಸುತ್ತಿದೆ. ಕಳೆದ ಆರು ತಿಂಗಳುಗಳಿಂದ ಆಟಗಾರರು ಮನೆಯಿಂದ ದೂರ ಇದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿ ಮತ್ತು ವಿಶ್ವಕಪ್ ಟೂರ್ನಿ ನಡುವೆ ಬಿಡುವು ಇರಲಿಲ್ಲ. ಟಾಸ್ ಗೆದ್ದವರಿಗೆ ಪಂದ್ಯ ಗೆಲ್ಲುವ ಅವಕಾಶ ಹೆಚ್ಚು ಸಿಕ್ಕಿದೆ. ಜೀವ ಸುರಕ್ಷಾ ವಲಯದ (ಬಯೋಬಬಲ್) ಕಟ್ಟಲೆಗಳಲ್ಲಿ ಬಹುಕಾಲದಿಂದ ವಾಸವಿರುವುದರಿಂದ ಆಗಿರುವ ದಣಿವು ಉತ್ತಮ ಸಾಮರ್ಥ್ಯ ತೋರದೇ ಇರುವುದಕ್ಕೆ ಕಾರಣ ಎಂದು ತಂಡದ ಬೌಲಿಂಗ್ ಕೋಚ್ ಭರತ್ ಅರುಣ್ ಹೇಳಿದ್ದಾರೆ. ಆದರೆ, ಇವೆಲ್ಲವೂ ಭಾರತದ ಆಟಗಾರರ ಮೇಲಷ್ಟೇ ಪರಿಣಾಮ ಬೀರಿವೆಯೇ ಎಂಬ ಪ್ರಶ್ನೆ ಮೂಡುತ್ತದೆ. ಐಪಿಎಲ್ ಸೇರಿದಂತೆ ಬೇರೆ ಬೇರೆ ಟೂರ್ನಿಗಳಲ್ಲಿ ಆಡಿದ ಆಟಗಾರರು ಇರುವ ಇಂಗ್ಲೆಂಡ್, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ತಂಡಗಳು ಸೆಮಿಫೈನಲ್ ಪ್ರವೇಶಿಸಿದ್ದು ಹೇಗೆ?



ತಂಡದ ಆಯ್ಕೆಯಲ್ಲಿ ಆಗಿರುವ ಲೋಪಗಳೇ ಸೋಲಿಗೆ ಕಾರಣವಾದವೇ?

ಐಪಿಎಲ್ ಮತ್ತು ವಿಶ್ವಕಪ್ ಟೂರ್ನಿಗಳೆರಡಕ್ಕೂ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯೇ ಆತಿಥ್ಯ ವಹಿಸಿದೆ. ಆದ್ದರಿಂದ ಎರಡೂ ಟೂರ್ನಿಗಳ ಆಯೋಜನೆಯ ಕುರಿತು ಸರಿಯಾದ ಯೋಜನೆ ರೂಪಿಸುವ ಹೊಣೆ ಮಂಡಳಿಯದ್ದೇ ಆಗಿತ್ತು. ಆದರೆ ಹಣದ ಹೊಳೆ ಹರಿಸುವ ಐಪಿಎಲ್‌ಗೇ ಆದ್ಯತೆ ಕೊಟ್ಟಿದ್ದನ್ನು ಕಪಿಲ್ ದೇವ್ ಸೇರಿದಂತೆ ಹಲವರು ಟೀಕಿಸಿದ್ದಾರೆ. ಒಂದೂವರೆ ವರ್ಷದಿಂದ ಆಟಗಾರರಿಗೆ ಬಯೋಬಬಲ್ ವ್ಯವಸ್ಥೆ ರೂಢಿಯಾಗಿದೆ. ಕುಟುಂಬದೊಂದಿಗೆ ಪ್ರಯಾಣ ಮಾಡುವ ಅವಕಾಶವನ್ನೂ ಆಯೋಜಕರು ಆಟಗಾರರಿಗೆ ನೀಡಿದ್ದರು. ಆದ್ದರಿಂದ ಬೇರೆಲ್ಲ ಕಾರಣಗಳಿಗಿಂತ ಸೋಲಿಗೆ ಪ್ರಮುಖವಾಗಿ ಆಡುವ ಹನ್ನೊಂದರ ಬಳಗದ ಆಯ್ಕೆಯಲ್ಲಿ ಆಗಿರುವ ಲೋಪವೇ ಪ್ರಮುಖವಾಗಿದೆ ಎಂಬುದು ಮೇಲ್ನೋಟಕ್ಕೇ ಕಂಡುಬರುತ್ತದೆ. ಎರಡೂ ಪ್ರಬಲ ತಂಡಗಳ ಎದುರು ಹೊಸಪ್ರತಿಭೆ ವರುಣ್ ಚಕ್ರವರ್ತಿ ಅವರನ್ನು ಕಣಕ್ಕಿಳಿಸಿದ್ದು ಲೋಪ. ಅನುಭವಿ ಆರ್. ಅಶ್ವಿನ್ ಮತ್ತು ಪ್ರತಿಭಾವಂತ ಸ್ಪಿನ್ನರ್ ರಾಹುಲ್ ಚಾಹರ್ ಅವರನ್ನು ಬೆಂಚ್‌ನಲ್ಲಿ ಕೂರಿಸಿ ಅನನುಭವಿ ವರುಣ್‌ಗೆ ಅವಕಾಶ ಕೊಟ್ಟಿದ್ದು ಟೀಕೆಗಳಿಗೆ ಕಾರಣವಾಯಿತು. ಅಲ್ಲದೇ ಟಿ20 ಕ್ರಿಕೆಟ್ ಮಾದರಿಯ ಪರಿಣತ ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರನ್ನು ಆಯ್ಕೆಗೆ ಪರಿಗಣಿಸಿರಲಿಲ್ಲವೆನ್ನುವುದು ಸೋಜಿಗ. ಐಪಿಎಲ್ ಟೂರ್ನಿಯ 14ನೇ ಆವೃತ್ತಿಯಲ್ಲಿ ಉತ್ತಮವಾಗಿ ಆಡಿದ್ದ ಚಾಹಲ್ ಅವರತ್ತ ಆಯ್ಕೆ ಸಮಿತಿ ಹೊರಳಿ ನೋಡಲಿಲ್ಲ. ಕೆಲಕಾಲದಿಂದ ಫಿಟ್‌ನೆಸ್ ಇಲ್ಲದೇ ಪರದಾಡುತ್ತಿರುವ ಹಾರ್ದಿಕ್ ಪಾಂಡ್ಯ ಅವರಿಗೆ ಪದೇ ಪದೇ ಅವಕಾಶ ಕೊಟ್ಟಿರುವ ಬಗ್ಗೆಯೂ ತಂಡದ ವ್ಯವಸ್ಥಾಪಕರು ಉತ್ತರ ಕೊಡಬೇಕು. ಅವರು ಬೌಲಿಂಗ್ ಮಾಡಲು ಅಸಮರ್ಥರಾಗಿದ್ದು ಬ್ಯಾಟಿಂಗ್‌ನಲ್ಲಿಯೂ ಫಾರ್ಮ್‌ನಲ್ಲಿರಲಿಲ್ಲ. ಅವರಿಗಿಂತ ಸಮರ್ಥರಾಗಿರುವವರು ತಂಡದಲ್ಲಿದ್ದರೂ ಹಾರ್ದಿಕ್‌ಗೇ ಅವಕಾಶ ನೀಡಲಾಗಿತ್ತು. ಅವರು ವಿಫಲರಾದರು. ಇವೆಲ್ಲದರ ಪರಿಣಾಮವಾಗಿ ಐಸಿಸಿ ವಿಶ್ವಕಪ್ ಟೂರ್ನಿಗಳ ಇತಿಹಾಸದಲ್ಲಿಯೇ ಪಾಕಿಸ್ತಾನದ ಎದುರು ಮೊದಲ ಬಾರಿ ಸೋಲು ಅನುಭವಿಸಬೇಕಾಯಿತು.

ಇನ್ನೊಂದೆಡೆ ವಿಶ್ವಕಪ್ ಟೂರ್ನಿ ಆರಂಭಕ್ಕೂ ಮೊದಲೇ ತಾವು ಭಾರತ ಟಿ20 ಕ್ರಿಕೆಟ್ ತಂಡದ ನಾಯಕತ್ವ ಬಿಡುವುದಾಗಿ ವಿರಾಟ್ ಕೊಹ್ಲಿ ಘೋಷಿಸಿದ್ದರು. ಈ ಟೂರ್ನಿಯ ನಂತರ ಮುಖ್ಯ ಕೋಚ್ ಹುದ್ದೆಯಿಂದ ರವಿಶಾಸ್ತ್ರಿ, ಬೌಲಿಂಗ್ ಕೋಚ್ ಭರತ್ ಅರುಣ್ ಅವರು ನಿರ್ಗಮಿಸುತ್ತಿರುವುದನ್ನು ಕೂಡ ಪ್ರಕಟಿಸಲಾಗಿತ್ತು. ಇದರಿಂದಾಗಿ ತಂಡದಲ್ಲಿ ಅಸಮತೋಲನ ಮೂಡಿರುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ. ಇದಲ್ಲದೇ ಮಾಜಿ ನಾಯಕ ಮಹೇಂದ್ರಸಿಂಗ್ ಧೋನಿ ಅವರನ್ನು ತಂಡದ ಮಾರ್ಗದರ್ಶಕರನ್ನಾಗಿ ನೇಮಕ ಮಾಡಿ ಬಿಸಿಸಿಐ ಅಚ್ಚರಿ ಮೂಡಿಸಿತ್ತು. ರವಿಶಾಸ್ತ್ರಿಯಂತಹ ದಿಗ್ಗಜ ಆಟಗಾರ ಕೋಚ್ ಆಗಿದ್ದರೂ ಧೋನಿಯನ್ನು ಮೆಂಟರ್ ಆಗಿ ಮಾಡಿದ್ದು ಸೋಜಿಗ. ಅಷ್ಟಕ್ಕೂ ಅವರಿಗೆ ಸಿಕ್ಕಿದ್ದು ಅಲ್ಪಸಮಯ ಮಾತ್ರ. ಧೋನಿ ಭಾರತ ಕ್ರಿಕೆಟ್‌ನ ಯಶಸ್ವಿ ಮತ್ತು ಚಾಣಾಕ್ಷ ನಾಯಕ ಎಂಬುದರಲ್ಲಿ ಎರಡು ಮಾತಿಲ್ಲ. ಅವರ ಮುಂದಾಳತ್ವದಲ್ಲಿ ತಂಡವು 2007ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಆಗಿತ್ತು. 2014ರಲ್ಲಿ ರನ್ನರ್ಸ್ ಅಪ್ ಮತ್ತು 2016ರಲ್ಲಿ ಸೆಮಿಫೈನಲ್ ತಲುಪಿತ್ತು. ಕೊಹ್ಲಿ ಇದೇ ಮೊದಲ ಬಾರಿಗೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ತಂಡವನ್ನು ಮುನ್ನಡೆಸಿದ್ದರು. 2014ರಲ್ಲಿ ಟೆಸ್ಟ್ ತಂಡ ಮತ್ತು 2017ರಲ್ಲಿ ಸೀಮಿತ ಓವರ್‌ಗಳ ತಂಡಕ್ಕೆ ವಿರಾಟ್ ನಾಯಕರಾದ ನಂತರ ತಂಡವು ಒಂದೂ ಐಸಿಸಿ ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿಲ್ಲ. ಚಾಂಪಿಯನ್ಸ್ ಟ್ರೋಫಿ, ಏಕದಿನ ವಿಶ್ವಕಪ್, ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಟೂರ್ನಿಗಳಲ್ಲಿ ಅನುಭವಿಸಿದ್ದ ವೈಫಲ್ಯಗಳಿಂದ ಪಾಠ ಕಲಿಯದ ತಂಡವು ಈ ಬಾರಿಯೂ ದಂಡ ತೆತ್ತಿತು. ಮುಂದಿನ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ವಿರಾಟ್ ನಾಯಕತ್ವ ಇರುವುದಿಲ್ಲ. ನಾಯಕ ಸ್ಥಾನಕ್ಕೆ ರೋಹಿತ್ ಶರ್ಮಾ ಹೆಸರು ಬಲವಾಗಿ ಕೇಳಿಬಂದಿದೆ. ನಾಯಕರು ಯಾರೇ ಆಗಲಿ, ಮುಖ್ಯ ಕೋಚ್ ದ್ರಾವಿಡ್ ಹೆಗಲಿಗೆ ಹೆಚ್ಚಿನ ಜವಾಬ್ದಾರಿ ಬೀಳುವುದು ಖಚಿತ.

ದಿನದ ಟ್ವೀಟ್



ಕನ್ನಡಪರ ನಿಲುವೆಂದರೆ...

ಕನ್ನಡಿಗರಿಗೆ ಕನ್ನಡದಲ್ಲೇ ಜಗತ್ತಿನ ಜ್ಞಾನ, ಮನರಂಜನೆ ಎಲ್ಲವೂ ಸಿಗುವುದಕ್ಕಿಂತ ಕನ್ನಡಪರವಾದ ನಿಲುವು ಯಾವುದೂ ಇಲ್ಲ. ಲ್ಯಾಂಗ್ವೇಜ್ ಪ್ಲಾನಿಂಗ್‌ನಲ್ಲಿ ಭಾಷೆಯ ಸಾಧ್ಯತೆ ಹೆಚ್ಚಿಸುವ ಸಾಧನವಾಗಿ ಡಬ್ಬಿಂಗ್ ಅನ್ನು ನೋಡುವುದರಿಂದಲೇ ಅದು ಬಾರ್ಸಿಲೋನಾ ಭಾಷಾ ಹಕ್ಕುಗಳ ಪಟ್ಟಿಯಲ್ಲೂ ಪ್ರಸ್ತಾಪವಾಗಿದೆ.

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ

ಭಾರತದ ಕ್ರಿಕೆಟಿಗರು ರಾಷ್ಟ್ರೀಯ ತಂಡಕ್ಕಾಗಿ ಆಡುವುದಕ್ಕೆ ಪ್ರಾಶಸ್ತ್ಯ ನೀಡಬೇಕು. ದೇಶಕ್ಕಿಂತ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಗೆ ಆದ್ಯತೆ ಕೊಟ್ಟರೆ ಏನಾಗುತ್ತದೆ ಎನ್ನುವುದನ್ನು ಈಗ ನೋಡಿದ್ದೇವೆ. ದೇಶಕ್ಕಾಗಿ ಆಡುವುದು ದೊಡ್ಡ ಗೌರವ ಎನ್ನುವುದನ್ನು ಆಟಗಾರರು ತಿಳಿಯಬೇಕು.



ಕಪಿಲ್ ದೇವ್, ಭಾರತ ತಂಡದ ಮಾಜಿ ನಾಯಕ

25 ವರ್ಷಗಳ ಹಿಂದೆ

ಶನಿವಾರ, 9-11-1996

• ಚಂಡಮಾರುತಕ್ಕೆ 1000 ಬಲಿ

ಹೈದರಾಬಾದ್, ನ. 8 (ಪಿಟಿಐ)– ಆಂಧ್ರಪ್ರದೇಶದ ಕರಾವಳಿ ಪ್ರದೇಶದಲ್ಲಿ ಬೀಸಿದ ಭೀಕರ ಚಂಡಮಾರುತದಲ್ಲಿ ಮೃತಪಟ್ಟವರ ಸಂಖ್ಯೆ ಒಂದು ಸಾವಿರಕ್ಕೂ ಹೆಚ್ಚಿರುವ ಸಾಧ್ಯತೆಗಳಿದ್ದು, ಕನಿಷ್ಠ ಎರಡು ಸಾವಿರ ಕೋಟಿ ರೂಪಾಯಿಗಳ ನಷ್ಟ ಸಂಭವಿಸಬಹುದು ಎಂದು ಹಾನಿಗೀಡಾದ ಪ್ರದೇಶಗಳಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಇಂದು ಇಲ್ಲಿ ಪ್ರಕಟಿಸಿದರು.

1977ರಲ್ಲಿ ಸುಮಾರು ಹತ್ತು ಸಾವಿರ ಜನರನ್ನು ಬಲಿ ತೆಗೆದುಕೊಂಡಿದ್ದ ಚಂಡಮಾರುತ ಸಂದರ್ಭದಲ್ಲಿ ಸಂಭವಿಸಿದ ಹಾನಿಗಿಂತ ಈ ಬಾರಿ ಹೆಚ್ಚು ಹಾನಿ ಸಂಭವಿಸಿದೆ ಎಂದು ಅವರು ಹೇಳಿದರು. ಕೋನಸೀಮ ಪ್ರದೇಶವೊಂದರಲ್ಲೇ ಸುಮಾರು ಎಂಟು ಲಕ್ಷ ಹೆಕ್ಟೇರ್‌ಗಳಷ್ಟು ಪ್ರದೇಶದಲ್ಲಿ ಬೆಳೆದು ನಿಂತಿದ್ದ ಭತ್ತದ ಪೈರು ನಾಶವಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

• ಜೆಎಂಎಂ: ರಾವ್‌ಗೆ ನಿರೀಕ್ಷಣಾ ಜಾಮೀನು

ನವದೆಹಲಿ, ನ. 8 (ಯುಎನ್‌ಐ, ಪಿಟಿಐ)– ಜೆಎಂಎಂ ಲಂಚ ಪ್ರಕರಣದಲ್ಲಿ ದೆಹಲಿ ಹೈಕೋರ್ಟಿನಿಂದ ಇಂದು ನಿರೀಕ್ಷಣಾ ಜಾಮೀನು ಪಡೆದಿರುವ ಮಾಜಿ ಪ್ರಧಾನಿ ಪಿ.ವಿ.ನರಸಿಂಹ ರಾವ್ ಅವರಿಗೆ ಸೇಂಟ್ ಕಿಟ್ಸ್ ಫೋರ್ಜರಿ ಪ್ರಕರಣದಲ್ಲೂ ತಾತ್ಕಾಲಿಕ ಜಾಮೀನು ಸಿಕ್ಕಿದೆ.

50 ವರ್ಷಗಳ ಹಿಂದೆ

ಮಂಗಳವಾರ, 9-11-1971

• ನಿತ್ಯಬಳಕೆ ವಸ್ತುಗಳ ಅಕ್ರಮ ವ್ಯವಹಾರದ ವಿರುದ್ಧ ಎಚ್ಚರಿಕೆ

ಬೆಂಗಳೂರು, ನ. 8 – ನಿತ್ಯ ಬಳಕೆ ವಸ್ತುಗಳಲ್ಲಿ ಅಕ್ರಮ ವ್ಯವಹಾರ ನಡೆಸುವವರ ವಿರುದ್ಧ ಸರ್ಕಾರದ ಕ್ರಮ ಮುಂದುವರಿಯುವುದು ಎಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ಇಲ್ಲಿ ಹೇಳಿದರು.

ಐದು ವರ್ಷಗಳ ಹಿಂದೆ ಆರಂಭವಾದ ಬೆಂಗಳೂರಿನ ಜನತಾ ಬಜಾರಿನ ವಾರ್ಷಿಕೋತ್ಸವವನ್ನು ಉದ್ಘಾಟಿಸಿದ ರಾಜ್ಯಪಾಲರು, ‘ಬೆಲೆ ಏರಿಕೆಯ ಬಿಕ್ಕಟ್ಟಿನ ಕಾಲದಲ್ಲಿ ಜನ್ಮ ತಾಳಿದ ಜನತಾ ಬಜಾರ್‌ನ ಕಾರ್ಯ ಮುಗಿದಿಲ್ಲ. ಬಿಕ್ಕಟ್ಟು ಇಂದೂ ಇದೆ. ಬೆಲೆ ಏರಿಕೆ ತಡೆಯುವಲ್ಲಿ ಅದು ವಹಿಸಬೇಕಾದ ಪಾತ್ರ ಅಪಾರವಿದೆ’ ಎಂದರು.

ಹಸಿವುಮುಕ್ತ ದೇಶಕ್ಕಾಗಿ ಸುಸ್ಥಿರ ಕೃಷಿಯನ್ನು ವೈಜ್ಞಾನಿಕವಾಗಿ ಬಲಪಡಿಸಬೇಕಾಗಿದೆ

ಕೃಷಿ ಅಭಿವೃದ್ಧಿ ಮತ್ತು ಆಧುನಿಕ ವಿಜ್ಞಾನ



ವಿಶ್ಲೇಷಣೆ

ಪ್ರೊ. ಶಾಂತು ಶಾಂತಾರಾಮ್

ಭಾರತದ ಪ್ರಜೆಗಳಲ್ಲಿ ಹತ್ತರಲ್ಲಿ ಒಬ್ಬ ಹಸಿವಿನಿಂದ ಬಳಲುತ್ತಿದ್ದಾನೆ. ಯಾರು ಏನೇ ಹೇಳಲಿ ಪ್ರಪಂಚದ ಎಲ್ಲ ದೇಶಗಳಲ್ಲೂ ಹಸಿವಿನಿಂದ ಬಳಲುವ ಪ್ರಜೆಗಳು ಇದ್ದಾರೆ. ತಮ್ಮ ದೇಶದಲ್ಲಿ ಹಸಿವಿನಿಂದ ಪ್ರಜೆಗಳು ಸಾಯುತ್ತಿದ್ದಾರೆ ಎಂಬುದನ್ನು ಯಾವುದೇ ದೇಶದ ರಾಜಕಾರಣಿ ಒಪ್ಪಿಕೊಳ್ಳುವುದಿಲ್ಲ. ಆದರೂ ಶೂನ್ಯ ಹಸಿವಿನ ಜಗತ್ತು ಸ್ಥಾಪಿಸಬೇಕೆಂದು ಎಲ್ಲಾ ದೇಶಗಳ ನಾಯಕರು ವಿಶ್ವಸಂಸ್ಥೆಯಲ್ಲಿ ಒಕ್ಕೊರಲಿನಿಂದ ಪ್ರಮಾಣ ಮಾಡುತ್ತಾರೆ. ಹಾಗಾದರೆ ಶೂನ್ಯ ಹಸಿವಿನ ಸ್ಥಿತಿಗೆ ಬರಬೇಕಾದರೆ ಏನು ಮಾಡಬೇಕು?


ಮೊದಲನೆಯದಾಗಿ, ಕೃಷಿ ಚಟುವಟಿಕೆಯನ್ನು ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಆಧುನಿಕಗೊಳಿಸಬೇಕು. ಎರಡನೆಯದು, ಆಹಾರ ಸರಬರಾಜು ವ್ಯವಸ್ಥೆಯಲ್ಲಿ ಇರುವ ಅಡ್ಡಿ-ಅಡಚಣೆಗಳನ್ನು ನಿವಾರಿಸಬೇಕು. ಭಾರತದಲ್ಲಿ ಭಾರತೀಯ ಆಹಾರ ನಿಗಮ (ಎಫ್‌ಸಿಐ) ಎಂಬ ಸಂಸ್ಥೆಯನ್ನು ಸ್ಥಾಪಿಸಿ ದಶಕಗಳೇ ಕಳೆದಿವೆ. ಆದರೂ ಆ ಸಂಸ್ಥೆಯ ಕಾರ್ಯನಿರ್ವಹಣೆಯನ್ನು ಮೆಚ್ಚುಗೆಗೆ ಅರ್ಹವಾಗುವ ಮಟ್ಟಕ್ಕೆ ತರಲು ಇನ್ನೂ ಸಾಧ್ಯವಾಗಿಲ್ಲ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಎಷ್ಟೇ ಮಹತ್ತರ ಉದ್ದೇಶಗಳನ್ನು ಇಟ್ಟುಕೊಂಡು ಸ್ಥಾಪಿಸಿದರೂ ಅವುಗಳ ಕಾರ್ಯನಿರ್ವಹಣೆ ಜನೋಪಕಾರಿಯಾಗಿ ಸಾಧುವಾಗುವುದೇ ಇಲ್ಲ. ಅನ್ನಭಾಗ್ಯ ಮತ್ತು ಇಂದಿರಾ ಕ್ಯಾಂಟೀನ್‌ಗಳನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಅವುಗಳ ಪ್ರಯೋಜನ ಮತ್ತು ಪರಿಣಾಮಗಳ ಕುರಿತು ವಸ್ತುನಿಷ್ಠವಾಗಿ ತಿಳಿದುಕೊಳ್ಳುವುದಕ್ಕೆ ನಮಗೆ ಇನ್ನೂ ಸಾಧ್ಯವಾಗುತ್ತಿಲ್ಲ. ಕಾರಣ ಅವುಗಳ ಸುತ್ತಲೂ ಸುತ್ತುತ್ತಿರುವ ರಾಜಕಾರಣ.

ಇಲ್ಲಿ ಆಧುನೀಕರಣಗೊಳಿಸುವುದು ಎಂದರೇನು ಎಂಬ ಪ್ರಶ್ನೆ ಮಹತ್ವ ಪಡೆದುಕೊಳ್ಳುತ್ತದೆ. ಈ ಪ್ರಶ್ನೆಗೆ ಗೋಚರವಾಗುವ ಒಂದೇ ಒಂದು ಉತ್ತರವೆಂದರೆ, ಆಧುನಿಕ ಜೈವಿಕ ವಿಜ್ಞಾನದ ಆವಿಷ್ಕಾರಗಳು. ಭಾರತದ ಹಸಿರುಕ್ರಾಂತಿಯ ಹರಿಕಾರ ಡಾ. ಎಂ.ಎಸ್. ಸ್ವಾಮಿನಾಥನ್ ಇಪ್ಪತ್ತು ವರ್ಷಗಳ ಹಿಂದೆಯೇ ಹೇಳಿದಂತೆ, ಹಸಿರುಕ್ರಾಂತಿ ಬಳಲಿ ದಶಕಗಳೇ ಕಳೆದಿವೆ. ಹೊಸ ವಿಜ್ಞಾನದ ಅವಶ್ಯಕತೆ ಬಂದಿದೆ. ಭಾರತದ 21ನೇ ಶತಮಾನದ ಪ್ರಗತಿಯು ಆಧುನಿಕ ತಂತ್ರಜ್ಞಾನದಿಂದಲೇ ಸಾಧ್ಯ ಎಂದು ಎ.ಪಿ.ಜೆ. ಅಬ್ದುಲ್ ಕಲಾಂ ಅವರೂ ಹೇಳಿದ್ದರು. ದೇಶದ ಜನಸಂಖ್ಯೆ ಅಧಿಕವಾಗುತ್ತಲೇ ಇದೆ. ವಿಶ್ವ ಆಹಾರ ಸಂಸ್ಥೆಯ ಪ್ರಕಾರ, 2050ನೇ ಇಸವಿಯ ಹೊತ್ತಿಗೆ ಪ್ರಪಂಚದ ಜನಸಂಖ್ಯೆ 1,000 ಕೋಟಿ ತಲುಪಲಿದೆ. ಅದೇ ಸಮಯದಲ್ಲಿ ಭಾರತದ ಜನಸಂಖ್ಯೆ 150 ಕೋಟಿ ಆಗಲಿದೆ.

ಮತ್ತೊಂದು ಗಹನವಾದ ಸಂಗತಿಯೆಂದರೆ, ಅಧಿಕವಾಗಿರುವ ಜಗತ್ತಿನ ತಾಪಮಾನ ಈಗಾಗಲೇ ಕೃಷಿಯ ಮೇಲೆ ಬಹಳಷ್ಟು ಪ್ರಭಾವ ಬೀರಿ, ಇಳುವರಿಯನ್ನು ಕಡಿಮೆ ಮಾಡುತ್ತಿದೆ. ಜೊತೆಗೆ ಆಹಾರ ಸರಬರಾಜು ವ್ಯವಸ್ಥೆಯನ್ನು ಸಹ ಅಸ್ತವ್ಯಸ್ತಗೊಳಿಸುತ್ತಿದೆ. ಈ ಎರಡೂ ಕಂಟಕಗಳನ್ನು ಎದುರಿಸಬೇಕಾದರೆ ವಿಜ್ಞಾನ ಆಧಾರಿತ ಉಪಾಯಗಳನ್ನು ಅಳವಡಿಸಿಕೊಳ್ಳದೆ, ಅತ್ಯಾಧುನಿಕ ಸಲಕರಣೆಗಳನ್ನು ಬಳಸಿಕೊಳ್ಳದೆ ಬೇರೆ ಮಾರ್ಗವೇ ಇಲ್ಲ.

ಹಸಿವು ನಿವಾರಣೆ ಹಾಗೂ ಪರಿಸರ ರಕ್ಷಣೆಗೆ ವಿಶ್ವಸಂಸ್ಥೆಯ 2021ನೇ ಸಾಲಿನ ವೈಜ್ಞಾನಿಕ ಸಲಹಾ ಸಮಿತಿಯು ಏಳು ಉಪಯುಕ್ತ ಸಲಹೆಗಳನ್ನು ನೀಡಿದೆ. ಅವುಗಳೆಂದರೆ:

1. ಹಸಿವನ್ನು ನಿವಾರಿಸಲು ಬಹುರೂಪಿ ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಸುಸ್ಥಿರ ಕೃಷಿ ಪದ್ಧತಿಗೆ ಅತ್ಯಾಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು. ಸಮಾಜದ ಸುಸ್ಥಿರತೆಗೆ ಸಮರ್ಪಕ ರೀತಿಯಲ್ಲಿ ಆಹಾರ ವಿತರಣೆಯಾಗಬೇಕು. ಜೊತೆಗೆ ಪುಷ್ಟಿದಾಯಕವಾದ ಆಹಾರ ಪೂರೈಸಬೇಕು. ಈ ಕೆಲಸಗಳಿಗೆ ಸೂಕ್ತ ಅನುದಾನ ಒದಗಿಸಬೇಕು. ಈ ದಿಸೆಯಲ್ಲಿ ಭಾರತ ಸರ್ಕಾರ ಮೊದಲ ಹೆಜ್ಜೆಗಳನ್ನು ಇಡತೊಡಗಿದೆ. ಸಾಧಿಸುವುದು ಇನ್ನೂ ಬೆಟ್ಟದಷ್ಟಿದೆ. 2. ಆಹಾರ ಕ್ಷೇತ್ರ ಎದುರಿಸುವ ಆಪತ್ತುಗಳನ್ನು ನಿವಾರಿಸಬೇಕು. ನೀತಿ, ನಿಯಮಗಳಡಿ ಕೃಷಿಗೆ ವಿಮಾ ಸೌಲಭ್ಯ ಕಲ್ಪಿಸಿ ಸಣ್ಣ ರೈತರನ್ನು ಕಾಪಾಡಬೇಕು. 3. ಸಮಾನತೆ ಮತ್ತು ಆಹಾರ ಹಕ್ಕುಗಳು ಸಕಲ ಮನುಷ್ಯರಿಗೂ ಸಿಕ್ಕುವಂತೆ ನೋಡಿಕೊಳ್ಳಬೇಕು. ಸ್ಥಳೀಯವಾಗಿ ಹೊಂದಿಕೊಳ್ಳುವ ಸಂಶೋಧನೆ, ಪ್ರೌಢಶಾಲೆಯಿಂದಲೇ ಕೃಷಿ ವಿದ್ಯೆ ಮತ್ತು ಕೈಗೆಟಕುವ ಹಣಕಾಸಿನ ವ್ಯವಸ್ಥೆಗಳನ್ನು ಅಳವಡಿಸಬೇಕು. 4. ಜೀವಶಾಸ್ತ್ರದ ಸಂಶೋಧನೆಗೆ ಹೆಚ್ಚುವರಿ ಪ್ರೋತ್ಸಾಹ ನೀಡಬೇಕು. ಜೈವಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಅಧಿಕ ಇಳುವರಿ ಹಾಗೂ ರೋಗನಿವಾರಕ ಶಕ್ತಿಯನ್ನು ಬೆಳೆಗಳಲ್ಲೇ ಅಳವಡಿಸಬೇಕು. ಜೈವಿಕ ತಂತ್ರಜ್ಞಾನದ ಆವಿಷ್ಕಾರಗಳನ್ನು ತರಬೇಕಾದರೆ ಉಪಯುಕ್ತವಾದ ನೀತಿ, ನಿಯಮವನ್ನು ಕಾರ್ಯಗತ ಮಾಡಬೇಕು. ಈ ವಿಷಯದಲ್ಲಿ ಭಾರತ ಯಾವುದೇ ರೀತಿಯ ಹೆಜ್ಜೆಗಳನ್ನೂ ಇಟ್ಟಿಲ್ಲ. ವಿನಾಕಾರಣ ದೇಶದ ರೈತರಿಗೆ ಬಹಳವಾಗಿ ತಂತ್ರಜ್ಞಾನದ ಮೋಸವಾಗಿದೆ. 5. ವೈಜ್ಞಾನಿಕವಾಗಿ ಮಣ್ಣು ಮತ್ತು ನೀರಿನಿಂದ ಮಾಡಬಹುದಾದ ಕೃಷಿಗೆ ಒತ್ತು ನೀಡಿ ಪ್ರೋತ್ಸಾಹಿಸಬೇಕು. ಅದಲ್ಲದೆ ನೀರಿನ ಮೂಲಸಂಪತ್ತು ರಕ್ಷಿಸಲು ನೀತಿ, ನಿಯಮಗಳನ್ನು ಜಾರಿಗೆ ತಂದು, ಅವುಗಳಿಂದ ಮಾಡಬಹುದಾದ ಕೃಷಿಯನ್ನು ಅಳವಡಿಸಿಕೊಳ್ಳಬೇಕು. ಇದುವರೆವಿಗೂ ಮಣ್ಣಿನ ಆಧಾರದ ಕೃಷಿಗೆ ಒತ್ತು ನೀಡಿದ್ದು, ಇನ್ನು ಮೇಲೆ ನೀರಿನ ಆಧಾರದಿಂದ ಬೆಳೆಯುವ ಮೀನು ಮತ್ತು ಬೆಳೆಗಳಿಗೆ ಒತ್ತು ನೀಡಬೇಕು. 6. ರೊಬಾಟ್ಸ್, ಕಂಪ್ಯೂಟರ್ ಸಹಾಯದಿಂದ ಬೆಲೆ ಮತ್ತು ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಬೇಕಿದೆ. 7. ಕೃತಕ ಬುದ್ಧಿಮತ್ತೆಯ (ಎಐ) ಸಹಾಯದಿಂದ ಕೃಷಿಯ ಎಲ್ಲಾ ಕ್ಷೇತ್ರಗಳಲ್ಲಿನ ಇಳುವರಿಯನ್ನು ಅಧಿಕಗೊಳಿಸಬೇಕು.



ಆದರೆ ಕಳೆದ ಐದಾರು ವರ್ಷಗಳಿಂದ ದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸರ್ಕಾರದಿಂದ ಅಷ್ಟೇನೂ ಪ್ರೋತ್ಸಾಹ ಸಿಗುತ್ತಿಲ್ಲ. ಕೃಷಿ ಕ್ಷೇತ್ರವಂತೂ ಆಧುನಿಕ ವಿಜ್ಞಾನವಿಲ್ಲದೆ ಬಳಲಿ ಹೋಗುತ್ತಿದೆ. ಅದಲ್ಲದೆ, ಈಗಿರುವ ಸರ್ಕಾರ ದೇಶದಲ್ಲಿ ಸಾವಯವ ಕೃಷಿಗೆ ಅಧಿಕವಾಗಿ ಪ್ರೋತ್ಸಾಹ ನೀಡುತ್ತಿದೆ. ದೇಶದ ಕೃಷಿ ವಿಜ್ಞಾನಿಗಳ ಸಂಘವಾದ ನ್ಯಾಷನಲ್ ಅಕಾಡೆಮಿ ಆಫ್ ಅಗ್ರಿಕಲ್ಚರಲ್ ಸೈನ್ಸಸ್ ಸಾವಯವ ಕೃಷಿಯ ಬಗ್ಗೆ ಸ್ಪಷ್ಟ ವರದಿ ಮುಖೇನ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ದೇಶವನ್ನು ಸಂಪೂರ್ಣವಾಗಿ ಸಾವಯವ ಕೃಷಿಗೆ ಒಡ್ಡಿದರೆ, ಕೃಷಿ ಇಳುವರಿ ಕಡಿಮೆಯಾಗಿ, ಆಹಾರ ಧಾನ್ಯಗಳ ಬೆಲೆ ಅಧಿಕವಾಗಿ ಬಡಜನರ ಜೀವನ ಮತ್ತಷ್ಟು ಬಿಗಡಾಯಿಸಿ ಹಸಿವಿನಿಂದ ಸಾವುಗಳು ಹೆಚ್ಚುತ್ತವೆ ಎಂದು ಹೇಳಿದೆ. ಸಾವಯವ ಕೃಷಿಯಿಂದ ಪಕ್ಕದ ಶ್ರೀಲಂಕಾದಲ್ಲಿ ಬಂದೊದಗಿರುವ ಸ್ಥಿತಿ ಭಾರತಕ್ಕೂ ಬಂದೊದಗುವ ಸಂಭವ ಹೆಚ್ಚಾಗಲಿದೆ.

ದೇಶದಲ್ಲಿನ ದೊಡ್ಡ ಸಮಸ್ಯೆಯೆಂದರೆ, ಆಧುನಿಕ ವೈಜ್ಞಾನಿಕ ಮತ್ತು ತಂತ್ರಜ್ಞಾನಕ್ಕೆ ಒಡ್ಡುವ ಪ್ರತಿರೋಧಗಳು. ಆಧುನಿಕ ವಿಜ್ಞಾನದ ಯಾವುದೇ ಆವಿಷ್ಕಾರವಾಗಲಿ, ಅದರ ಬಗ್ಗೆ ಸರಿಯಾದ ತಿಳಿವಳಿಕೆ ಅಥವಾ ಜ್ಞಾನ ಇರಲಿ, ಇಲ್ಲದೆ ಹೋಗಲಿ, ಕೆಲ ಗುಂಪುಗಳು ತಕ್ಷಣ ಪ್ರತಿರೋಧವೆತ್ತಿ ಗಲಭೆ ಮಾಡಿ ಅದನ್ನು ತಡೆದುಬಿಡುತ್ತವೆ. ಆಹಾರ ಮತ್ತು ಕೃಷಿ ಕ್ಷೇತ್ರದಲ್ಲಿ ಇರುವಷ್ಟು ಪ್ರತಿರೋಧ ಬೇರೆ ಯಾವ ಕ್ಷೇತ್ರದಲ್ಲೂ ಇರಲು ಸಾಧ್ಯವಿಲ್ಲವೇನೊ? ಪ್ರಾಯಶಃ ಪರಿಸರ ಸಂರಕ್ಷಣೆಯ ವಿಚಾರದಲ್ಲಿ ಇನ್ನೂ ಅಧಿಕ ಪ್ರತಿರೋಧ ವ್ಯಕ್ತವಾಗುತ್ತದೇನೊ?

ಇದರಿಂದಾಗಿ, ಕೃಷಿ ಕ್ಷೇತ್ರದಲ್ಲಿ 2012ರಲ್ಲಿ ಜೈವಿಕ ವಿಜ್ಞಾನದ ತಳಿಗಳ ಮೇಲೆ ತಂದ ನಿರ್ಬಂಧ ಇನ್ನೂ ತೆರವಾಗಿಲ್ಲ. ಅಷ್ಟರೊಳಗೆ, ಮತ್ತೊಂದು ನವೀನವಾದ ಜೈವಿಕ ತಂತ್ರಜ್ಞಾನದ ಉಗಮವಾಗಿದೆ. ಅದೇ genome editing ಎಂಬ ಆವಿಷ್ಕಾರವು ಜಗತ್ತಿನಾದ್ಯಂತ ಮೊಳಗಿ ಕೃಷಿ ಕ್ಷೇತ್ರವನ್ನು ಮತ್ತೆಲ್ಲೋ ಕೊಂಡೊಯ್ದಿದೆ. ಅದಕ್ಕೆ ಬೇಕಾದ ನೀತಿ ಮತ್ತು ನಿಯಂತ್ರಣ ಕಾಯ್ದೆಯನ್ನು ಭಾರತ ಇನ್ನೂ ರೂಪಿಸಿಯೇ ಇಲ್ಲ.

ಭಾರತದ ಬಡ ರೈತ ಅತ್ಯಂತ ಉಪಯುಕ್ತವಾದ ತಂತ್ರಜ್ಞಾನದಿಂದ ಮತ್ತೊಮ್ಮೆ ವಂಚಿತನಾಗುತ್ತಿದ್ದಾನೆ. ಅಲ್ಲದೆ ಕೃಷಿಯಲ್ಲಿ ಹಿಂದುಳಿದ ರಾಷ್ಟ್ರವಾಗಿ ಭಾರತ ಉಳಿದುಬಿಡುತ್ತದೆ. ಪರಿಸರ ಸಂರಕ್ಷಣೆ ಎಲ್ಲರ ಹೊಣೆ. ಅದಕ್ಕಾಗಿಯೇ ನಿಯಂತ್ರಣಾ ಕಾಯ್ದೆಗಳು ಅನಿವಾರ್ಯ. ಆದರೆ ಅದೇ ಕಾಯ್ದೆಗಳು ಅಭಿವೃದ್ಧಿಗೆ ಮಾರಕವಾಗದಂತೆ ನೋಡಿಕೊಳ್ಳುವುದೂ ನಮ್ಮೆಲರ ಹೊಣೆಯಾಗಿರಬೇಕು. ದೇಶದ ಕೃಷಿ ಅಭಿವೃದ್ಧಿಗೆ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವಿಲ್ಲದೆ ಅನ್ಯ ಮಾರ್ಗವೇ ಇಲ್ಲ.

ಲೇಖಕ: ಕೃಷಿ ತಜ್ಞ, ಪ್ರಾಧ್ಯಾಪಕ, ಪೂರ್ವ ಮೇರಿಲ್ಯಾಂಡ್ ವಿಶ್ವವಿದ್ಯಾಲಯ, ಅಮೆರಿಕ

ಚುರುಮುರಿ



ಬೋಲ್‌ಜೀಬ್ರಾ

• ಲಿಂಗರಾಜು ಡಿ.ಎಸ್.

‘ಸಾ, ಮೋದಿ ಪೆಟ್ರೋಲ್- ಡೀಸೆಲ್ ರೇಟು ಇಳ್ಸಕ್ಕೆ ನಾವೆ ಕಾರಣ ಅಂದವ್ರೆ ಕೈಮರದ ಹುಲಿಯಾ, ಡಿ.ಕೆ?’ ತುರೇಮಣೆಗೆ ಹೇಳಿದೆ.

‘ರಾಜಕೀಯದೋರು ಹಂಗೀಯೆ ಕನೋ! ಒಳ್ಳೆ ಕೆಲಸ ಆಗಿದ್ರೆ ನಮ್ಮ ಅಬ್ಬರ ನೋಡಿ ಹೆದರಿಕ್ಯಂಡು ಆದುದ್ದು ಅಂತ ಜನದ ತಲೆಗೆ ಮದ್ದು ಅರೀತರೆ’ ಅಂತಂದ್ರು.

‘ಅದೆಂಗ್ಸಾ ಬುಡಸೇಳಿ’ ಅಂತಂದೆ.

‘ಬೊಡ್ಡಿಹೈದ್ನೆ, ಯಾವನೋ ಪಕ್ಷಾಂತರ ಮಾಡಿದ್ರೆ ಇನ್ನೊಂದು ಪಕ್ಷದೋರು ನಮ್ಮ ಅಂದ, ಚಂದ ನೋಡಿ ಬತ್ತಾವ್ನೆ ಅಂತರೆ. ಇವರ ಸರ್ಕಾರ ಇದ್ದಾಗ ಸುಮ್ನಿದ್ದೋರು ಈಗ ಮೇಕೆದಾಟು ಪಾದಯಾತ್ರೆ ಮಾಡ್ತಾರಂತೆ. ಇದಾನಸಭೆ ಚುನಾವಣೇಲಿ ಆಡಳಿತ ಪಕ್ಷ ಸೋತರೆ ಅದು ಸರ್ಕಾರದ ವಿರುದ್ಧ ಜನರ ಆಕ್ರೋಶ ಅಂತರೆ. ಸೋತ ಪಕ್ಷದೋರು ಅಭ್ಯರ್ಥಿ ಸ್ವಂತ ಶಕ್ತಿ ಮೇಲೆ ಗೆದ್ದವ್ನೆ, ನಮ್ಮ ಅಭ್ಯರ್ಥಿಗೆ ಅಪಪ್ರಚಾರ ಆಯ್ತು ಅನ್ನಲ್ವೇ! ಬಿಜೆಪಿ ಸೋತರೆ ಬೆಲೆ ಇಳಿತದಂತೆ. ಇವರಿದ್ದಾಗ ಈರುಳ್ಳಿ ಬೆಲೆ ಏರಿಕೆಗೆ ಪತರುಗುಟ್ಟೋದ್ರು!’

‘ಅಂದ್ರೆ ಅವರವರೆ ಮಕ್ಕುಕ್ಕತಾವ್ರೆ ಅಂತೀರಾ?’ ಅಂದೆ.

‘ಅಲ್ವಾ ಮತ್ತೆ! ಜಪ್ತಿ ಮಾಡಿದ್ದ ಬಿಟ್ ಕಾಯಿನ್ ನಾಪತ್ತೆ ಆಗ್ಯವಂತೆ! ಸಿಲಿಂಡರಿಗೆ ಸಾವಿರ ಮುಟ್ಟಿದ್ದು ಇವರಿಂದ ಅಲ್ವಂತೆ. ಕಾರ್ಯಕಾರಿಣೀಲಿ ಎಲೆಕ್ಸನ್ ಸೋತುದ್ದು ಚರ್ಚೆಯೇ ಆಗಿಲ್ಲವಂತೆ. ಮೋದಿ ಏನು ಕಮ್ಮಿ ಇಲ್ಲ ‘ಅಚ್ಛೆ ದಿನ್ ಆನೆ ವಾಲಾ ಹೈ’ ಅಂತ ಕಿವಿ ಮ್ಯಾಲೆ ಹೂವು ಮಡಗುತ್ಲೇ ಅದೆ. ರಾಜಕೀಯದೋರು ಮೈಲೇಜ್ ತಗಣಕೆ ಬಿಳಿ ಸುಳ್ಳು, ಕರಿ ಸುಳ್ಳುಗಳನ್ನ ನೂರು ನೂರು ಸಾರಿ ಹೇಳಿ ನಿಜ ಮಾಡೋ ಆಲ್ಜೀಬ್ರಾ ಬುಡುಸುತ್ಲೇ ಇರತರೆ ಕನೋ!’ ಅಂದ್ರು.

‘ಅಂದ್ರೆ ನೀನೇಳದು ಪದ, ಸಂಕೇತಗಳನ್ನ ಬಳಸಿಗ್ಯಂಡು ಅಂಕಿ-ಸಂಖ್ಯೆ ಮ್ಯಾಜಿಕ್ ಮಾಡದು ಅಂತೀಯೇನೋ ತುರೇಮಣೆ’ ಯಂಟಪ್ಪಣ್ಣ ಕೇಳಿತು.

‘ಹಂಗಾದ್ರೆ ಬಾಯ್ತುಂಬ ಸುಳ್ಳು ಹಂಚೋ ಕೆಲಸಕೆ ಏನಂದಾರು ಸಾ?’

‘ಇನ್ನೇನಂದರ್ಲಾ, ಬೋಲ್‌ಜೀಬ್ರಾ ಅನ್ನಬೋದು!’

ಸಂಗತ

ಒಂಟಿ ಬಾಳು: ಹೆಚ್ಚುತ್ತಿದೆ ಒಲವು

ಒಂದೊಮ್ಮೆ ಮನುಷ್ಯ ಜೀವನದ ಅತಿಮುಖ್ಯ ಮೈಲಿಗಲ್ಲೆಂದು ಪರಿಗಣಿತವಾಗಿದ್ದ ವಿವಾಹ, ಇಂದು ಅಪ್ರಸ್ತುತವಾಗುವ ಹಂತಕ್ಕೆ ತಲುಪಿರುವುದಕ್ಕೆ ಹಲವಾರು ಕಾರಣಗಳಿವೆ

• ಡಾ. ಜ್ಯೋತಿ


ವಿವಾಹ ಎಂಬುದು ನಾಗರಿಕ ಮನುಷ್ಯ ಜೀವನದ ಅತಿ ಮುಖ್ಯ ಸಾಮಾಜಿಕ ಹಾಗೂ ಸಾಂಪ್ರದಾಯಿಕ ವ್ಯವಸ್ಥೆ. ಇಂದಿನ ಯುವಜನರ ದೃಷ್ಟಿಯಲ್ಲಿ ಇದು ಅರ್ಥ ಹಾಗೂ ಅಸ್ತಿತ್ವ ಕಳೆದುಕೊಳ್ಳುತ್ತಿದೆಯೇ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಜಗತ್ತಿನಾದ್ಯಂತ ಬಹಳಷ್ಟು ಅಧ್ಯಯನಗಳು ನಡೆದಿವೆ. ಕೆಲವು ದಿನಗಳ ಹಿಂದೆ ಪ್ರಕಟವಾಗಿರುವ, ಪೀವ್ ರಿಸರ್ಚ್ ಸಂಸ್ಥೆಯು 2019ರಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ, ಅಮೆರಿಕದಲ್ಲಿ 25ರಿಂದ 34 ವರ್ಷ ವಯೋಮಿತಿಯ ಶೇ 38ರಷ್ಟು ಮಂದಿ ಒಂಟಿ ಬಾಳು ಸಾಗಿಸುತ್ತಿದ್ದಾರೆ. ಇವರಲ್ಲಿ, ಒಮ್ಮೆಯೂ ಮದುವೆಯಾಗದವರು, ವಿಚ್ಛೇದಿತರು ಹಾಗೂ ಸಂಗಾತಿಯನ್ನು ಕಳೆದುಕೊಂಡವರೂ ಸೇರಿದ್ದಾರೆ.

ಈ ಅಧ್ಯಯನ ವಿಶಿಷ್ಟವಾಗಿ ಗುರುತಿಸಿದಂತೆ, 1990ರ ನಂತರ ಅಮೆರಿಕದಲ್ಲಿ ಅವಿವಾಹಿತರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ. ಅವಿವಾಹಿತರಲ್ಲಿ ಬಿಳಿಯರಿಗಿಂತ ಕಪ್ಪುವರ್ಣೀಯರು ಹೆಚ್ಚಾಗಿದ್ದಾರೆ. ಹಾಗೆಯೇ, ಲಿಂಗಾಧಾರಿತವಾಗಿ ವಿಶ್ಲೇಷಿಸಿದರೆ, ಅವಿವಾಹಿತರಲ್ಲಿ ಹೆಂಗಸರಿಗಿಂತ ಗಂಡಸರ ಸಂಖ್ಯೆ ಹೆಚ್ಚಾಗಿದೆ. ಆದರೆ, ಕಪ್ಪುವರ್ಣೀಯರಲ್ಲಿ ಮಾತ್ರ ಗಂಡಸರಿಗಿಂತ ಹೆಂಗಸರೇ ಹೆಚ್ಚಿನ ಸಂಖ್ಯೆಯಲ್ಲಿ ಅವಿವಾಹಿತರಾಗಿದ್ದಾರೆ.

ಸಮೀಕ್ಷೆಯ ಅಂಕಿಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದರೆ, ವಿವಾಹವಾಗುವ ನಿರ್ಧಾರ ಹಾಗೂ ವ್ಯಕ್ತಿಯ ಆರ್ಥಿಕ ಸ್ಥಿತಿಗತಿಯ ನಡುವಿನ ಪೂರಕ ಸಂಬಂಧವನ್ನು ಗಮನಿಸಬಹುದು. 1990ರ ದಶಕದಲ್ಲಿ ನಡೆದ ಬೃಹತ್ ಪ್ರಮಾಣದ ಜಾಗತೀಕರಣ, ಉದಾರೀಕರಣ, ಬಹುರಾಷ್ಟ್ರೀಯ ಕಂಪನಿಗಳ ಉದಯ, ಹೊಸ ಉದ್ಯೋಗಗಳ ಸೃಷ್ಟಿ, ಜೀವನಮಟ್ಟ ಸುಧಾರಣೆಯಂತಹ ಅಂಶಗಳು ಜನಸಾಮಾನ್ಯರನ್ನು ಹೆಚ್ಚು ಸ್ಪರ್ಧಾತ್ಮಕವಾಗಿ, ವೃತ್ತಿನಿರತರನ್ನಾಗಿ ಜೊತೆಗೆ ಉನ್ನತ ಸ್ಥಾನವನ್ನೇರಲು ಹೆಚ್ಚು ಪದವಿಗಳನ್ನು ಗಳಿಸುವುದರತ್ತ ಗಮನಹರಿಸುವಂತೆ ಮಾಡಿವೆ. ಇಂದು, ವಿವಾಹವೆನ್ನುವ ವ್ಯವಸ್ಥೆ, ಕೇವಲ ಶ್ರೀಮಂತ ರಾಷ್ಟ್ರಗಳಲ್ಲಿ ಮಾತ್ರವಲ್ಲ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿಯೂ ತನ್ನ ಪ್ರಾಧಾನ್ಯವನ್ನು ನಿಧಾನವಾಗಿ ಕಳೆದುಕೊಳ್ಳುತ್ತಿದೆ.

ಇಂತಹ ಸ್ಥಿತಿಗೆ ಹಲವಾರು ಕಾರಣಗಳಿವೆ. ಉದಾಹರಣೆಗೆ, ಕೂಡುಕುಟುಂಬಗಳು ಕಣ್ಮರೆ ಆಗುತ್ತಿರುವುದು, ಯುವಜನರಲ್ಲಿ ಹೆಚ್ಚಾಗುತ್ತಿರುವ ಸ್ವತಂತ್ರ ಮನೋಭಾವ, ವೃತ್ತಿಬೆಳವಣಿಗೆಯ ಕಡೆಗೆ ಹೆಚ್ಚುತ್ತಿರುವ ಪ್ರಾಧಾನ್ಯ, ವಿವಾಹದ ಹಂಗಿಲ್ಲದೆಯೂ ‘ಲಿವ್ ಇನ್’ ಸಂಬಂಧಗಳಿಗೆ ಮುಕ್ತವಾಗುತ್ತಿರುವ ಸಮಾಜ ಇತ್ಯಾದಿ ಅಂಶಗಳು ಪ್ರಭಾವ ಬೀರುತ್ತವೆ. ಅದೇ ರೀತಿ, ಒಂಟಿಯಾಗಿರುವ ಹೆಣ್ಣು ಅಥವಾ ಗಂಡು ಯಾವುದೇ ಸಾಮಾಜಿಕ ಕುಹಕ ಅಥವಾ ವಿಮರ್ಶೆಯಿಲ್ಲದೆ ಬದುಕುವ ಸ್ವಾತಂತ್ರ್ಯ ಹಾಗೂ ಅವರದ್ದೇ ಆದ ಸಮಾನಮನಸ್ಕ ಸ್ನೇಹಿತರ ವಲಯಗಳ ಸೃಷ್ಟಿಗೆ ತೆರೆದಿರುವ ಅವಕಾಶಗಳೂ ಕಾರಣವೆನ್ನಬಹುದು.

ಈ ಪ್ರಕ್ರಿಯೆಗೆ ಸಮಾನಾಂತರವಾಗಿ, ವೃದ್ಧಾಪ್ಯದಲ್ಲಿ ಮಕ್ಕಳು ನಮಗೆ ಆಸರೆಯಾಗುತ್ತಾರೆ ಎನ್ನುವ ಗ್ರಹಿಕೆ, ಭ್ರಮೆ ಹಾಗೂ ನಿರೀಕ್ಷೆಗಳು ಈಚಿನ ದಿನಗಳಲ್ಲಿ ಜನಸಾಮಾನ್ಯರಲ್ಲಿ ಕ್ಷೀಣಿಸುತ್ತಿರುವುದರಿಂದ, ಅದಕ್ಕಾಗಿಯಾದರೂ ಮದುವೆಯಾಗಿ, ಮಕ್ಕಳನ್ನು ಪಡೆದು ವಂಶ ಮುಂದುವರಿಸಬೇಕೆನ್ನುವ ಒತ್ತಡವೂ ಕಡಿಮೆಯಾಗಿದೆ.



ಮನಃಶಾಸ್ತ್ರಜ್ಞರು ಹೇಳುವಂತೆ, ವಿವಾಹವೆಂಬ ವ್ಯವಸ್ಥೆಯು ಹೆಣ್ಣಿಗಿಂತ ಗಂಡಿಗೆ ಜೀವನದಲ್ಲಿ ಹೆಚ್ಚಿನ ಸ್ಥಿರತೆ ತಂದುಕೊಡುತ್ತದೆ. ಹಾಗೆಯೇ, ಅಪಾಯಕ್ಕೆ ಒಡ್ಡಿಕೊಳ್ಳುವ ಗುಣವನ್ನು ಕಡಿಮೆ ಮಾಡುತ್ತದೆ. ಇದಕ್ಕೆ ತದ್ವಿರುದ್ಧವಾಗಿ ವಿವಾಹಿತರು ಅಥವಾ ತಾಯಂದಿರಿಗಿಂತ ಅವಿವಾಹಿತ ಹೆಣ್ಣುಮಕ್ಕಳು ಹೆಚ್ಚು ಸಂತೋಷವಾಗಿರುತ್ತಾರೆ. ಆದರೆ, ಈ ವಿಶ್ಲೇಷಣೆಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲು ಆಗುವುದಿಲ್ಲ. ಯಾಕೆಂದರೆ, ನಮ್ಮ ನಡುವೆಯೇ ಬಹಳಷ್ಟು ಅವಿವಾಹಿತ ಗಂಡಸರು ಜವಾಬ್ದಾರಿಯಿಂದ ನಡೆದುಕೊಂಡು ಯಶಸ್ವಿ ಜೀವನ ಸಾಗಿಸುವುದನ್ನು ಹಾಗೆಯೇ ವಿವಾಹಿತ ಮಹಿಳೆಯರು ತಕ್ಕಮಟ್ಟಿಗೆ ಸಂತೋಷವಾಗಿರುವುದನ್ನು ಕೂಡ ಕಾಣುತ್ತೇವೆ.

ಆದರೆ, ಒಂದಂತೂ ಸತ್ಯ. ಮದುವೆಯೆನ್ನುವ ಸಾಮಾಜಿಕ ಅನುಕೂಲಸಿಂಧು ವ್ಯವಸ್ಥೆ, ಜನರ ಮೇಲಿನ ನಿಯಂತ್ರಣವನ್ನು ನಿಧಾನವಾಗಿ ಕಳೆದುಕೊಳ್ಳುತ್ತಿದೆ. ಅದೇ ರೀತಿ, ಅವಿವಾಹಿತರಿಗೆ ಇದ್ದಂತಹ ಕಳಂಕ, ಅವರನ್ನು ಸಮಾಜ ನೋಡುತ್ತಿದ್ದ ಸಂಶಯದ ದೃಷ್ಟಿ, ಸಿನಿಕತನ ಕೂಡ ಬದಲಾಗುತ್ತಾ, ಜಗತ್ತು ನಿಧಾನವಾಗಿ ಅವರನ್ನು ಒಪ್ಪಿಕೊಳ್ಳುತ್ತಿದೆ.

ಈ ಸಮೀಕ್ಷೆ ಅಮೆರಿಕದ ಸಮಾಜದಲ್ಲಿ ಗುರುತಿಸಿದ ಇನ್ನೊಂದು ವಿದ್ಯಮಾನವೆಂದರೆ, ಒಮ್ಮೆ ಅಥವಾ ಹಲವು ಬಾರಿ ಮದುವೆಯಾಗಿ ವಿಚ್ಛೇದಿತರಾದವರಿಗಿಂತ, ಜೀವನಪರ್ಯಂತ ಮದುವೆ ಆಗದೇ ಉಳಿಯುವವರ ಸಂಖ್ಯೆ ಹೆಚ್ಚಾಗುತ್ತಿದೆ. ಒಮ್ಮೆ ವಿವಾಹವಾಗಿ, ಅನಿವಾರ್ಯ ಕಾರಣಗಳಿಗೆ ವಿಚ್ಛೇದನ ಪಡೆಯುವುದನ್ನು ಅರ್ಥಮಾಡಿಕೊಳ್ಳುವುದು ಸುಲಭ. ಆದರೆ, ಮದುವೆಯೇ ಬೇಡವೆನ್ನುವವರ ಸಂಖ್ಯೆ ಹೆಚ್ಚಾಗುತ್ತಿರುವುದು, ಸಂಪ್ರದಾಯವಾದಿಗಳ ನಿದ್ರೆಕೆಡಿಸಿದೆ ಎನ್ನಬಹುದು. ಯಾಕೆಂದರೆ, ವಿವಾಹವೆನ್ನುವ ವ್ಯವಸ್ಥೆಯ ಆಧಾರದಲ್ಲಿ ಹಲವಾರು ಆರ್ಥಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ವ್ಯವಸ್ಥೆಗಳು ಕಾರ್ಯ ನಿರ್ವಹಿಸುತ್ತವೆ. ಇವುಗಳ ಅಸ್ತಿತ್ವಕ್ಕೆ ವಿವಾಹವೇ ಜೀವಾಳ. ಸುತ್ತಲಿನ ಸಮಾಜದಲ್ಲಿ ನಡೆಯುತ್ತಿರುವ ಈ ಪ್ರವೃತ್ತಿಯನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡು, ಅದನ್ನು ಬದಲಾಗುತ್ತಿರುವ ಜಗತ್ತಿನ ಸಹಜ ಭಾಗವೆಂದು ಸ್ವೀಕರಿಸುವುದು ನಮಗಿಂದು ಅನಿವಾರ್ಯ.

ವಾಚಕರ ವಾಣಿ

ಕಿತ್ತೂರು ಕರ್ನಾಟಕ: ಆಗಬೇಕಾದ್ದು ಬಹಳಷ್ಟಿದೆ

ಹೈದರಾಬಾದ್ ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ಎಂದು ನಾಮಕರಣ ಮಾಡಿದಂತೆ, ಮುಂಬೈ ಕರ್ನಾಟಕವನ್ನು ಕಿತ್ತೂರು ಕರ್ನಾಟಕ ಎಂದು ನಾಮಕರಣ ಮಾಡಲು ನಿರ್ಧರಿಸಿರುವುದು ಸ್ವಾಗತಾರ್ಹ. ಕರ್ನಾಟಕದ ಏಕೀಕರಣದ ಮುಂಚೆ ಮುಂಬೈ ಕರ್ನಾಟಕದ ಭಾಗವಾಗಿದ್ದ ಪ್ರದೇಶಗಳು ಕರ್ನಾಟಕ ಏಕೀಕರಣದ ನಂತರವೂ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಯ ಫಲಿತಾಂಶ ಹಾಗೂ ಪ್ರಾದೇಶಿಕ ಅಸಮಾನತೆಯ ವಿಷಯದ ಸಂದರ್ಭಗಳಲ್ಲಿ ಮುಂಬೈ ಕರ್ನಾಟಕ ಪ್ರದೇಶವೆಂದು ಮಾಧ್ಯಮಗಳಲ್ಲಿ ಪ್ರಕಟವಾದಾಗ ಮನಸ್ಸಿಗೆ ಬೇಸರವಾಗುತ್ತಿತ್ತು. ಜೊತೆಗೆ ಈ ಭಾಗದ ಹೆಣ್ಣುಮಕ್ಕಳು ಉನ್ನತ ಶಿಕ್ಷಣ, ಸರ್ಕಾರ ನಡೆಸುವ ಉದ್ಯೋಗ ನೇಮಕಾತಿ ಪರೀಕ್ಷೆಗಳಲ್ಲಿ ನಿರೀಕ್ಷಿತ ಸಾಧನೆ ಮಾಡದಿದ್ದಾಗ ಈ ಭಾಗದ ಶಿಕ್ಷಣಪ್ರೇಮಿಗಳು ಬೇಸರಪಟ್ಟಿದ್ದುಂಟು.

ಕಿತ್ತೂರು ಕರ್ನಾಟಕ ಪ್ರದೇಶವು ಸರ್ಕಾರಿ ಪ್ರೌಢಶಾಲೆ, ಪದವಿಪೂರ್ವ ಕಾಲೇಜು ಮತ್ತು ಪದವಿ ಕಾಲೇಜುಗಳನ್ನು ಹಳೆ ಮೈಸೂರು ಪ್ರಾಂತ್ಯದ ರೀತಿ ಹೊಂದಿರುವುದಿಲ್ಲ. ಸರ್ಕಾರದ ಅನುದಾನವೂ ಸಮರ್ಪಕವಾಗಿ ಹಾಗೂ ಪೂರ್ಣಪ್ರಮಾಣದಲ್ಲಿ ವಿನಿಯೋಗವಾಗದೇ ಅಭಿವೃದ್ಧಿ ಕಾರ್ಯಗಳು ಅರ್ಧಕ್ಕೇ ನಿಂತಿವೆ. ಈ ಹಿನ್ನೆಲೆಯಲ್ಲಿ ಕಿತ್ತೂರು ಕರ್ನಾಟಕದ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಈ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಇನ್ನಷ್ಟು ವೇಗ ನೀಡಬೇಕಾಗಿದೆ. ಈ ಪ್ರದೇಶದ ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ದಾಖಲೆಗಳನ್ನು ನಾಡಿಗೆ ಪ್ರಚುರಪಡಿಸಬೇಕಾಗಿದೆ. ಇವು ಸಾಧ್ಯವಾದರೆ ಮುಂಬೈ ಕರ್ನಾಟಕ ಪ್ರದೇಶವನ್ನು ಕಿತ್ತೂರು ಕರ್ನಾಟಕ ಎಂದು ನಾಮಕರಣ ಮಾಡುವ ಉದ್ದೇಶ ಸಾರ್ಥಕವಾಗುತ್ತದೆ.

ಮಲ್ಲಪ್ಪ ಫ. ಕರೇಣ್ಣನವರ, ರಾಣೆಬೆನ್ನೂರು

ಸ್ಮಶಾನ ವೈರಾಗ್ಯ...!

ಪೆಟ್ರೋಲ್ ಬೆಲೆ ಏರಿದಾಗ
‘ಇನ್ಮೇಲೆ ನಡ್ಕೊಂಡೇ ಓಡಾಡ್ತೀನಿ’,
ಹೋಟೆಲ್ ತಿಂಡಿ ಬೆಲೆ ಏರಿದಾಗ
‘ಇನ್ಮುಂದೆ ಹೋಟೆಲ್ ಕಡೆಗೆ ಹೋಗಲ್ಲ’
ಅಂತೆಲ್ಲಾ ಶಪಥಗೈಯ್ಯುವ ನಾವು,
ನಾಯಿ ಬಾಲ ಡೊಂಕೇ ಎನ್ನುವಂತೆ
ಮತ್ತೆ ವಾರದ ನಂತರ ಮೊದಲಂತೆ ಆಗ್ತೀವಿ!
ಬೆಲೆಯೇರಿಕೆಗೆ ಅನುಗುಣವಾಗಿ
ನಮ್ಮ ಹಸಿವು, ಬಯಕೆಗಳೂ ಏರಿಳಿದರೆ
ಎಷ್ಟು ಚೆನ್ನ ಅಲ್ವೇ...!

ವಿ.ವಿಜಯೇಂದ್ರ ರಾವ್
ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯೂ ಒಳಗೊಳ್ಳಲಿ

2021- 22ರ ಸಾಲಿಗೆ ಬಿಬಿಎಂಪಿ ಹೊರತುಪಡಿಸಿ ಹೋಟೆಲ್, ರೆಸಾರ್ಟ್, ರೆಸ್ಟೊರೆಂಟ್ ಮತ್ತು ಮನರಂಜನಾ ಪಾರ್ಕುಗಳ ಮಾಲೀಕರು ಪಾವತಿಸುವ ಆಸ್ತಿ ತೆರಿಗೆಯಲ್ಲಿ ಶೇ 50ರಷ್ಟು ರಿಯಾಯಿತಿ ನೀಡುತ್ತಿರುವುದು ಸ್ವಾಗತಾರ್ಹ. ಆದರೆ ಬಿಬಿಎಂಪಿ ವ್ಯಾಪ್ತಿಯಲ್ಲಿರುವವರು ಮಾಡಿರುವ ತಪ್ಪೇನು? ಮಲತಾಯಿ ಧೋರಣೆ ಏಕೆ? ಪ್ರತಿವರ್ಷ ತೆರಿಗೆಯನ್ನು ವಿಧಿಸುವ ಸರ್ಕಾರ ಕೊರೊನಾ ಸಮಯದಲ್ಲಾದರೂ ರಿಯಾಯಿತಿ ಕೊಡದೆ ವಸೂಲಿ ಮಾಡಿತು. ವಿದ್ಯುತ್ ಶುಲ್ಕ, ನೀರಿನ ಶುಲ್ಕ, ಆಸ್ತಿ ತೆರಿಗೆಯಲ್ಲಿ ಹೆಚ್ಚಳ, ದಿನನಿತ್ಯದ ಬಳಕೆಯ ವಸ್ತುಗಳ ಹೆಚ್ಚಳವನ್ನು ಸಹಿಸಿಕೊಂಡು ಬೆಂಗಳೂರಿಗರು ನರಕಯಾತನೆ ಪಟ್ಟಿದ್ದಿದೆ. ಶಾಲೆಗಳನ್ನು ನಿರ್ಮಿಸಿದವರ ಪಾಡಂತೂ ಹೇಳತೀರದು. ಬಿಬಿಎಂಪಿ ವ್ಯಾಪ್ತಿಗೂ ಈ ರಿಯಾಯಿತಿ ಅನ್ವಯವಾಗಲಿ.

ಮಲ್ಲತ್ತಹಳ್ಳಿ ಡಾ. ಎಚ್.ತುಕಾರಾಂ, ಬೆಂಗಳೂರು

ನಕಾರಾತ್ಮಕ ಚಿಂತನೆ ಬಾಲಿಶ

ರಾಜ್ಯ ಸರ್ಕಾರವು ನಾಲ್ಕು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮದ ಶಿಕ್ಷಣವನ್ನು ಈ ವರ್ಷ ಆರಂಭಿಸುತ್ತಿರುವುದರ ಕುರಿತು, ‘ಆತುರ ಪ್ರಯೋಗಕ್ಕೇ ಮಾರಕ’ ಎಂಬ ಡಾ. ತಾರಕೇಶ್ವರ್ ವಿ.ಬಿ. ಅವರ ಲೇಖನ (ಪ್ರ.ವಾ., ನ. 5) ವಸಾಹತುಶಾಹಿ ಚಿಂತನೆಗೆ ಸಾಕ್ಷಿ ಎಂದೇ ಹೇಳಬೇಕಾಗಿದೆ. ‘ಪ್ರತಿಭಾವಂತರಾಗಿದ್ದೂ ಇಂಗ್ಲಿಷ್‌ನಲ್ಲಿ ಸುಲಲಿತವಾಗಿ ಮಾತನಾಡುವುದಕ್ಕೆ ಕಷ್ಟವಾಗುತ್ತದೆ ಅನ್ನುವ ಕಾರಣಕ್ಕೇ ಕೆಲಸ ಸಿಗದೆ ಇರುವಾಗ, ಪೂರ್ತಿಯಾಗಿ ಕನ್ನಡದಲ್ಲಿ ಕಲಿತ ಕಾರಣಕ್ಕೆ ಕೆಲಸ ಸಿಗದೆ ಹೋದರೆ ಈ ವಿದ್ಯಾರ್ಥಿಗಳ ಭವಿಷ್ಯ ಮಂಕಾಗುವ ಸಾಧ್ಯತೆ ಇದೆ’ ಎಂಬ ನಕಾರಾತ್ಮಕ ಚಿಂತನೆ ಬಾಲಿಶ. ತಾಂತ್ರಿಕ ಜ್ಞಾನದ ಪರಿಣತಿ ಕೆಲಸದ ಆಯ್ಕೆಗೆ ಪ್ರಥಮ ಆದ್ಯತೆಯಾಗುತ್ತದೆಯೇ ಹೊರತು ಭಾಷಾ ಪರಿಣತಿ ಅಲ್ಲ. ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದವರಿಗೆ ಕೆಲಸದ ಸಂದರ್ಭದಲ್ಲಿ ಅಗತ್ಯವಿರುವ ವ್ಯಾವಹಾರಿಕ ಇಂಗ್ಲಿಷ್ ಜ್ಞಾನ ಪ್ರಾಪ್ತವಾಗಿರುವುದಿಲ್ಲವೇ?

ಕೆಲವು ಬಹುರಾಷ್ಟ್ರೀಯ ಕಂಪನಿಗಳಲ್ಲಿ, ‘ಪ್ರಾದೇಶಿಕ ಭಾಷೆಯನ್ನು ಬಳಸಬಾರದು’ ಎಂದು ಅಲ್ಲಲ್ಲಿ ಫಲಕಗಳನ್ನು ಹಾಕಿರುತ್ತಾರೆಂದು ನನ್ನ ವಿದ್ಯಾರ್ಥಿಗಳು ನನಗೆ ಹೇಳಿರುವುದುಂಟು (ಪ್ರಸ್ತುತ ಹೇಗೋ ನಾನರಿಯೆ). ಅದು ಆ ಕಂಪನಿಯವರು ಮಾಡುತ್ತಿರುವ ರಾಜ್ಯದ್ರೋಹ ತನ್ಮೂಲಕ ರಾಷ್ಟ್ರದ್ರೋಹವೂ ಹೌದು. ಅದನ್ನು ಸರ್ಕಾರ ಹಾಗೂ ಸಮಾಜ ನಿಯಂತ್ರಿಸಬೇಕು. ಆದರೂ ಅದು ಕೂಡ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಮಾತ್ರಕ್ಕೆ ಸಮಸ್ಯೆಯಾದೀತು ಎಂಬುದು ವೃಥಾ ಭೀತಿ ಸೃಷ್ಟಿ; ಒಂದು ವರ್ಗದ ಭ್ರಮಾತ್ಮಕ ಚಿಂತನೆಯ ಫಲ. ಪಾರಿಭಾಷಿಕ ಪದಗಳ ಕನ್ನಡ ರೂಪಗಳು ಕ್ಲೀಷೆಯಾದರೆ ಇಂಗ್ಲಿಷ್ ಪದವನ್ನೇ ಕನ್ನಡೀಕರಣಗೊಳಿಸಿಕೊಂಡರೆ ಆಗದೆ? ಇಂಗ್ಲಿಷ್‌ನಲ್ಲಿ ಜಗತ್ತಿನ ಎಲ್ಲ ಭಾಷಾ ಪದಗಳು ಸೇರಿಕೊಂಡಿಲ್ಲವೆ?

ಇನ್ನು ದ್ವಿಭಾಷಾ ಮಾಧ್ಯಮ; ಇಂದು ಅತ್ಯುತ್ತಮ ಅಂಕ ಗಳಿಕೆಗೆ ಹೆಸರಾದ ಅನೇಕ ಪ್ರೌಢಶಾಲೆಗಳಲ್ಲಿ ಮಾಧ್ಯಮವು ಇಂಗ್ಲಿಷ್ ಆಗಿದ್ದರೂ ಶಿಕ್ಷಕರು ತರಗತಿಯಲ್ಲಿ ಹಾಗೂ ತರಗತಿಯ ಹೊರಗೆ ವಿದ್ಯಾರ್ಥಿಗಳೊಂದಿಗೆ ಕನ್ನಡವನ್ನು ಬಳಸುತ್ತಿರುವುದು ವಾಸ್ತವ ಸತ್ಯವಷ್ಟೇ ಅಲ್ಲ, ಅದು ಆ ಸಂಸ್ಥೆಗಳ ಉತ್ತಮ ಸಾಧನೆಗೆ ಕಾರಣವೂ ಹೌದು. ಒಟ್ಟಿನಲ್ಲಿ ತರಗತಿಗಳಲ್ಲಿ ಬೋಧನೆ ಸರಿಯಾಗಿ ನಡೆದರೆ ಉಳಿದಿದ್ದೆಲ್ಲ ತನಗೆ ತಾನೆ ಸರಿಹೋಗುತ್ತದೆ. ಅಂದಮಾತ್ರಕ್ಕೆ ಈ ವಿಷಯದಲ್ಲಿ ಚರ್ಚೆ, ಸಂವಾದ, ಸಂಶೋಧನೆ- ಏನೆಲ್ಲ ಎಚ್ಚರಗಳು ಅನಗತ್ಯ ಎಂದು ಯಾರೂ ಅಭಿಪ್ರಾಯಪಡಲಾರರು.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮರಳು ಗಣಿಗಾರಿಕೆಗೆ ನೀತಿಯ ಅಂಕುಶ

ಪ್ರಜಾವಾಣಿ ವಾರ್ತೆ

ರಾಜ್ಯ ಸರ್ಕಾರವು ನೂತನ ಮರಳು ನೀತಿಯನ್ನು ರೂಪಿಸಿದೆ. ಮರಳು ಗಣಿಗಾರಿಕೆ, ಸಂಗ್ರಹ, ಸಾಗಾಟ, ಮಾರಾಟ ಮತ್ತು ಬಳಕೆಯ ಸ್ವರೂಪವನ್ನು ಈ ನೂತನ ಮರಳು ನೀತಿಯಲ್ಲಿ ವಿವರಿಸಲಾಗಿದೆ. ಮರಳು ನೀತಿಯ ಅನುಷ್ಠಾನ ಮತ್ತು ಮರಳು ಗಣಿಗಾರಿಕೆ ಮೇಲ್ವಿಚಾರಣೆಗೆ ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಲು ಈ ನೀತಿಯು ಅವಕಾಶ ಮಾಡಿಕೊಡುತ್ತದೆ. ಈ ಸಮಿತಿಗಳ ಕಾರ್ಯವ್ಯಾಪ್ತಿ ಮತ್ತು ಅಧಿಕಾರವನ್ನು ಈ ನೀತಿಯಲ್ಲಿ ಸ್ಪಷ್ಟಪಡಿಸಲಾಗಿದೆ.



ನೀತಿಯ ಪ್ರಮುಖ ಅಂಶಗಳು

- ಮರಳಿನ ದರವನ್ನು ರಾಜ್ಯ ಸರ್ಕಾರವು ನಿಗದಿ ಮಾಡಲಿದೆ ಮತ್ತು ಕಾಲಕಾಲಕ್ಕೆ ಪರಿಷ್ಕರಿಸಲಿದೆ
- ನದಿಗಳಲ್ಲಿ ದೋಣಿಗಳ ಮೂಲಕ ಮರಳು ತೆಗೆಯುವಾಗ ಯಂತ್ರಗಳನ್ನು ಬಳಸಲು ಅವಕಾಶವಿಲ್ಲ. ವ್ಯಕ್ತಿಗಳೇ ಮರಳನ್ನು ದೋಣಿಗೆ ತುಂಬಿಸಬೇಕು
- ಅಕ್ರಮವಾಗಿ ತೆಗೆಯಲಾದ ಮರಳನ್ನು ಜಿಲ್ಲೆ, ತಾಲ್ಲೂಕು ಮರಳು ಮೇಲ್ವಿಚಾರಣಾ ಸಮಿತಿಗಳು ಜಪ್ತಿ ಮಾಡಿಕೊಳ್ಳಬೇಕು. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಕಾಮಗಾರಿಗಳು, ಗ್ರಾಮ ಪಂಚಾಯಿತಿಗಳು ಕೈಗೊಳ್ಳುವ ಕಾಮಗಾರಿಗಳು ಮತ್ತು ನರೇಗಾ ಯೋಜನೆ ಅಡಿ ಕೈಗೊಳ್ಳಲಾದ ಕಾಮಗಾರಿಗಳಿಗೆ ರಾಜ್ಯ ಸರ್ಕಾರವು ಸೂಚಿಸಿದ ದರದಲ್ಲಿ ಈ ಮರಳನ್ನು ಪೂರೈಕೆ ಮಾಡಬೇಕು
- ಕುಡಿಯುವ ನೀರಿನ ಬಾವಿಯ 500 ಮೀಟರ್ ವ್ಯಾಸದ ಪ್ರದೇಶದಲ್ಲಿ ಮರಳು ಗಣಿಗಾರಿಕೆಗೆ ಅವಕಾಶವಿಲ್ಲ. ಹರಿಯುತ್ತಿರುವ ಹೊಳೆಗಳಲ್ಲಿ ಮರಳು ತೆಗೆಯುವಂತಿಲ್ಲ. ಪ್ರಮುಖ ಸೇತುವೆಗಳಿಂದ ಒಂದು ಕಿ.ಮೀ. ದೂರದವರೆಗೂ ಮರಳು ತೆಗೆಯುವಂತಿಲ್ಲ
- ಮರಳು ತೆಗೆಯುವ ಆಳವು 3 ಮೀಟರ್ ಮೀರುವಂತಿಲ್ಲ
- ಪರವಾನಗಿ ಪಡೆಯದೇ ಇರುವವರು ಮರಳನ್ನು ಸಂಗ್ರಹಿಸುವಂತಿಲ್ಲ
- ಮರಳು ಸಾಗಣೆಗೆ ಬಳಸುವ 3 ಟನ್‌ಗಿಂತ ಹೆಚ್ಚು ಸಾಮರ್ಥ್ಯದ ವಾಹನಗಳಲ್ಲಿ ಜಿಪಿಎಸ್ ಅಳವಡಿಸಬೇಕು. ಈ ವಾಹನಗಳನ್ನು ಜಿಲ್ಲಾ ಮರಳು ಮೇಲ್ವಿಚಾರಣಾ ಸಮಿತಿಗಳಲ್ಲಿ ನೋಂದಾಯಿಸಬೇಕು
- ಮರಳು ಗಣಿಗಾರಿಕೆಯಿಂದ ಸಂಗ್ರಹಿಸಲಾದ ರಾಜಧನದಲ್ಲಿ ಶೇ 25ರಷ್ಟನ್ನು ಬಜೆಟ್ ಅನುದಾನದ ರೂಪದಲ್ಲಿ ಸಂಬಂಧಿತ ಗ್ರಾಮ ಪಂಚಾಯಿತಿಗೆ ನೀಡಬೇಕು
- ಬೇರೆ ರಾಜ್ಯಗಳಿಂದ ತರಲಾಗುವ ಮರಳಿನ ಪ್ರತಿ ಟನ್‌ಗೆ ₹100ರಂತೆ ಶುಲ್ಕವನ್ನು ಸಾಗಣೆದಾರರು ರಾಜ್ಯ ಸರ್ಕಾರಕ್ಕೆ ಪಾವತಿ ಮಾಡಬೇಕು

ಆಧಾರ: ಕರ್ನಾಟಕ ಸರ್ಕಾರದ ಅಧಿಸೂಚನೆ

ತಾಲ್ಲೂಕು ಮರಳು ಮೇಲ್ವಿಚಾರಣಾ ಸಮಿತಿ

ತಾಲ್ಲೂಕು ಮಟ್ಟದಲ್ಲಿ ಮರಳು ಮೇಲ್ವಿಚಾರಣಾ ಸಮಿತಿ ರಚನೆಗೆ ಈ ನೀತಿಯಲ್ಲಿ ಅವಕಾಶ ನೀಡಲಾಗಿದೆ. ಜಿಲ್ಲೆಯ ಕಂದಾಯ ಉಪವಿಭಾಗದ ಸಹಾಯಕ ಆಯುಕ್ತರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಸಂಬಂಧಿತ ತಾಲ್ಲೂಕಿನ ತಹಶೀಲ್ದಾರ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾ ಅಧಿಕಾರಿ, ಉಪ ಪೊಲೀಸ್ ವರಿಷ್ಠಾಧಿಕಾರಿ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಹಣಾ ಎಂಜಿನಿಯರ್, ಜಲಸಂಪನ್ಮೂಲ ಇಲಾಖೆಯ ಸಹಾಯಕ ಕಾರ್ಯನಿರ್ವಹಣಾ ಎಂಜಿನಿಯರ್, ತಾಲ್ಲೂಕು ಅರಣ್ಯ ಇಲಾಖೆಯ ರೇಂಜರ್, ತಾಲ್ಲೂಕು ಮೋಟಾರು ವಾಹನ ಪರಿಶೀಲನಾ ಅಧಿಕಾರಿ, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ, ಗಣಿ ಇಲಾಖೆಯ ಅಧಿಕಾರಿ, ರೆವೆನ್ಯೂ ಇನ್‌ಸ್ಪೆಕ್ಟರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಈ ಸಮಿತಿಯಲ್ಲಿ ಇರುತ್ತಾರೆ.

- ಪ್ರತಿ ತಿಂಗಳು ಈ ಸಮಿತಿ ಸಭೆ ಸೇರಬೇಕು
- ತಮ್ಮ ವ್ಯಾಪ್ತಿಯಲ್ಲಿ ಮರಳು ಗಣಿಗಾರಿಕೆಯ ಮೂಲಗಳನ್ನು ಪರಿಶೀಲಿಸುವ ಮತ್ತು ಗುರುತಿಸುವ ಅಧಿಕಾರ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತೆಗೆಯಲಾದ ಮರಳನ್ನು ವಿಲೇವಾರಿ ಮಾಡಬೇಕು
- 1, 2 ಮತ್ತು 3ನೇ ವರ್ಗದ ಕ್ವಾರಿಗಳಲ್ಲಿ ತೆಗೆಯಬಹುದಾದ ಮರಳಿನ ಪ್ರಮಾಣವನ್ನು ಅಂದಾಜಿಸಬೇಕು. ಮರಳು ಗಣಿಗಾರಿಕೆಗೆ ಗುರುತಿಸಲಾದ ಸ್ಥಳದ ವಿವರವಾದ ನಕ್ಷೆಯನ್ನು ಸಿದ್ಧಪಡಿಸಬೇಕು
- ಪರಿಶೀಲನೆ ನಡೆಸಿ ವರದಿ ಸಿದ್ಧಪಡಿಸುವುದು ಮತ್ತು ಜಿಲ್ಲಾ ಮರಳು ಸಮಿತಿಗೆ ಶಿಫಾರಸು ಸಲ್ಲಿಸಬೇಕು
- ತನ್ನ ವ್ಯಾಪ್ತಿಯ ಎಲ್ಲಾ ಮರಳು ಕ್ವಾರಿಗಳನ್ನು ಪರಿಶೀಲಿಸುವ ಮತ್ತು ಪರಿಸರಕ್ಕೆ ಹಾನಿಯಾಗದಂತೆ ಎಚ್ಚರ ವಹಿಸಬೇಕು
- ಜಿಲ್ಲಾ ಮರಳು ಮೇಲ್ವಿಚಾರಣಾ ಸಮಿತಿಯ ಆದೇಶ ಮತ್ತು ಸೂಚನೆಗಳನ್ನು ಅನುಷ್ಠಾನಕ್ಕೆ ತರುವ ಹೊಣೆ

ಜಿಲ್ಲಾ ಮರಳು ಮೇಲ್ವಿಚಾರಣಾ ಸಮಿತಿ

ಜಿಲ್ಲಾಧಿಕಾರಿಯ ಅಧ್ಯಕ್ಷತೆಯಲ್ಲಿ ಈ ಸಮಿತಿಯು ಕಾರ್ಯನಿರ್ವಹಿಸಲಿದೆ. ಜಿಲ್ಲಾ ಪಂಚಾಯಿತಿಯ ಕಾರ್ಯನಿರ್ವಹಣಾ ಅಧಿಕಾರಿ, ಪೊಲೀಸ್ ಆಯುಕ್ತ/ಪೊಲೀಸ್ ವರಿಷ್ಠಾಧಿಕಾರಿ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಹಣಾ ಎಂಜಿನಿಯರ್, ಜಲಸಂಪನ್ಮೂಲ ಇಲಾಖೆಯ ಎಂಜಿನಿಯರ್, ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿ, ಕಂದಾಯ ಉಪವಿಭಾಗೀಯ ಸಹಾಯಕ ಆಯುಕ್ತ, ಎಲ್ಲಾ ತಾಲ್ಲೂಕುಗಳ ತಹಶೀಲ್ದಾರ್, ಖನಿಜ ಇಲಾಖೆಯ ಉಪ ನಿರ್ದೇಶಕರು ಈ ಸಮಿತಿಯ ಸದಸ್ಯರಾಗಿರುತ್ತಾರೆ. ರಾಜ್ಯ ಸರ್ಕಾರವು ಹೊರಡಿಸುವ ಆದೇಶಗಳನ್ನು ಜಾರಿಗೆ ತರುವ ಹೊಣೆ ಈ ಸಮಿತಿಯದ್ದಾಗಿದೆ

- ಈ ಸಮಿತಿಯು ಕನಿಷ್ಠ ಎರಡು ತಿಂಗಳಿಗೆ ಒಮ್ಮೆ ಸಭೆ ನಡೆಸಬೇಕು
- ಮರಳು ಗಣಿಗಾರಿಕೆಗೆ ಕ್ವಾರಿಗಳು, ಕಿರುಜಲಾಶಯಗಳು, ಬ್ಯಾರೇಜ್‌ಗಳು, ಕೆರೆಗಳಲ್ಲಿ ಹೂಳೆತ್ತುವುದಕ್ಕೆ ಅನುಮತಿ ಮತ್ತು ಪರವಾನಗಿ ನೀಡುವ ಹೊಣೆ
- ಮರಳು ಗಣಿಗಾರಿಕೆಗೆ ನೀಡಬಹುದಾದ ಮೂಲಗಳ ಪರಿಶೀಲನೆ, ಗಣಿಗಾರಿಕೆ ನಡೆಯುತ್ತಿರುವ ಮೂಲಗಳ ಪರಿಶೀಲನೆಗಾಗಿ ಭೇಟಿ
- ತಾಲ್ಲೂಕು ಮರಳು ಮೇಲ್ವಿಚಾರಣಾ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವ ಹೊಣೆ
- ಗಣಿಗಾರಿಕೆ ಮೂಲಕ ತೆಗೆಯಲಾದ ಮರಳನ್ನು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರದ ಬಳಕೆಗೆ ಮೀಸಲಿಡುವ ಅಧಿಕಾರ. ರಾಜ್ಯದ ಬಳಕೆಗೆ ಗುತ್ತಿಗೆದಾರರಿಗೆ ಮರಳು ತೆಗೆಯಲು ಅನುಮತಿ ನೀಡುವ ಅಧಿಕಾರ
- ಅಕ್ರಮ ಮರಳು ಗಣಿಗಾರಿಕೆಯಿಂದ ಪರಿಸರದ ಮೇಲೆ ಆಗುವ ಪರಿಣಾಮಗಳ ಅಧ್ಯಯನಕ್ಕೆ ಪ್ರತ್ಯೇಕ ತಜ್ಞರ ಸಮಿತಿ ರಚಿಸುವ ಮತ್ತು ಪರಿಹಾರ ಕ್ರಮಗಳನ್ನು ಸೂಚಿಸುವ ಅಧಿಕಾರ
- ಮರಳು ಸಾಗಣೆ ಮೇಲೆ ನಿಗಾ ಇರಿಸಲು ಚೆಕ್‌ಪೋಸ್ಟ್‌ಗಳನ್ನು ರಚಿಸುವ ಅಧಿಕಾರ
- ಹೊಳೆ, ನದಿಗಳಲ್ಲಿ ಇರುವ ಮರಳಿನ ಪ್ರಮಾಣದ ಬಗ್ಗೆ ಪ್ರತೀ ವರ್ಷ ಲೆಕ್ಕಪರಿಶೋಧನೆ ನಡೆಸುವ ಹೊಣೆ

ರಾಜ್ಯ ಸಮಿತಿ

ರಾಜ್ಯದ ಮುಖ್ಯ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ ರಾಜ್ಯ ಮರಳು ಮೇಲ್ವಿಚಾರಣಾ ಸಮಿತಿ ಕಾರ್ಯನಿರ್ವಹಿಸಲಿದೆ. ರಾಜ್ಯ ಪೊಲೀಸ್ ಮಹಾ ನಿರ್ದೇಶಕ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಜಲಸಂಪನ್ಮೂಲ ಇಲಾಖೆ, ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು ಈ ಸಮಿತಿಯ ಸದಸ್ಯರಾಗಿರುತ್ತಾರೆ. ಸಾರಿಗೆ ಇಲಾಖೆ ಆಯುಕ್ತರು, ಅಂತರ್ಜಲ ನಿರ್ದೇಶನಾಲಯದ ನಿರ್ದೇಶಕರು, ಗಣಿ ಇಲಾಖೆಯ ಆಯುಕ್ತ/ನಿರ್ದೇಶಕರು ಮತ್ತು ಕರ್ನಾಟಕ ರಾಜ್ಯ ಖನಿಜ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಈ ಸಮಿತಿಯ ಸದಸ್ಯರಾಗಿರುತ್ತಾರೆ. ರಾಜ್ಯದಲ್ಲಿನ ಮರಳು ಗಣಿಗಾರಿಕೆಯ ಪರಿಶೀಲನೆಗಾಗಿ ಈ ಸಮಿತಿಯು ವರ್ಷದಲ್ಲಿ ಎರಡು ಬಾರಿ ಸಭೆ ನಡೆಸಬಹುದು.

ಜಲಾಶಯ/ಬ್ಯಾರೇಜ್‌ಗಳಲ್ಲಿ ಮರಳು ಗಣಿಗಾರಿಕೆ

ಜಲಾಶಯಗಳು ಅಥವಾ ಬ್ಯಾರೇಜ್‌ಗಳಲ್ಲಿ ಹೂಳು ತೆಗೆಯಲು ಸರ್ಕಾರದ ಇಲಾಖೆ ಅಥವಾ ಸರ್ಕಾರಿ ನಿಗಮ ಮಂಡಳಿಗೆ ಮಾತ್ರ ಅವಕಾಶವಿದೆ. ಹೂಳು ತೆಗೆಯಬೇಕಿರುವ ಜಾಗದಲ್ಲಿ ಜಿಲ್ಲಾ ಮರಳು ಸಮಿತಿಯು ಸಮೀಕ್ಷೆ ನಡೆಸಬೇಕು. ಹಿರಿಯ ಭೂಗರ್ಭಶಾಸ್ತ್ರಜ್ಞ, ಜಲಸಂಪನ್ಮೂಲ ಇಲಾಖೆಯ ಎಂಜಿನಿಯರ್, ವಲಯ ಅರಣ್ಯಾಧಿಕಾರಿ ಹಾಗೂ ತಹಶೀಲ್ದಾರ್ ಅವರನ್ನೊಳಗೊಂಡ ತಂಡವು ಹೂಳು ತೆಗೆಯಬೇಕಾದ ಸ್ಥಳವನ್ನು ಗುರುತಿಸಬೇಕು. ಗೊತ್ತುಪಡಿಸಿದ ಜಾಗದಲ್ಲಿ ಎಷ್ಟು ಮರಳು ಸಿಗಬಹುದು ಎಂದು ಅಂದಾಜು ಮಾಡಬೇಕು.

ಸ್ಪಷ್ಟ ಶಿಫಾರಸಿನೊಂದಿಗೆ ಜಿಲ್ಲಾ ಮರಳು ಸಮಿತಿಗೆ ವರದಿ ಸಲ್ಲಿಸಬೇಕು. ಜಿಲ್ಲಾ ಮರಳು ಸಮಿತಿಯ ಅನುಮತಿ ಸಿಕ್ಕ ಬಳಿಕ ಸಂಬಂಧಪಟ್ಟ ಇಲಾಖೆ ಅಥವಾ ಸರ್ಕಾರಿ ನಿಗಮ ಮಂಡಳಿಯು ಸರ್ಕಾರ ಗೊತ್ತುಪಡಿಸಿದ ದರವನ್ನು ಪಾವತಿಸಿ ಜಲಾಶಯ ಅಥವಾ ಬ್ಯಾರೇಜ್‌ನಲ್ಲಿ ಹೂಳು ತೆಗೆಯಬಹುದು. ಮರಳು ಸಾಗಿಸಲು ಅನುಮತಿಯನ್ನು ಪಡೆದುಕೊಳ್ಳಬೇಕು. ದಾಸ್ತಾನು ಪರಿಶೀಲನೆ ನಡೆಸಲು ಜಿಲ್ಲಾ ಅಥವಾ ತಾಲ್ಲೂಕು ಮರಳು ಸಮಿತಿಯ ಅಧಿಕಾರಿಗಳಿಗೆ ಅನುವು ಮಾಡಿಕೊಡಬೇಕು.

ನಿಯಮ 21 ಯು ಪ್ರಕಾರ, 'ಮರಳು ಮಿತ್ರ' ಆ್ಯಪ್ ಮೂಲಕ ಮರಳು ಖರೀದಿಗೆ ನೋಂದಣಿ ಮಾಡಿಕೊಳ್ಳಲು ಸಾರ್ವಜನಿಕರಿಗೆ ಅವಕಾಶ ಮಾಡಿಕೊಡಬೇಕು. ಸರ್ಕಾರದ ಮಾನದಂಡದ ಪ್ರಕಾರ, ಮರಳು ಗಣಿಗಾರಿಕೆ ಕಾರ್ಯವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಗಣಿಗಾರಿಕೆಯಲ್ಲಿ ಹೊರತೆಗೆದ ಮರಳಿನ ಪ್ರಮಾಣ, ಸಾಗಣೆ ಮಾಡಿದ ಪ್ರಮಾಣ, ಮಾರಾಟ ಮಾಡಿದ ಪ್ರಮಾಣ ಹಾಗೂ ದಾಸ್ತಾನು ಪ್ರಮಾಣದ ಕುರಿತು ಪ್ರತೀ ತಿಂಗಳು ಪ್ರಕಟಣೆ ಹೊರಡಿಸಬೇಕು.

ಗುತ್ತಿಗೆದಾರರ ಜವಾಬ್ದಾರಿಗಳು

- ಮರಳು ಗಣಿಗಾರಿಕೆ ಗುತ್ತಿಗೆ ಪಡೆದವರು ಕರ್ನಾಟಕ ಉಪಖನಿಜ ರಿಯಾಯಿತಿ(ತಿದ್ದುಪಡಿ) ನಿಯಮಗಳು 2021 ಅನ್ನು ಪಾಲಿಸಬೇಕು
- ಸರ್ಕಾರ ಗೊತ್ತುಪಡಿಸಿದ ರಾಜಧನ ಪಾವತಿಸಬೇಕು
- ಗುತ್ತಿಗೆದಾರರು ಸುಸಜ್ಜಿತ ಕಚೇರಿ, ವೇ ಬ್ರಿಜ್ ಹೊಂದುವುದು ಕಡ್ಡಾಯ
- ದಾಸ್ತಾನು ಜಾಗದಲ್ಲಿ ಭದ್ರತಾ ಸಿಬ್ಬಂದಿ ನೇಮಿಸಬೇಕು
- ಹೂಳು ತೆಗೆದ ಪ್ರಗತಿಯ ವರದಿಯನ್ನು ಪ್ರತೀ ಮೂರು ತಿಂಗಳು, ಆರು ತಿಂಗಳು, ವರ್ಷಕ್ಕೊಮ್ಮೆ (ಯಾವುದು ಅನ್ವಯವೋ ಅದು) ಜಿಲ್ಲಾ ನಿರ್ದೇಶಕರು ಅಥವಾ ಹಿರಿಯ ಭೂಗರ್ಭಶಾಸ್ತ್ರಜ್ಞರಿಗೆ ಸಲ್ಲಿಸಬೇಕು
- ನಿಯಮಗಳನ್ನು ಉಲ್ಲಂಘಿಸಿದ ಗುತ್ತಿಗೆದಾರರಿಗೆ ಸಕ್ಷಮ ಪ್ರಾಧಿಕಾರ ನೋಟಿಸ್ ನೀಡಬಹುದು. ಉಲ್ಲಂಘನೆ ಮುಂದುವರಿದಲ್ಲಿ ಗುತ್ತಿಗೆಯನ್ನು ರದ್ದುಪಡಿಸುವ ಹಾಗೂ ಕಾನೂನು ಪ್ರಕಾರ ಶಿಕ್ಷೆಗೆ ಒಳಪಡಿಸುವ ಅವಕಾಶವಿದೆ

ಮರಳು ಉತ್ಪಾದನೆ ಮಿತಿ

ವಾರ್ಷಿಕವಾಗಿ ಮರಳು ಹೊರತೆಗೆಯಲು ಅನುಮತಿ ನೀಡಿರುವ ಪ್ರಮಾಣದ ಶೇ 50ರಷ್ಟು ಮರಳನ್ನು ಗುತ್ತಿಗೆದಾರರು ಹೊರತೆಗೆದು ಸಾಗಣೆ ಮಾಡುವುದು ಕಡ್ಡಾಯ. ತಪ್ಪಿದರೆ, ಹೆಚ್ಚುವರಿ ರಾಜಧನ ಪಾವತಿಸಬೇಕು ಎಂದು ನಿಯಮ ಹೇಳುತ್ತದೆ. ಅನಿವಾರ್ಯ ಸಂದರ್ಭಗಳಲ್ಲಿ ಇದರಿಂದ ವಿನಾಯಿತಿ ಇದೆ.

ಗುತ್ತಿಗೆ ರದ್ದತಿ

ಗುತ್ತಿಗೆದಾರರು ತಮ್ಮ ಗಣಿಗಾರಿಕೆ ಗುತ್ತಿಗೆಯನ್ನು ಸರ್ಕಾರಕ್ಕೆ ಮರಳಿ ಒಪ್ಪಿಸಲು ನಿರ್ಧರಿಸಿದಲ್ಲಿ, 90 ದಿನ ಮುಂಚಿತವಾಗಿ ಮಾಹಿತಿ ನೀಡಬೇಕು. ಗುತ್ತಿಗೆದಾರರು ಅರ್ಜಿ ಸಲ್ಲಿಸಿದ 90 ದಿನದಲ್ಲಿ, ನಿಯಮಗಳನ್ನು ಗುತ್ತಿಗೆದಾರರು ಪಾಲಿಸಿದ್ದಾರೆಯೇ ಎಂಬುದನ್ನು ಪರಿಶೀಲಿಸಿದ ಬಳಿಕ ಹಿರಿಯ ಭೂಗರ್ಭ ವಿಜ್ಞಾನಿ ಅಥವಾ ಉಪನಿರ್ದೇಶಕರು ಒಪ್ಪಿಗೆ ನೀಡಬೇಕು. ಗುತ್ತಿಗೆದಾರರು ಕ್ವಾರಿಯನ್ನು ಮತ್ತೊಬ್ಬರಿಗೆ ಹಸ್ತಾಂತರ ಮಾಡುವಂತಿಲ್ಲ.

ಪಟ್ಟಾ ಜಮೀನಿನಲ್ಲಿ ನಿಷಿದ್ಧ

- ನಿರ್ದಿಷ್ಟ ಕಾರಣಗಳು ಇಲ್ಲದ ಹೊರತು ಪಟ್ಟಾ ಜಮೀನಿನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ನಡೆಸುವಂತಿಲ್ಲ
- ನದಿ ಸಕ್ರಿಯವಾಗಿರುವ ತೀರದ ಸಮೀಪದ ಪಟ್ಟಾ ಜಮೀನಿನಲ್ಲಿ ಗಣಿಗಾರಿಕೆ ನಿಷಿದ್ಧ
- ಸ್ಪಷ್ಟ ಕಾರಣ ನೀಡಿದ ಬಳಿಕ, ನದಿತೀರದಿಂದ 50 ಮೀಟರ್ ದೂರದಲ್ಲಿರುವ ಪಟ್ಟಾ ಜಮೀನಿಗೆ ಅನುಮತಿ ನೀಡಬಹುದು
- ಮರಳು ಗಣಿಗಾರಿಕೆ ಅವಧಿ ಗರಿಷ್ಠ 5 ವರ್ಷಗಳು ಅಥವಾ ಮರಳು ಮುಗಿಯುವವರೆಗೆ. ಯಾವುದು ಮೊದಲೋ ಅದು ಅನ್ವಯ
- ಕರಾವಳಿ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುವವರು ಶೇ 50ರಷ್ಟು ಹೆಚ್ಚುವರಿ ರಾಜಧನ ನೀಡಬೇಕು
- 3, 4 ಮತ್ತು ಅದಕ್ಕೂ ಹೆಚ್ಚಿನ ವರ್ಗದ ಕ್ವಾರಿಗಳಲ್ಲಿ ನದಿಪಾತ್ರದಿಂದ 50 ಮೀಟರ್ ದೂರದಲ್ಲಿ ಅಥವಾ 1 ಕಿಲೋಮೀಟರ್ ವ್ಯಾಪ್ತಿಯಲ್ಲಿ ಮರಳು ದಾಸ್ತಾನು ಮಾಡಲು ಅವಕಾಶವಿದೆ. ಈ ವರ್ಗದ ಕ್ವಾರಿಗಳಲ್ಲಿ ತೆಗೆದ ಮರಳನ್ನು ರಾಜ್ಯದ ಯಾವ ಭಾಗಕ್ಕಾದರೂ ಸಾಗಣೆ ಮಾಡಬಹುದು

ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ 2



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಶಿವಕುಮಾರನ ಜನನ

ದೇವತೆಗಳ ಆರ್ತನಾದ ಕೇಳಿ ಯೋಗಜ್ಞಾನವಿಶಾರದನಾದ ಮಹಾಶಿವನು ಪಾರ್ವತಿ ಸಾಂಗತ್ಯದಿಂದ ಹೊರಬಂದು ಗುಹಾಲಯದ ಬಾಗಿಲ ಬಳಿ ನಿಂತನು. ಶಿವನನ್ನು ನೋಡಿ ಬ್ರಹ್ಮ, ವಿಷ್ಣು ಮುಂತಾದ ದೇವತೆಗಳು ಮತ್ತಷ್ಟು ಸಂತೋಷದಿಂದ ಸ್ತೋತ್ರ ಮಾಡಿದರು. ನಂತರ ಮಹಾಶಿವನಿಗೆ ತಾರಕಾಸುರನಿಂದಾಗುತ್ತಿರುವ ಉಪಟಳವನ್ನು ತಿಳಿಸಿ, ಶಿವಪುತ್ರನನ್ನು ಧರೆಗೆ ತಂದು ತಾರಕಾಸುರನ ವಧಿಸುವಂತೆ ಕೋರಿದರು. ದೇವತೆಗಳ ಕಷ್ಟಗಳನ್ನೆಲ್ಲಾ ಕೇಳಿ ದುಃಖಿತನಾದ ಮಹಾಶಿವ 'ನಿಮಗಾಗಿರುವ ತೊಂದರೆ ಅರಿಯದೆ, ಭೋಗದಲ್ಲಿ ಮೈಮರೆತಿದ್ದೆ. ನಿಮ್ಮ ಮನದ ನೋವು ನನಗೆ ಈಗ ಅರ್ಥವಾಗಿದೆ. ನನ್ನ ಪುತ್ರನ ಜನನಕ್ಕಾಗಿ ನನ್ನೊಳಗಿನ ರೇತಸ್ಸು ಭೂಮಿಗೆ ಬೀಳಲಿದೆ. ಅದನ್ನು ಯಾರು ಸ್ವೀಕರಿಸುತ್ತೀರಿ' ಎಂದಾಗ ಅಗ್ನಿಯೂ ಪಾರಿವಾಳದ ರೂಪ ತಾಳಿ, ಶಿವನ ರೇತಸ್ಸನ್ನು ಕೊಕ್ಕಿನಿಂದ ಹೀರಿದ. ಈ ಸಂದರ್ಭದಲ್ಲಿ ಅಲ್ಲಿಗೆ ಬಂದ ಪಾರ್ವತಿ ಕೋಪಗೊಂಡು ದೇವತೆಗಳನ್ನೆಲ್ಲಾ ನಿಂದಿಸತೊಡಗಿದಳು. ನಿಮ್ಮ ಸ್ವಾರ್ಥಕ್ಕಾಗಿ ತನ್ನ ಗರ್ಭದಲ್ಲಿ ಜನಿಸಬೇಕಾದ ಶಿಶುವನ್ನು ತಡೆದಿದ್ದಕ್ಕೆ ನಿಮಗೆ ಸಂತಾನವಾಗದಿರಲಿ ಎಂದು ಶಪಿಸಿದಳು.

ಪಾರ್ವತಿಯ ಕೋಪಕ್ಕೋ ಶಾಪಕ್ಕೋ ಅಗ್ನಿಯು ನುಂಗಿದ್ದ ಶಿವನ ರೇತಸ್ಸನ್ನು ತನ್ನ ದೇಹದಲ್ಲಿ ಇಟ್ಟುಕೊಳ್ಳಲಾಗದೆ ಒದ್ದಾಡಿದ. ಕೊನೆಗೆ ನೋವು ತಡೆಯಲಾರದೆ, ಒದ್ದಾಡಿದ. ಪಾರ್ವತಿಯಲ್ಲದೆ ಬೇರಾರೂ ಶಿವನ ರೇತಸ್ಸನ್ನು ತಡೆಯಲಾರರು ಅನ್ನುವುದು ಅಗ್ನಿಗೆ ಮನದಟ್ಟಾಯಿತು. ಆತುರಪಟ್ಟು ಮಾಡಿದ ಕೆಲಸಕ್ಕೆ ಅಗ್ನಿ ಪಶ್ಚಾತ್ತಾಪ ಪಡುತ್ತಾ, ಪರಿಹಾರಕ್ಕಾಗಿ ಶಿವನ ಬಳಿ ಮೊರೆ ಇಟ್ಟ. ಅಗ್ನಿಯನ್ನು ಸಂತೈಸಿದ ಶಿವ ಗ್ರೀಷ್ಮಕಾಲದಲ್ಲಿ ರೇತಸ್ಸನ್ನು ನದಿಯಲ್ಲಿ ಬಿಡುವಂತೆ ಸಲಹೆ ನೀಡಿದ. ಹೀಗೆ ನದಿಯಲ್ಲಿ ಬಿಟ್ಟ ಶಿವನ ರೇತಸ್ಸನ್ನು ಅಲ್ಲಿಗೆ ಸ್ನಾನಮಾಡಲು ಬಂದ ಸಪ್ತಋಷಿಗಳ ಪತ್ನಿಯರಲ್ಲಿ ಅರುಂಧತಿ ಹೊರತು ಮಿಕ್ಕ ಎಲ್ಲರ ದೇಹವನ್ನು ಸೇರಿತು. ಅವರು ಸಹ ಶಿವನ ರೇತಸ್ಸನ್ನು ತಡೆಯಲಾರದೆ, ಹಿಮಾಚಲದ ತಪ್ಪಲು ಪ್ರದೇಶದಲ್ಲಿ ಬಿಟ್ಟುಬಿಟ್ಟರು. ಅತ್ತ ಹಿಮಪರ್ವತವೂ ಸಹ ಶಿವನ ರೇತಸ್ಸನ್ನು ತಡೆಯಲಾರದೆ ನಡುಗಿ ಹೋಯಿತು. ಆಗ ಹಿಮಪರ್ವತವು ಆ ರೇತಸ್ಸನ್ನು ಗಂಗಾನದಿಯೊಳಕ್ಕೆ ಹಾಕಿತು.

ಗಂಗಾನದಿಯೂ ತಡೆಯದಾಗಿ ತನ್ನ ತಟದ ಜೊಂಡು ಹುಲ್ಲಿನ ಕಡೆ ದೂಡಿದಳು. ಆ ಜೊಂಡು ಹುಲ್ಲಿನ ನಡುವೆ ಶಿವಪತ್ರನ ಜನನವಾಯಿತು. ಗಂಗೆಯಿಂದ ಜಿಗಿದು ಜೊಂಡು ಹುಲ್ಲಿನಲ್ಲಿ ಹುಟ್ಟಿದ್ದರಿಂದ ಶಿವಪುತ್ರ ಸ್ಕಂದನೆಂದು ಹೆಸರಾದ. ಮಾರ್ಗಶಿರ ಮಾಸದ ಶುಕ್ಲಪಕ್ಷದಲ್ಲಿ, ಷಷ್ಠಿಯ ದಿವಸ ಷಣ್ಮುಖನ ಜನನವಾಯಿತು. ಆ ಮಗು ಸುಂದರವಾಗಿಯೂ ಷಡ್ಗುಣೈಶ್ವರ್ಯ ಸಂಪನ್ನವಾಗಿ ಕಂಗೊಳಿಸುತ್ತಿತ್ತು. ಆ ತೇಜಸ್ವಿಯುಕ್ತ ಮಗುವನ್ನು ಯಾರೇ ನೋಡಿದರೂ, ತಕ್ಷಣವೇ ಪ್ರೀತಿ ಉಕ್ಕುವಂತಿತ್ತು.

ಹೀಗೇ ಸುಬ್ರಹ್ಮಣ್ಯನೆಂಬ ಶಿವಕುಮಾರ ಹುಟ್ಟಿದ ಸಮಯದಲ್ಲಿ ಅಕಸ್ಮಾತ್ತಾಗಿ ಗಿರಿಜೆಯೂ ಪರಮೇಶ್ವರನೂ ಲೀಲಾರ್ಥವಾಗಿ ಸಂಚರಿಸುತ್ತಾ ಅಲ್ಲಿಗೆ ಬಂದರು. ಗಂಗೆಯ ದಡದಲ್ಲಿ ಜೊಂಡು ಹುಲ್ಲಿನ ಮೇಲೆ ನಗುತ್ತಾ ಮಲಗಿದ್ದ ತೇಜೋಪುಂಜವಾದ ಮಗುವನ್ನು ನೋಡಿದ ಕೂಡಲೇ ಪಾರ್ವತಿ ಆಕರ್ಷಿತಳಾದಳು. ಆನಂದದಿಂದ ಮಗುವನ್ನು ಎತ್ತಿಕೊಂಡು ತನ್ನ ಎದೆಗೆ ಒತ್ತಿಕೊಳ್ಳುತ್ತಿದ್ದಂತೆ ಗಿರಿಜೆಯ ಸ್ತನಗಳಿಂದ ಹಾಲು ಸುರಿಯಲಾರಂಭಿಸಿತು. ಪಾರ್ವತಿಯ ಮಡಿಲಲ್ಲಿ ಕಾರ್ತಿಕೇಯನು ಆಡುತ್ತಾ ನಲಿಯುವಾಗ ಬ್ರಹ್ಮ-ವಿಷ್ಣು ಸೇರಿದಂತೆ ಇಂದ್ರಾದಿ ದೇವತೆಗಳೆಲ್ಲರೂ ಅಲ್ಲಿಗೆ ಬಂದರು. ಅಲ್ಲಿ ಪಾರ್ವತಿ ಮತ್ತು ಸ್ಕಂದನ ತಾಯಿ-ಮಗುವಿನ ವಾತ್ಸಲ್ಯ ಲೀಲೆಗಳನ್ನು ನೋಡಿ, ಅವರಿಗೆ ಪಾರ್ವತಿ ಕೊಟ್ಟ ಶಾಪ ನಿವಾರಣೆಯಾಗಿ, ಅವರೆಲ್ಲರಿಗೂ ಸುಖವುಂಟಾಯಿತು. ಆಕಾಶದಲ್ಲಿ ದೇವದುಂದುಭಿಗಳು ಮೊಳಗಿ, ಶಿಶುವಿನ ಮೇಲೆ ಪುಷ್ಪವೃಷ್ಟಿಯಾಯಿತು. ಕುಮಾರೋತ್ಪತ್ತಿಯಿಂದ ವಿಷ್ಣುವೇ ಮೊದಲಾದ ಸಮಸ್ತ ದೇವತೆಗಳಿಗೂ, ಪರಮಾನಂದವುಂಟಾಯಿತು. ಎಲ್ಲೆಲ್ಲಿಯೂ ಉತ್ಸವಗಳು ನಡೆದವು. ಈ ರೀತಿ ಮೂರು ಲೋಕಕ್ಕೂ ಮಂಗಳವುಂಟಾದರೆ, ದೈತ್ಯಲೋಕದ ದುಷ್ಟರಿಗೆ ವಿಘ್ನವುಂಟಾಗಿ ತಳಮಳಗೊಳ್ಳತೊಡಗಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಟ್ರಕ್‌ನ ಹಿಂಭಾಗದಲ್ಲಿ ವ್ಯಂಗ್ಯದ ಧಾಟಿಯಲ್ಲಿ ಬರೆದಿರುವ ಬರಹದ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ದಯವಿಟ್ಟು ಹಾರ್ನ್ ಮಾಡಬೇಡಿ. ಮೋದಿ ಸರ್ಕಾರ ನಿದ್ರಿಸುತ್ತಿದೆ' ಎಂಬುದಾಗಿ ಉಲ್ಲೇಖಿಸಲಾಗಿರುವ ಚಿತ್ರದ ಬಗ್ಗೆ ಚರ್ಚೆ ನಡೆಯುತ್ತಿದೆ. ಕಾಂಗ್ರೆಸ್ ಮುಖಂಡ ಶಶಿ ತರೂರ್ ಅವರು ಈ ಚಿತ್ರವನ್ನು ಟ್ವೀಟ್ ಮಾಡಿದ್ದಾರೆ.



ಈ ಚಿತ್ರದಲ್ಲಿ ಉಲ್ಲೇಖಿಸಿರುವ ಬರಹವನ್ನು ತಿರುಚಲಾಗಿದೆ ಎಂದು ನ್ಯೂಸ್‌ಮೀಟರ್ ವೆಬ್‌ಸೈಟ್ ವರದಿ ಮಾಡಿದೆ. 2018ರಿಂದಲೂ ಈ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. 'ಹೈವೇ ಡ್ರೈವಿಂಗ್ ಇನ್ ಇಂಡಿಯಾ' ಎಂಬ ಬ್ಲಾಗ್‌ನಲ್ಲಿ ಮೂಲ ಚಿತ್ರ ಪ್ರಕಟವಾಗಿದೆ ಎಂಬ ವಿಚಾರವು ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ ಗೊತ್ತಾಗಿದೆ. 2019ರಲ್ಲಿ ಕಾಂಗ್ರೆಸ್‌ನ ಟ್ವಿಟರ್ ಹ್ಯಾಂಡಲ್ ಸಹ ತಿರುಚಿದ ಚಿತ್ರವನ್ನು ಪ್ರಕಟಿಸಿತ್ತು.

ಬೆರಗಿನ ಬೆಳಕು

ಗುರುರಾಜ ಕರಜಗಿ



ತೀರ್ಥಕ್ಷೇತ್ರ

ಬಹುಜನಂ ಕೈಮುಗಿದ ತೀರ್ಥದೊಳ್ ಕ್ಷೇತ್ರದೊಳ್ |
ಮಹಿಮೆಯಲ್ಲೇನೆಂದು ಸಂಶಯಿಸಬೇಡ ||
ವಿಹಿತಗೈದವರಾರು ವಸತಿಯಂ ದೈವಕ್ಕೆ |
ಮಹಿಮೆ ಮನಸೋತೆಡೆಯೊ – ಮಂಕುತಿಮ್ಮ ||
493 ||

ಪದ-ಅರ್ಥ: ಬಹುಜನಂ = ಬಹಳ ಜನರು, ಮಹಿಮೆಯಲ್ಲೇನೆಂದು = ಮಹಿಮೆಯು + ಅಲ್ಲಿ- + ಏನೆಂದು, ವಿಹಿತಗೈದವರಾರು = ನಿಯಮಿಸಿದವರಾರು, ವಸತಿ = ವಾಸಸ್ಥಾನ.

ವಾಚ್ಯಾರ್ಥ: ಬಹಳ ಜನರು ಕೈ ಮುಗಿದ ಕ್ಷೇತ್ರದಲ್ಲಿ, ತೀರ್ಥದಲ್ಲಿ ಮಹಿಮೆ ಏನಿದೆ ಎಂದು ಸಂಶಯಪಡಬೇಡ. ದೈವಕ್ಕೆ ಅಲ್ಲಿ ವಾಸಸ್ಥಾನವನ್ನು ಕಲ್ಪಿಸಿದವರು ಯಾರು? ಎಲ್ಲಿ ಮಹಿಮೆಗೆ ಮನ ಸೋಲುತ್ತದೆಯೋ ಅಲ್ಲಿಯೇ ಅದರ ಸ್ಥಾನ.

ವಿವರಣೆ: ಹಲವು ವರ್ಷಗಳ ಹಿಂದೆ ಅಲಹಾಬಾದ್‌ನ ತ್ರಿವೇಣಿ ಸಂಗಮಕ್ಕೆ ಹೋಗಿದ್ದೆ. ಮುಂದೆ ಒಂದು ತಿಂಗಳಿನಲ್ಲಿ ಕುಂಭಮೇಳ ನಡೆಯುವುದಿತ್ತು. ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಈ ಉತ್ಸವ ಒಂದು ಪವಾಡ. ಲಕ್ಷಾಂತರ ಜನರು ಅಲ್ಲಿಗೆ ಬಂದು ಸಂಗಮದಲ್ಲಿ ಸ್ನಾನ ಮಾಡಿ ತೃಪ್ತಿಪಡುವ ದೃಶ್ಯ ಅದ್ಭುತ. ಎಷ್ಟೋ ಜನ ತಮ್ಮ ವರ್ಷಗಟ್ಟಲೆ ದುಡಿದು ಕೂಡಿಟ್ಟ ಹಣವನ್ನು ಈ ಯಾತ್ರೆಗೆ ಖರ್ಚುಮಾಡುತ್ತಾರೆ. ಅಲ್ಲಿ ಯಾವ ವಿಶೇಷ ವ್ಯವಸ್ಥೆಯೂ ಇರಲಿಲ್ಲ. ಇರುವುದೆಲ್ಲೊ, ಮಲಗುವುದೆಲ್ಲೊ, ಊಟವೆಲ್ಲೊ ಯಾರಿಗೂ ತಿಳಿಯದು. ಜನರ ನೂಕುನುಗ್ಗಾಟದಲ್ಲಿ ಹಿಂದೆ ಅನೇಕರು ಪ್ರಾಣಕಳೆದುಕೊಂಡದ್ದು ಉಂಟು. ಇಷ್ಟಿದ್ದರೂ ಜನ ಯಾಕೆ ಅಲ್ಲಿಗೆ ಬರುತ್ತಾರೆ ಎಂಬುದು ನನಗೆ ವಿಸ್ಮಯದ ವಿಷಯವಾಗಿತ್ತು. ಅದೇ ಗಂಗೆ, ಅದೇ ಯಮುನೆ, ಅದೇ ಕಣ್ಣಿಗೆ ಕಾಣದ ಸರಸ್ವತಿ. ಆದರೆ ಆ ದಿನಗಳಲ್ಲಿ ಮಾತ್ರ ಯಾಕೆ ಏನೋ ವಿಶೇಷವಿದೆಯೆಂದು ನಂಬಿ ಜನ ಸೇರುತ್ತಾರಲ್ಲ, ತಮಗಾಗುವ ಅನಾನುಕೂಲತೆಗಳನ್ನು ಮರೆತು ಸಂಭ್ರಮಿಸುತ್ತಾರಲ್ಲ ಎಂಬುದು ನನಗೆ ಒಗಟಾಗಿತ್ತು. ಆ ಕಷ್ಟಗಳನ್ನು ಎದುರಿಸಿಯೂ ಅವರ ಮೊಗದಲ್ಲಿ ಹೊಳೆದ ತೃಪ್ತಿ, ಸಂತೋಷ ಬೆರಗು ತಂದಿತ್ತು. ಇದೆಲ್ಲಕ್ಕೆ ಕಾರಣ ಅವರಲ್ಲಿದ್ದ ಶ್ರದ್ಧೆ. ಈ ಶ್ರದ್ಧೆಯೇ ಜನರನ್ನು ಬೇರೆ ಬೇರೆ ತೀರ್ಥಕ್ಷೇತ್ರಗಳಿಗೆ ಕರೆದೊಯ್ಯುತ್ತದೆ. ಅಲ್ಲಿ ಈಶ್ವರನಿದ್ದಾನೆ, ನಾರಾಯಣನಿದ್ದಾನೆ. ರಾಮನಿದ್ದಾನೆ, ಕೃಷ್ಣನಿದ್ದಾನೆ, ಅಲ್ಲಾ ಇದ್ದಾನೆ. ಏಸೂ ಇದ್ದಾನೆ ಎನ್ನುವ ಖಚಿತವಾದ ನಂಬಿಕೆ ತೀರ್ಥಯಾತ್ರೆ ಮಾಡಿಸುತ್ತದೆ. ಕುತೂಹಲಿಗಳಿಗೆ, ನಾಸ್ತಿಕರಿಗೆ ಇದೊಂದು ಮೂಢನಂಬಿಕೆ ಎಂದು ತೋರಬಹುದು, ಕೆಲವರು ಅಪಹಾಸ್ಯ ಮಾಡಬಹುದು. ಹಾಗಾದರೆ ಆ ತೀರ್ಥಕ್ಷೇತ್ರಗಳಲ್ಲಿ ದೈವಸನ್ನಿಧಿ ಇದೆಯೆಂದು ಮೊದಲಾರು ಹೇಳಿದವರು? ದೈವಕ್ಕೆ ಅಲ್ಲಿ ವಸತಿಯನ್ನು ನಿರ್ಮಿಸಿದವರು ಯಾರು? ಎಂಬ ಸಂಶಯದ ಪ್ರಶ್ನೆಗಳು ಕುತೂಹಲಿಗೆ ಬರುವುದು ಸಹಜ. ಭಗವಂತ ಎಲ್ಲೆಲ್ಲಿಯೂ ಇಲ್ಲವೆ? ಕೆಲವು ಕಡೆಗೆ ಮಾತ್ರ ಭಗವಂತ ಇರುವುದಾದರೆ ಅವನನ್ನು ಸರ್ವಾಂತರ್ಯಾಮಿ ಎನ್ನುವುದೇಕೆ? ದೇಹದಲ್ಲಿ ರಕ್ತಮಾಂಸಗಳಿದ್ದಂತೆ ಮಲಮೂತ್ರಗಳೂ ಇವೆ. ಹಾಗೆಯೇ ಪ್ರಪಂಚದಲ್ಲಿ ಶ್ರೇಷ್ಠಾಂಗಗಳೂ ಇವೆ, ನಿಕೃಷ್ಟಾಂಶಗಳೂ ಇವೆ. ಯಾವ ವಸ್ತುವಿನ ಮೇಲೆ ಭಗವತ್ಪ್ರಕಾಶ ಬಿದ್ದಿದೆಯೋ ಅದು ಶ್ರೇಷ್ಠ. ಭಗವದ್ಗೀತೆಯ ಹತ್ತನೇ ಅಧ್ಯಾಯದಲ್ಲಿ 'ಲೋಕದಲ್ಲಿ ಎಲ್ಲೆಲ್ಲಿ ಸತ್ವಾತಿಶಯವುಂಟೋ, ಸೌಭಾಗ್ಯ ಸಂತೋಷಗಳುಂಟೋ ಆ ಎಲ್ಲವು ನನ್ನ ತೇಜಸ್ಸಿನ ಅಂಶಗಳು' ಎನ್ನುತ್ತಾನೆ ಕೃಷ್ಣ. ಅಷ್ಟು ಲಕ್ಷಾಂತರ ಜನ ಹೋಗಿ ಸಂತೋಷ, ತೃಪ್ತಿಪಡುವ ಸ್ಥಳಗಳೇ ಪರಮಾತ್ಮನ ವಾಸ ಎಲ್ಲಿ ಮನಸ್ಸು ಶ್ರದ್ಧೆಯಿಂದ ಬಾಗುತ್ತದೋ ಅದೇ ಭಗವಂತನ ವಸತಿ. ಅವುಗಳ ಬಗ್ಗೆ ಸಂಶಯ, ಅಪನಂಬಿಕೆ ಬೇಡ. ❖

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ನವೆಂಬರ್ 9, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ಪಂಚಮೀ ಗಂ. 23-30 (ಹ. 3-46) ಮಂಗಳವಾರ ನಿತ್ಯ ನಕ್ಷತ್ರ ಪೂರ್ವಾಷಾಢ ಗಂ. 40-51 (ರಾ. 10-42) ಧೃತಿ ನಾಮ ಯೋಗ ಗಂ. 29-32 ಬಾಲವ ಕರಣ ಗಂ. 23-30 ವಿಷ ಗಂ. 7-11 ಪುನರ್ವಿಷ ಗಂ. 59-40 ಅಮೃತ ಗಂ 29-46 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30: ಸೂರ್ಯೋದಯ: 6-19 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 78

ಮೇಷ: ಸಾಮಾಜಿಕ ಗೌರವ ದೊರಕಲಿದೆ. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಅನುಕೂಲಕರ ವಾತಾವರಣ ಮೂಡಲಿದೆ. ಹಿರಿಯರ ಮಾತುಗಳನ್ನು ನಿರ್ಲಕ್ಷ್ಯಮಾಡದಿರಿ.

ವೃಷಭ: ಉದ್ಯಮದಲ್ಲಿ ಯಶಸ್ಸನ್ನು ಕಾಣುವಿರಿ. ಹೊಸ ಯಂತ್ರೋಪಕರಣ ವಾಹನಗಳನ್ನು ಖರೀದಿಸುವ ಯೋಗ ಕಂಡುಬರುವುದು. ವ್ಯವಹಾರ ಕುಶಲತೆಯಿಂದಾಗಿ ಧನಪ್ರಾಪ್ತಿ.

ಮಿಥುನ: ವ್ಯಾಪಾರ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯಾಗಲಿದೆ. ವಸ್ತ್ರಾಭರಣ ಖರೀದಿ ಮಾಡುವ ಸಾಧ್ಯತೆ ಇದೆ. ನೂತನ ಕಾರ್ಯಯೋಜನೆ ನಿರೂಪಿಸಲು ಸಕಾಲ.

ಕರ್ಕಾಟಕ: ಆರೋಗ್ಯದಲ್ಲಿ ಸುಧಾರಣೆ. ಕಳೆದ ವಸ್ತುಗಳು ಅಥವಾ ಬರಬೇಕಾದ ಬಾಕಿ ಹಣವನ್ನು ಪಡೆದುಕೊಳ್ಳುವ ಸಾಧ್ಯತೆ. ವೃತ್ತಿಯಲ್ಲಿ ದಿನದಮಟ್ಟಿಗೆ ಹೊಂದಾಣಿಕೆಯಿಂದಿರುವುದು ಉತ್ತಮ.

ಸಿಂಹ: ಉದ್ಯೋಗಿಗಳಿಗೆ ಮೇಲಾಧಿಕಾರಿಗಳಿಂದ ಪ್ರಶಂಸೆಯ ಮಾತುಗಳನ್ನು ಕೇಳುವ ಸಾಧ್ಯತೆ. ವಾಹನ ಚಲಾಯಿಸುವಾಗ ಎಚ್ಚರಿಕೆ ಉತ್ತಮ. ಸ್ತ್ರೀಯರಿಗೆ ಶಸ್ತ್ರಗಳಿಂದ ನೋವು ಸಾಧ್ಯತೆ.

ಕನ್ಯಾ: ಮಕ್ಕಳ ಪ್ರಗತಿಯಿಂದಾಗಿ ಮನೆಯಲ್ಲಿ ಹಬ್ಬದ ವಾತಾವರಣ ಮೂಡಿಬರಲಿದೆ. ದೂರದ ಪ್ರಯಾಣ ಯೋಗವು ಕಂಡುಬರುತ್ತಿದೆ. ಮಹಿಳೆಯರು ಸ್ವಲ್ಪಮಟ್ಟಿನ ನೋವನ್ನು ಅನುಭವಿಸಬೇಕಾದೀತು.

ತುಲಾ: ಕುಟುಂಬದಲ್ಲಿ ಸಮಸ್ಯೆಗಳು ನಿರಾಯಾಸವಾಗಿ ಪರಿಹಾರವಾಗಲಿವೆ. ನ್ಯಾಯಾಲಯಗಳಲ್ಲಿನ ತೀರ್ಪು ವಿಳಂಬ. ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಯಶಸ್ಸು ಕಂಡುಬರುವುದು.

ವೃಶ್ಚಿಕ: ಉದ್ಯೋಗದಲ್ಲಿರುವವರಿಗೆ ಗೌರವಕ್ಕೆ ಕುಂದುತರುವ ಮಾತುಗಳನ್ನು ಕೇಳಬೇಕಾದೀತು. ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗದ ಅವಕಾಶ ದೊರೆಯಲಿದೆ.

ಧನು: ಆರ್ಥಿಕ ಸ್ಥಿತಿ ಉತ್ತಮಗೊಳ್ಳುವ ಸಾಧ್ಯತೆ. ಸೌಂದರ್ಯವರ್ಧಕ, ಅಲಂಕಾರಿಕ ವಸ್ತುಗಳ ವ್ಯವಹಾರಸ್ಥರಿಗೆ ಉತ್ತಮ ವ್ಯವಹಾರ ಕುದುರಲಿದೆ. ಮಾತು ಹಿತಮಿತವಾಗಿರುವುದು ಒಳ್ಳೆಯದು.

ಮಕರ: ವೈದ್ಯಕೀಯ ಕ್ಷೇತ್ರದಲ್ಲಿ ಯಶಸ್ಸನ್ನು ಸಾಧಿಸಲಿದ್ದೀರಿ. ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವುದು ಒಳಿತು. ವ್ಯವಹಾರದಲ್ಲಿ ಹೆಚ್ಚಿನ ಲಾಭದ ನಿರೀಕ್ಷೆ.

ಕುಂಭ: ನಿವೇಶನ ಅಥವಾ ಗ್ರಹ ಖರೀದಿಯ ಸಾಧ್ಯತೆ. ದಾಂಪತ್ಯ ಸುಖ ಉತ್ತಮ ರೀತಿಯಲ್ಲಿ ಕಂಡುಬರುವುದು. ನಿತ್ಯದ ವ್ಯವಹಾರಗಳು ಎಂದಿನಂತೆ ನಡೆಯಲಿದೆ.

ಮೀನ: ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ ಹೊಂದುವಿರಿ. ಮನೆಗೆ ಅತ್ಯಂತ ಪ್ರಿಯವ್ಯಕ್ತಿಗಳ ಆಗಮನ ಸಾಧ್ಯತೆ. ತೂಕದ ಮಾತುಗಳಿಂದಾಗಿ ಗೌರವ ಲಭ್ಯವಾಗಲಿದೆ.

ನಿಮ್ಮ ಜನ್ಮದಿನ 9-ನವೆಂಬರ್: ಈದಿನ ಅತ್ಯಂತ ಶುಭ ದಿನವಾಗಿದೆ. ಉದ್ಯೋಗದಲ್ಲಿ ಪ್ರಗತಿ ಕಂಡುಬರುವುದು. ಆರ್ಥಿಕವಾಗಿ ಅಭಿವೃದ್ಧಿಯನ್ನು ಸಾಧಿಸಲಿದ್ದೀರಿ. ನಿಮ್ಮ ಎಲ್ಲ ಕೆಲಸ ಕಾರ್ಯಗಳಿಗೆ ಸಂಗಾತಿಯ ಸಕಾಲಿಕ ಸಹಕಾರಗಳು ದೊರೆಯಲಿದೆ. ಕೌಟುಂಬಿಕ ಸಂತೋಷದ ವಾತಾವರಣ.


ಪದಬಂಧ 4772 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಾಣವನ್ನು ಮೊದಲಿಟ್ಟು ಮೊರೆ ಹೋಗುವುದು (5)
3.ಘಟನೆ ಇಲ್ಲಿಕಾಣುತ್ತಿದೆ (3)
5.ಶಿರೋನಾಮೆಯಿದು (5)
7.ಉಲ್ಟಾ ಕಾಣುತ್ತಿರುವ ಲಾಂಗೂಲ (2)
9.ಹೀಗೆ ಕೋಪಗೊಳ್ಳು (3)
11.ಸೊಕ್ಕು ಹೀಗೆ ಬಂದಿದೆ (2)
13.ಲೋಹದ ಹಕ್ಕಿಯಲ್ಲಿನ ಪಯಣ (5)
15.ಬಣಿವೆ ಹಾಕಲು ಈ ತೊಂದರೆಯೇ (3)
16.ಈ ರಿಪೋರ್ಟರ್ ಕನ್ನಡಿಗ! (5)

ಮೇಲಿಂದ ಕೆಳಕ್ಕೆ

1.ಮಳೆಗಾಲದ ಅನಂತರದ ಕಾಲ (4)
2.ಲೆಕ್ಕ ಶಾಸ್ತ್ರವಿದು (3)
4.ದೇಹವಿರುವುದ್ದಕ್ಕೇ ಈ ಅನುಮಾನ (3)
6.ಬೈಯಲು ಸೂಕ್ತವಾದ ಮೈದಾನ (3)
8.ಆಹಾರವನ್ನು ತಿನ್ನುವ ಅಂಗ (2)
9.ವನದ ಬಗ್ಗೆ ಕವಿಯು ಬರೆದ ಪದ್ಯ (3)
10.ಉಲ್ಟಾಪಲ್ಟಾ ಕಾಣುತ್ತಿರುವ ತುಕ್ಕು (2)
12.ವಾರದ ಕೊನೆಗೆ ತೋರಿದ ಡೌಲು (4)
13.ಕ್ಷೋಭೆಯನ್ನು ಹೀಗೆನ್ನಿ (3)
14.ನರ ನೋಡಿದ ಷಹರು (3)



4771ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ತಕರಾರು 3.ತತ್ವಜ್ಞಾನ 4.ಡಿಕ್ಕತ 5.ಹೊಸರಾಗ 7.ಮನೋಗತ 9.ವನವಾಸ 11.ಆಡಂಬರ 12.ಬಡವಿ 14.ಅಂಗೀಕಾರ 15.ರಕ್ಷಾಪತ್ರ

ಮೇಲಿಂದ ಕೆಳಕ್ಕೆ: 1.ತವೆ 2.ರುಪಾಡಿಗ 3.ತರತಮ 6.ಸನ್ಮಾನ 8.ಅಬಗ 10.ಸಬಕಾರ 11.ಆವಿಷ್ಕಾರ 13.ತಂತ್ರ

ಸುಡೊಕು 5158

	3		4			2		7
7		4		3			5	
			1			8		3
				4				
3		2	9		1			
				6				2
1		8	3		4		2	
	2					9		8
6		9		2			3	1

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5157 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

ಆರೋಪಿ ರಕ್ಷಣೆಗೆ ಸಾಕ್ಷ್ಯ ಸಂಗ್ರಹ: 'ಸುಪ್ರೀಂ'

ಒಂದನೇ ಪುಟದಿಂದ

ಸಾಕ್ಷಿಗಳನ್ನು ಬೇರೆ ಬೇರೆ ಎಫ್‌ಐಆರ್‌ಗಳಲ್ಲಿ ದಾಖಲಿಸಿ, ಗೋಜಲು ಮಾಡಲಾಗಿದೆ ಎಂದೂ ಪೀಠವು ಹೇಳಿದೆ.

ತನಿಖೆಯು ಸ್ವತಂತ್ರವಾಗಿ, ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತವಾಗಿ ನಡೆಯುವಂತಾಗಲು ನಿವೃತ್ತ ನ್ಯಾಯಮೂರ್ತಿಯೊಬ್ಬರ ನಿಗಾ ಅಗತ್ಯವಾಗಿದೆ ಎಂದು ಪೀಠವು ಹೇಳಿದೆ. ಪಂಜಾಬ್-ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಾದ ರಂಜಿತ್ ಸಿಂಗ್ ಮತ್ತು ರಾಕೇಶ್ ಕುಮಾರ್ ಜೈನ್ ಅವರ ಹೆಸರನ್ನೂ ಸೂಚಿಸಿದೆ.

ರಾಜ್ಯದ ನ್ಯಾಯಾಂಗ ಆಯೋಗದ ಉಸ್ತುವಾರಿಯಲ್ಲಿ ವಿಶ್ವಾಸ ಇಲ್ಲ. ತನಿಖೆಯ ಉಸ್ತುವಾರಿಗೆ ರಾಜ್ಯದ ಹೊರಗಿನವರೇ ಆಗಬೇಕು ಎಂದೂ ಪೀಠವು ಹೇಳಿದೆ. ನ್ಯಾಯಾಂಗ ತನಿಖಾ ಆಯೋಗದ ಡಮುಖ್ಯಸ್ಥರಾಗಿ ಅಲಹಾಬಾದ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪ್ರದೀಪ್ ಕುಮಾರ್ ಶ್ರೀವಾಸ್ತವ ಅವರನ್ನು ಉತ್ತರ-ಪ್ರದೇಶ ಸರ್ಕಾರ ನೇಮಿಸಿತ್ತು.

ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಬಿಟ್ಟರೆ ಉಳಿದ ಆರೋಪಿಗಳ ಮೊಬೈಲ್ ಫೋನ್‌ಗಳನ್ನು ಏಕೆ ಜಪ್ತಿ ಮಾಡಿಕೊಂಡಿಲ್ಲ ಎಂದು ಕೋರ್ಟ್ ಪ್ರಶ್ನಿಸಿದೆ. ಉಳಿದ ಆರೋಪಿಗಳು ಮೊಬೈಲ್ ಫೋನ್ ಬಳಸಿಲ್ಲವೇ ಎಂದು ಕೇಳಿದೆ.

ತನಿಖೆಯ ಸ್ಥಿತಿಗತಿ ವರದಿಯಲ್ಲಿ ಏನೂ ಇಲ್ಲ ಎಂದೂ ಕೋರ್ಟ್ ಆಕ್ರೋಶ ವ್ಯಕ್ತಪಡಿಸಿದೆ. 10 ದಿನ ಸಮಯ ಕೊಡಲಾಗಿತ್ತು. ಆದರೆ, ಪ್ರಯೋಗಾಲಯ ವರದಿಗಳನ್ನೇ ಸಲ್ಲಿಸಲಾಗಿಲ್ಲ ಎಂಬುದು ಪೀಠದ ಸಿಟ್ಟಿಗೆ ಕಾರಣವಾಗಿದೆ.

ಮೂರನೇ ಬಾರಿ ತರಾಟೆ

ಈ ಪ್ರಕರಣದಲ್ಲಿ ಉತ್ತರ ಪ್ರದೇಶ ಸರ್ಕಾರವನ್ನು ಸುಪ್ರೀಂ ಕೋರ್ಟ್ ಮೂರನೇ ಬಾರಿ ತರಾಟೆಗೆ ತೆಗೆದುಕೊಂಡಿದೆ. ಪ್ರಮುಖ ಆರೋಪಿ ಆಶಿಶ್ ಅವರನ್ನು ಬಂಧಿಸದ ಬಗ್ಗೆ ಸುಪ್ರಿಂ ಕೋರ್ಟ್ ಅಕ್ಟೋಬರ್ 11ರಂದು ಆಕ್ಷೇಪ ವ್ಯಕ್ತಪಡಿಸಿತ್ತು. ಅದಾದ ಮೂರು ದಿನಗಳ ಬಳಿಕ, ಆಶಿಶ್ ಬಂಧನವಾಗಿತ್ತು. ಸಾಕ್ಷಿಗಳ ಹೇಳಿಕೆ ದಾಖಲು ವಿಚಾರದಲ್ಲಿಯೂ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿತ್ತು.

ಮಣಿಪುರ: ಇಬ್ಬರು ಶಾಸಕರು ಬಿಜೆಪಿಗೆ

ನವದೆಹಲಿ (ಪಿಟಿಐ): ಮಣಿಪುರದ ಇಬ್ಬರು ಶಾಸಕರು ಸೋಮವಾರ ಭಾರತೀಯ ಜನತಾ ಪಕ್ಷಕ್ಕೆ (ಬಿಜೆಪಿ) ಸೇರ್ಪಡೆಯಾದರು.

ಕಾಂಗ್ರೆಸ್ ಪಕ್ಷದೊಂದಿಗೆ ಗುರುತಿಸಿಕೊಂಡಿರುವ ಪ್ರಮುಖ ರಾಜಕೀಯ ಕುಟುಂಬವೊಂದರ ಸದಸ್ಯರಾದ ರಾಜ್‌ಕುಮಾರ್ ಇಮೊ ಸಿಂಗ್ ಮತ್ತು ಕಾಂಗ್ರೆಸ್ ಶಾಸಕ ಯಮ್‌ಥಾಂಗ್ ಹಾಕಿಪ್, ಕೇಂದ್ರ ಸಚಿವ ಸರ್ಬಾನಂದ ಸೋನಾವಾಲ್ ಮತ್ತು ಮಣಿಪುರದಲ್ಲಿ ಪಕ್ಷದ ಉಸ್ತುವಾರಿಯಾಗಿರುವ ಸಂಬಿತ್ ಪಾತ್ರ ನೇತೃತ್ವದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು.

ದಾಖಲೆ ಲಭ್ಯವಿದ್ದರೂ ತನಿಖೆ ಆರಂಭಿಸದ ಸಿಬಿಐ: ಮೀಡಿಯಾಪಾರ್ಟ್ ಆರೋಪ

'ರಫೇಲ್: ಮಧ್ಯವರ್ತಿಗೆ ಲಂಚ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಫೇಲ್ ಯುದ್ಧವಿಮಾನಗಳ ಖರೀದಿ ಒಪ್ಪಂದ ಕುದುರಿಸಲು ಫ್ರಾನ್ಸ್‌ನ ಡಾಸೋ ಏವಿಯೇಷನ್ ಕಂಪನಿಯು ಭಾರತದ ಮಧ್ಯವರ್ತಿಗೆ ₹65 ಕೋಟಿ ಲಂಚ ನೀಡಿತ್ತು. ಆಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಖರೀದಿ ಹಗರಣದಲ್ಲಿ ಭಾಗಿಯಾಗಿದ್ದ ಈ ಮಧ್ಯವರ್ತಿಯು, ಈ ಒಪ್ಪಂದದಲ್ಲಿ ಲಂಚ ಪಡೆದಿರುವ ಬಗ್ಗೆ ದಾಖಲೆಗಳು ಇದ್ದರೂ ಭಾರತದ ಸಿಬಿಐ ಮತ್ತು ಜಾರಿ ನಿರ್ದೇಶನಾಲಯವು ತನಿಖೆ ಆರಂಭಿಸಲಿಲ್ಲ' ಎಂದು ಫ್ರಾನ್ಸ್‌ನ ಮೀಡಿಯಾಪಾರ್ಟ್ ಪೋರ್ಟಲ್ ವರದಿ ಮಾಡಿದೆ.

ಆಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಖರೀದಿ ಹಗರಣದಲ್ಲಿ ಮಧ್ಯವರ್ತಿಯಾಗಿದ್ದ ಸುಶೇನ್ ಗುಪ್ತಾಗೆ, ರಫೇಲ್ ಖರೀದಿ ಒಪ್ಪಂದದಲ್ಲೂ ಲಂಚ ನೀಡಲಾಗಿದೆ ಎಂದು ಮೀಡಿಯಾಪಾರ್ಟ್ ವರದಿ ಹೇಳಿದೆ.

'ಬೇರೆ ದೇಶಗಳಲ್ಲಿ ಇರುವ ಕಂಪನಿಗಳು, ನಕಲಿ ಒಪ್ಪಂದಗಳು ಮತ್ತು ನಕಲಿ ಇನ್‌ವಾಯ್ಸ್‌ಗಳನ್ನು ಬಳಸಿಕೊಂಡು ಈ ಲಂಚ ಪಾವತಿ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮಾರಿಷಸ್ ಸರ್ಕಾರವು ಸಿಬಿಐ ಮತ್ತು ಜಾರಿ ನಿರ್ದೇಶನಾಲಯಕ್ಕೆ ನೀಡಿತ್ತು.



ರಫೇಲ್ ಯುದ್ಧವಿಮಾನ

2018ರ ಅಕ್ಟೋಬರ್ 11ರಿಂದ ಈ ದಾಖಲೆಗಳು ಲಭ್ಯವಿದ್ದರೂ ಭಾರತದ ತನಿಖಾ ಸಂಸ್ಥೆಗಳು ತನಿಖೆ ಮಾಡಲಿಲ್ಲ' ಎಂದು ಮೀಡಿಯಾಪಾರ್ಟ್ ವಿವರಿಸಿದೆ.

'ಈ ದಾಖಲೆಗಳು ಲಭ್ಯವಾಗುವುದಕ್ಕೆ ಒಂದು ವಾರದ ಮೊದಲಷ್ಟೇ ಒಪ್ಪಂದಕ್ಕೆ ಸಂಬಂಧಿಸಿದಂತೆ ಭ್ರಷ್ಟಾಚಾರ ನಡೆದಿರುವ ಬಗ್ಗೆ ದೂರು ದಾಖಲಾಗಿತ್ತು. ದೂರು ದಾಖಲಾದ ಏಳು ದಿನಗಳ ನಂತರ ಈ ದಾಖಲೆಗಳು ಈ ಎರಡೂ ಸಂಸ್ಥೆಗಳ ಕೈಸೇರಿದ್ದವು. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಅಧಿಕಾರದಲ್ಲಿ ಇದ್ದಾಗ 2007 ಮತ್ತು 2012ರಲ್ಲಿ ಸುಶೇನ್ ಗುಪ್ತಾಗೆ ಲಂಚ ನೀಡಲಾಗಿದೆ ಎಂಬುದನ್ನು ಈ ದಾಖಲೆಗಳು ಹೇಳುತ್ತವೆ' ಎಂದು ಮೀಡಿಯಾಪಾರ್ಟ್ ವರದಿ ಮಾಡಿದೆ.

'2015ರಲ್ಲಿ ರಫೇಲ್ ಖರೀದಿ ಮಾತುಕತೆಯು ಅಂತಿಮ ಹಂತದಲ್ಲಿ ಇದ್ದಾಗ, ಒಪ್ಪಂದಕ್ಕೆ ಸಂಬಂಧಿಸಿದ ಮಹತ್ವದ ದಾಖಲೆಗಳು ಸುಶೇನ್ ಗುಪ್ತಾ ಬಳಿ ಇದ್ದವು. ರಕ್ಷಣಾ ಸಚಿವಾಲಯದಿಂದಲೇ ಅವರು ಈ ದಾಖಲೆಗಳನ್ನು ಪಡೆದುಕೊಂಡಿದ್ದರು. ಖರೀದಿಗೆ ಸಂಬಂಧಿಸಿದಂತೆ ರಕ್ಷಣಾ ಸಚಿವಾಲಯದ ನಿಲುವು ಏನು ಎಂಬುದು ಮತ್ತು ವಿಮಾನಗಳ ಬೆಲೆಯನ್ನು ಹೇಗೆ ಲೆಕ್ಕ ಹಾಕಲಾಗುತ್ತಿದೆ ಎಂಬುದರ ಮಾಹಿತಿ ಇದ್ದ ಮಹತ್ವದ ದಾಖಲೆಗಳು ಅವರಿಗೆ ಲಭ್ಯವಾಗಿದ್ದವು' ಎಂದು ಮೀಡಿಯಾಪಾರ್ಟ್ ಹೇಳಿದೆ.

'ರಫೇಲ್ ಒಪ್ಪಂದದಲ್ಲಿ ಸುಶೇನ್ ಲಂಚ ಪಡೆದಿರುವುದು, ಆಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಹಗರಣದ ತನಿಖೆ ವೇಳೆ ಪತ್ತೆಯಾಗಿದೆ. ಸುಶೇನ್ ಗುಪ್ತಾ ಅವರ ಇಂಟರ್‌ಸ್ಟೆಲ್ಲರ್ ಟೆಕ್ನಾಲಜೀಸ್ ಸಂಸ್ಥೆಯು ಪಡೆದಿರುವ ಗುತ್ತಿಗೆ ದಾಖಲೆಗಳು, ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು ಮತ್ತು ಶುಲ್ಕ ಪಾವತಿ ದಾಖಲೆಗಳನ್ನು ಮಾರಿಷಸ್ ಸರ್ಕಾರವು ಸಿಬಿಐಗೆ ನೀಡಿದೆ. ಇದಕ್ಕೆ ಸಂಬಂಧಿಸಿದ 12,000 ಪುಟಗಳಷ್ಟು ದಾಖಲೆ ಪತ್ರಗಳನ್ನು ಸಿಬಿಐ ಕಲೆ ಹಾಕಿದೆ. ಆ ದಾಖಲೆ ಪತ್ರಗಳು ನಮಗೆ ಲಭ್ಯವಾಗಿವೆ' ಎಂದು ಮೀಡಿಯಾಪಾರ್ಟ್ ಹೇಳಿದೆ. ಈ ದಾಖಲೆ ಪತ್ರಗಳನ್ನು 'ಪ್ರಜಾವಾಣಿ' ಪರಿಶೀಲಿಸಲು ಸಾಧ್ಯವಾಗಿಲ್ಲ.

'ಸುಶೇನ್ ಗುಪ್ತಾ ಅವರು ಮಾರಿಷಸ್‌ನಲ್ಲಿ ಇಂಟರ್‌ಸ್ಟೆಲರ್ ಟೆಕ್ನಾಲಜೀಸ್ ಎಂಬ ಐಟಿ ಕಂಪನಿ ನಡೆಸುತ್ತಿದ್ದಾರೆ. ಡಾಸೋ ಜತೆಗೆ ಈ ಕಂಪನಿಯು ಗುತ್ತಿಗೆ ಮಾಡಿಕೊಂಡಿದೆ. ಈ ಗುತ್ತಿಗೆಗಳಿಗೆ ಸಾಮಾನ್ಯಕ್ಕಿಂತ ಅತಿಹೆಚ್ಚು ಶುಲ್ಕ ವಿಧಿಸಲಾಗಿದೆ. ಈ ಕಂಪನಿಗೆ ಶುಲ್ಕ ನೀಡುವ ಸಲುವಾಗಿ ನಕಲಿ ಇನ್‌ವಾಯ್ಸ್‌ಗಳನ್ನು ಬಳಸಿಕೊಳ್ಳಲಾಗಿದೆ. ಈ ಇನ್‌ವಾಯ್ಸ್‌ಗಳಲ್ಲಿ ಡಾಸೋ ಕಂಪನಿಯ ಹೆಸರನ್ನು ಡಸೋ ಎಂದು ತಪ್ಪಾಗಿ ನಮೂದಿಸಲಾಗಿದೆ' ಎಂದು ಮೀಡಿಯಾಪಾರ್ಟ್ ವಿವರಿಸಿದೆ.

ರಫೇಲ್ ಯುದ್ಧವಿಮಾನ ಖರೀದಿಯಲ್ಲಿ ಕೇಂದ್ರ ಸರ್ಕಾರವು ಅಕ್ರಮ ಎಸಗಿದೆ ಎಂದು ವಿರೋಧ ಪಕ್ಷವಾದ ಕಾಂಗ್ರೆಸ್ ಆರೋಪಿಸುತ್ತಲೇ ಇದೆ. ಯುಪಿಎ ಸರ್ಕಾರದ ಅವಧಿಯಲ್ಲಿ ಮಾಡಿಕೊಳ್ಳಲಾಗಿದ್ದ ಒಪ್ಪಂದವನ್ನು ರದ್ದುಪಡಿಸಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಹೊಸ ಒಪ್ಪಂದ ಮಾಡಿಕೊಂಡಿತ್ತು.

ಡಾಸೋಗೆ ಗುಪ್ತಾ ಸಂದೇಶ

ರಫೇಲ್ ಒಪ್ಪಂದಕ್ಕೆ ಸಂಬಂಧಿಸಿದಂತೆ ಸುಶೇನ್ ಗುಪ್ತಾ, ಡಾಸೋ ಏವಿಯೇಷನ್‌ಗೆ ಸಂದೇಶ ಕಳುಹಿಸಿದ್ದರು. ಇದಕ್ಕೆ ಸಂಬಂಧಿಸಿದ ದಾಖಲೆ ಸಹ ಸಿಬಿಐ ಬಳಿ ಇತ್ತು ಎಂದು ಮೀಡಿಯಾಪಾರ್ಟ್ ಹೇಳಿದೆ.

'ನಾವು ಈಗಾಗಲೇ ಅಪಾಯವನ್ನು ಮೈಮೇಲೆ ಎಳೆದುಕೊಂಡಿದ್ದೇವೆ. ಹಣ ನೀಡಿರುವ ಕಾರಣ, ಏಜೆಂಟ್ ಈಗ ನಮ್ಮ ಪರವಾಗಿದ್ದಾನೆ. ಆದರೆ ಇದೆಲ್ಲವೂ ಕಾನೂನುಬದ್ಧ ಮತ್ತು ಸಮರ್ಥನೀಯ ಎಂಬಂತೆ ಮಾಡುವುದು ನಿಮ್ಮ ಹೊಣೆ. ಹಣ ಇಲ್ಲದಿದ್ದರೆ, ಯಾವ ನಿರ್ಧಾರವೂ ಇಲ್ಲ. ಕಚೇರಿಗಳಲ್ಲಿ ಕುಳಿತಿರುವ ವ್ಯಕ್ತಿಗಳು ಹಣಕ್ಕಾಗಿ ಒತ್ತಾಯಿಸುತ್ತಿದ್ದಾರೆ. ನಾವು ಹಣ ನೀಡದಿದ್ದರೆ, ಅವರು ನಮ್ಮನ್ನು ಜೈಲಿಗೆ ಕಳುಹಿಸುತ್ತಾರೆ ಎಂದು ಸುಶೇನ್ ಗುಪ್ತಾ ಡಾಸೋ ಏವಿಯೇಷನ್‌ಗೆ ಸಂದೇಶ ಕಳುಹಿಸಿದ್ದರು' ಎಂದು ಮೀಡಿಯಾಪಾರ್ಟ್ ವಿವರಿಸಿದೆ.

ಮುಖ್ಯಾಂಶಗಳು

- ನಕಲಿ ಇನ್‌ವಾಯ್ಸ್‌ಗಳ ಮೂಲಕ ಲಂಚ ಪಾವತಿಸಿದ ಡಾಸೋ ಏವಿಯೇಷನ್
- 2018ರಲ್ಲೇ ದಾಖಲೆ ಲಭ್ಯವಿದ್ದರೂ, ತನಿಖೆ ನಡೆಸದ ಸಿಬಿಐ-ಇ.ಡಿ.

ಚೆನ್ನೈ ಅಸ್ತವ್ಯಸ್ತ; ರಸ್ತೆಗಳು ಜಲಾವೃತ • ಮಳೆ ಸಂಬಂಧಿ ಅವಘಡಗಳಲ್ಲಿ ನಾಲ್ವರ ಸಾವು

ಮಳೆಗೆ ನಲುಗಿದ ತಮಿಳುನಾಡು, ಪುದುಚೇರಿ

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ ಸೋಮವಾರವೂ ಮಳೆ ಮುಂದುವರಿದಿದ್ದು, ಮಳೆ ಸಂಬಂಧಿ ಅವಘಡಗಳಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ರಾಜಧಾನಿ ಚೆನ್ನೈ ವಲಯ ಹಾಗೂ ರಾಜ್ಯದ ಉತ್ತರ ಭಾಗದ ಜಿಲ್ಲೆಗಳಾದ ಚೆಂಗಲ್‌ಪೇಟ್, ಕಾಂಚಿಪುರಂ, ತಿರುವಳ್ಳೂರು ಮತ್ತು ವೆಲ್ಲೂರಿನಲ್ಲಿ ಮುಂಜಾನೆಯಿಂದ ಮಳೆಯಾಗುತ್ತಿದೆ. ಮುಂಜಾಗ್ರತಾ ಕ್ರಮವಾಗಿ ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಲಾಗಿದೆ.

ಸೋಮವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ, 24 ಗಂಟೆಗಳಲ್ಲಿ ಚೆನ್ನೈ ಉಪನಗರ ವ್ಯಾಪ್ತಿಯಲ್ಲಿ 14 ಸೆಂ. ಮೀಟರ್‌ವರೆಗೆ ಮಳೆ ಸುರಿದಿದೆ. ಉಳಿದ ಜಿಲ್ಲೆಗಳಲ್ಲಿ 1 ಸೆಂ.ಮೀಟರ್‌ವರೆಗೂ ಮಳೆಯಾಗಿದೆ. ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಭೇಟಿ ನೀಡಿ ಪರಿಶೀಲಿಸಿದರು.

ಚೆನ್ನೈನ ಬಹುತೇಕ ರಸ್ತೆಗಳು, ಅಂಡರ್‌ಪಾಸ್‌ಗಳು ಜಲಾವೃತಗೊಂಡಿವೆ. ಇದರಿಂದ ವಾಹನ ಸವಾರರಿಗೆ ತೊಂದರೆಯಾಗಿದೆ. ಜಲಾವೃತ ಆಡಂಬಾಕಂ ಪೊಲೀಸ್ ಠಾಣೆಯನ್ನು ಬೇರೆಡೆಗೆ ಸ್ಥಳಾಂತರ ಮಾಡಲಾಗಿದೆ. ಪರಿಹಾರ ಕಾರ್ಯಾಚರಣೆಗೆ ಚೆನ್ನೈ ಪಾಲಿಕೆಯು ಸುಮಾರು



ಚೆನ್ನೈನ ಹಲವು ರಸ್ತೆಗಳಲ್ಲಿ ನೀರು ನಿಂತಿದೆ–ಪಿಟಿಐ ಚಿತ್ರ

23 ಸಾವಿರ ಸಿಬ್ಬಂದಿಯನ್ನು ನಿಯೋಜಿಸಿದೆ. ಮಳೆಯಿಂದ ಸಂತ್ರಸ್ತರಾಗಿರುವ 2 ಲಕ್ಷಕ್ಕೂ ಹೆಚ್ಚು ಜನರಿಗೆ ಆಹಾರವನ್ನು ಒದಗಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸುಮಾರು 3.36 ಲಕ್ಷ ಆಹಾರದ ಪೊಟ್ಟಣಗಳನ್ನು ವಿತರಿಸಲಾಗಿದೆ. ಸೋಮವಾರ ಬೆಳಗಿನವರೆಗಿನ ಮಾಹಿತಿ ಪ್ರಕಾರ, ಜಲಾವೃತ ಪ್ರದೇಶಗಳ 889 ಜನರನ್ನು ಪರಿಹಾರ ಕೇಂದ್ರಗಳಿಗೆ ಸ್ಥಳಾಂತರ ಮಾಡಲಾಗಿದೆ.

ಚೆನ್ನೈನ 15 ವಲಯಗಳ ಮೇಲುಸ್ತುವಾರಿಗೆ 15 ಐಎಎಸ್ ಅಧಿಕಾರಿಗಳನ್ನು ಮುಖ್ಯಮಂತ್ರಿ ನಿಯೋಜಿಸಿದ್ದಾರೆ. 200 ವಿಶೇಷ ವೈದ್ಯಕೀಯ ಶಿಬಿರಗಳನ್ನು ತೆರೆಯಲಾಗಿದೆ. ತಗ್ಗು ಪ್ರದೇಶಗಳನ್ನು ಆವರಿಸಿರುವ ಕೆಸರು ಹಾಗೂ ಕಸವನ್ನು ತೆರವುಗೊಳಿಸಲು ಪಾಲಿಕೆ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ.

ಭಾನುವಾರ ಮಳೆಯಿಂದ ತೊಂದರೆಗೆ ಈಡಾಗಿದ್ದ ನಗರ ರೈಲು ಸೇವೆಯನ್ನು ಮತ್ತೆ ಸರಿದಾರಿಗೆ ತರಲು ಯತ್ನಿಸಲಾಗುತ್ತಿದೆ ಎಂದು ದಕ್ಷಿಣ ರೈಲ್ವೆ ಟ್ವೀಟ್ ಮಾಡಿದೆ. ಅಂತರರಾಜ್ಯ ಬಸ್ ಸೇವೆ ವ್ಯತ್ಯಯಗೊಡಿದೆ. ಮಳೆಯಿಂದಾಗಿ ತರಕಾರಿಗಳ ಬೆಲೆ ಗಗನಕ್ಕೇರಿದ್ದು, ₹30ಕ್ಕೆ ಸಿಗುತ್ತಿದ್ದ ಟೊಮೆಟೋ ₹100ಕ್ಕೆ ಮಾರಾಟವಾಗುತ್ತಿದೆ.

ಪುದುಚೇರಿ ಅಸ್ತವ್ಯಸ್ತ: ಸೋಮವಾರ ವ್ಯಾಪಕ ಮಳೆ ಸುರಿದ ಕಾರಣ ಪುದುಚೇರಿಯಲ್ಲಿ ಜನಜೀವನ ಅಸ್ತವ್ಯಸ್ತವಾಗಿತ್ತು. ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಮಂಗಳವಾರವೂ ರಜೆ ಪ್ರಕಟಿಸಲಾಗಿದೆ. ಪುದುಚೇರಿಯಲ್ಲಿ ಸೋಮವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ 24 ಗಂಟೆಗಳಲ್ಲಿ 6.1 ಸೆಂ. ಮೀಟರ್ ಮಳೆ ಸುರಿದಿದೆ. ಪುದುಚೇರಿಯ ಎರಡು ಪ್ರಮುಖ ಜಲಮೂಲಗಳಾದ ಬಹೂರ್ ಮತ್ತು ಔಸುಡು ಜಲಾಶಯಗಳಲ್ಲಿ ನೀರಿನ ಮಟ್ಟ ಪೂರ್ಣಮಟ್ಟ ತಲುಪಿದೆ. ಶಂಕರಬರಣಿ ನದಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದೆ.

ಗರಿಷ್ಠ ಮಟ್ಟ ತಲುಪಿದೆ ಮೆಟ್ಟೂರು ಜಲಾಶಯ

ಕಳೆದ ಎರಡು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ ನೀರಿನ ಸಂಗ್ರಹ ಗರಿಷ್ಠ ಮಟ್ಟಕ್ಕೆ ತಲುಪಿದೆ. ಕರ್ನಾಟಕದ ಜಲಾಶಯಗಳಿಂದ ನೀರನ್ನು ಹೊರಬಿಡುತ್ತಿರುವುದು ಹಾಗೂ ಕಾವೇರಿ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾಗುತ್ತಿರುವುದರಿಂದ ಜಲಾಶಯ ಭರ್ತಿಯಾಗಿದೆ.

ಸೋಮವಾರ ಬೆಳಿಗ್ಗೆ ಜಲಾಶಯದ ಮಟ್ಟ 118.32 ಅಡಿ ಇತ್ತು. ಗರಿಷ್ಠ ಮಟ್ಟ 120 ಅಡಿ. ಜಲಾಶಯದಲ್ಲಿ 90 ಟಿಎಂಸಿ ಅಡಿ ನೀರಿನ ಸಂಗ್ರಹವಿದೆ. 150 ಕ್ಯೂಸೆಕ್ ನೀರನ್ನು ಕಾಲುವೆಗಳಿಗೆ ಹರಿಸಲಾಗುತ್ತಿದೆ. ನದಿಗೆ 100 ಕ್ಯೂಸೆಕ್ ನೀರು ಬಿಡಲಾಗುತ್ತಿದೆ.

ಎರಡು ದಿನ ಭಾರಿ ಮಳೆ ಮುನ್ಸೂಚನೆ

ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಬುಧವಾರ ಮತ್ತು ಗುರುವಾರ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಬಂಗಾಳ ಕೊಲ್ಲಿಯ ಆಗ್ನೇಯ ದಿಕ್ಕಿನಲ್ಲಿ ಚಂಡಮಾರುತ ಉಂಟಾಗಿದ್ದು, ಇದರ ಪರಿಣಾಮ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಮಾನನಷ್ಟ ಮೊಕದ್ದಮೆ: ಮಲಿಕ್‌ಗೆ ನೋಟಿಸ್

ಮುಂಬೈ (ಪಿಟಿಐ): ಮಾದಕ ದ್ರವ್ಯ ನಿಯಂತ್ರಣ ಸಂಸ್ಥೆಯ (ಎನ್‌ಸಿಬಿ) ಮುಂಬೈ ವಲಯ ನಿರ್ದೇಶಕ ಸಮೀರ್ ವಾಂಖೆಡೆ ಅವರ ತಂದೆ ಧ್ಯಾನ್‌ದೇವ್ ವಾಂಖೆಡೆ ಹೂಡಿರುವ ಮಾನನಷ್ಟ ಮೊಕದ್ದಮೆಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್ ಅವರಿಗೆ ಬಾಂಬೆ ಹೈಕೋರ್ಟ್ ಸೋಮವಾರ ಸೂಚಿಸಿದೆ.

'ನಾಳೆಯೊಳಗಾಗಿ (ಮಂಗಳವಾರ) ನೀವು (ಮಲಿಕ್) ಪ್ರತಿಕ್ರಿಯೆಯನ್ನು ಸಲ್ಲಿಸಿ. ನಿಮಗೆ, ಟ್ವಿಟರ್‌ನಲ್ಲಿ ಪ್ರತ್ಯುತ್ತರ ನೀಡುವುದು ಸಾಧ್ಯವಾಗುತ್ತದೆ ಎನ್ನುವುದಾದರೆ ಇಲ್ಲಿಯೂ ಅದು ಸಾಧ್ಯವಾಗಬೇಕು' ಎಂದು ನ್ಯಾಯಮೂರ್ತಿ ಮಾಧವ್ ಜಾಮದಾರ್ ಹೇಳಿದರು.

ಧ್ಯಾನ್‌ದೇವ್ ಪರ ಹಾಜರಿದ್ದ ವಕೀಲ ಅರ್ಷದ್ ಶೇಖ್, 'ಪ್ರತಿವಾದಿ ಮಲಿಕ್, ನಿತ್ಯವೂ ಸುಳ್ಳು ಮತ್ತು ಮಾನಹಾನಿಕರ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಬಳಿಕ ಇದು ಸಾಮಾಜಿಕ ಮಾಧ್ಯಮದಲ್ಲಿಯೂ ಮತ್ತಷ್ಟು ಮಾನಹಾನಿಕರವಾದ ಟೀಕೆಗಳಿಗೆ ಕಾರಣವಾಗುತ್ತದೆ. ಪ್ರತಿವಾದಿಯು, ಇಂದು (ಸೋಮವಾರ) ಬೆಳಿಗ್ಗೆ ಸಮೀರ್ ವಾಂಖೆಡೆ ಅವರ ನಾದಿನಿ ಬಗ್ಗೆ ಟ್ವೀಟ್ ಮಾಡಿದ್ದಾರೆ. ಕನಿಷ್ಠ ಪಕ್ಷ, ಈ ಪ್ರಕರಣದ ವಿಚಾರಣೆ ಮುಗಿಯುವವರೆಗೆ ಮಲಿಕ್ ಅವರು ಇಂಥ ಹೇಳಿಕೆ ನೀಡುವುದನ್ನು ಬಿಡಬೇಕು ಇಲ್ಲವೇ ಇಂಥ ಹೇಳಿಕೆ ನೀಡದಂತೆ ಅವರಿಗೆ ನಿರ್ದೇಶನ ನೀಡಬೇಕು' ಎಂದು ನ್ಯಾಯಾಲಯಕ್ಕೆ ಮನವಿ ಮಾಡಿದರು.

ಪ್ರಮಾಣಪತ್ರ ಸಲ್ಲಿಸಲು ಸಮಯ ಕೋರಿದ ಮಲಿಕ್ ಪರ ವಕೀಲ ಅತುಲ್ ದಾಮ್ಲೆ, 'ವಾದಿಯು, ತಮ್ಮ ವಯಸ್ಕ ಮಕ್ಕಳ ಪರವಾಗಿ ಮಾತನಾಡಲಾಗದು ಹಾಗೂ ಸಾಮಾಜಿಕ ಮಾಧ್ಯಮದಲ್ಲಿ ಬರುವ ಟೀಕೆಗಳಿಗೆ ಮಲಿಕ್ ಕಾರಣರಲ್ಲ' ಎಂದು ಹೇಳಿದರು.

ಪ್ರಕರಣದ ವಾದಿಯ (ಧ್ಯಾನ್‌ದೇವ್) ವಿರುದ್ಧ ಹೇಳಿಕೆ ನೀಡುವುದನ್ನು ನಿರ್ಬಂಧಿಸುವ ಯಾವ ಆದೇಶವನ್ನೂ ನ್ಯಾಯಾಲಯ ನೀಡಿಲ್ಲ.

ಪಾರ್ಟಿಗೆ ಆಹ್ವಾನ ಬಂದಿತ್ತು: ಶೇಖ್

ಐಷಾರಾಮಿ ಹಡಗಿನಲ್ಲಿ ನಡೆದ ಪಾರ್ಟಿಗೆ ತಮಗೂ ಆಹ್ವಾನ ಇತ್ತು ಎಂಬುದನ್ನು ಮಹಾರಾಷ್ಟ್ರದ ಬಂದರು-ಮೀನುಗಾರಿಕೆ ಹಾಗೂ ಜವಳಿ ಸಚಿವ ಅಸ್ಲಂ ಶೇಖ್ ಸೋಮವಾರ ದೃಢಪಡಿಸಿದ್ದಾರೆ. ಆದರೆ, ಕಾರ್ಯಕ್ರಮವನ್ನು ಸಂಘಟಿಸಿದ ಫ್ಯಾಷನ್ ಟಿವಿ ಇಂಡಿಯಾದ ಮುಖ್ಯಸ್ಥ ಕಾಸಿಫ್ ಖಾನ್ ತಮಗೆ ಪರಿಚಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಸಚಿವ ನವಾಬ್ ಮಲಿಕ್ ಅವರು, ತಮ್ಮ ಸಂಪುಟ ಸಹೋದ್ಯೋಗಿ ಅಸ್ಲಂ ಶೇಖ್ ಹಾಗೂ ಅವರ ಮಕ್ಕಳನ್ನೂ ಪಾರ್ಟಿಗೆ ಆಮಂತ್ರಿಸಲಾಗಿತ್ತು ಎಂದು ಭಾನುವಾರವಷ್ಟೇ ಹೇಳಿಕೆ ನೀಡಿದ್ದರು.

ತಮಗೆ ಬರುವ ಹಲವಾರು ಆಮಂತ್ರಣಗಳಂತೆಯೇ ಇದನ್ನೂ ಭಾವಿಸಿದ್ದಾಗಿ ಹೇಳಿರುವ ಶೇಖ್, ಅಲ್ಲಿಗೆ ಹೋಗುವ ಇರಾದೆ ಇಲ್ಲದಿದ್ದರಿಂದ ಆ ಬಗ್ಗೆ ಹೆಚ್ಚು ವಿಚಾರಿಸಿಲ್ಲ ಎಂದಿದ್ದಾರೆ. 'ನನಗೆ ತಿಳಿದ ಮಟ್ಟಿಗೆ ಕಾಸಿಫ್ ಖಾನ್ ಎಂಬಾತನೊಂದಿಗೆ ನಾನು ಫೋನ್‌ನಲ್ಲಿಯೂ ಮಾತನಾಡಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

ನಿಮ್ಮ ನಾದಿನಿಯೂ ಡ್ರಗ್ಸ್ ವಹಿವಾಟಿನಲ್ಲಿ ಭಾಗಿಯೇ?

ಮುಂಬೈ (ಪಿಟಿಐ): ಎನ್‌ಸಿಬಿ ಅಧಿಕಾರಿ ಸಮೀರ್ ವಾಂಖೆಡೆ ವಿರುದ್ಧ ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್ ವಾಗ್ದಾಳಿ ಮುಂದುವರಿಸಿದ್ದಾರೆ. 'ಡ್ರಗ್ಸ್ ವಹಿವಾಟಿನಲ್ಲಿ ನಿಮ್ಮ ನಾದಿನಿಯೂ ಭಾಗಿಯಾಗಿದ್ದಾರೆಯೇ' ಎಂದು ಸಮೀರ್ ಅವರನ್ನು ಮಲಿಕ್ ಕೇಳಿದ್ದಾರೆ.

'ಸಮೀರ್ ದಾವೂದ್ ವಾಂಖೆಡೆ, ನಿಮ್ಮ ನಾದಿನಿ ಹರ್ಷದಾ ದೀನಾನಾಥ್ ರೆಡ್ಕರ್ ಅವರೂ ಡ್ರಗ್ಸ್ ವಹಿವಾಟಿನಲ್ಲಿ ತೊಡಗಿದ್ದಾರೆಯೇ? ಇದಕ್ಕೆ ನೀವು ಉತ್ತರಿಸಬೇಕು. ಏಕೆಂದರೆ, ಪುಣೆ ನ್ಯಾಯಾಲಯದಲ್ಲಿ ಅವರ ವಿರುದ್ಧ ಪ್ರಕರಣವೊಂದು ಬಾಕಿ ಇದೆ. ಅದಕ್ಕೆ ಪುರಾವೆಯೂ ಇದೆ' ಎಂದು ಸಚಿವ ಮಲಿಕ್ ಸೋಮವಾರ ಟ್ವೀಟ್ ಮಾಡಿದ್ದು, ಪೂರಕವಾಗಿ ದಾಖಲೆಯೊಂದನ್ನು ಹಂಚಿಕೊಂಡಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಎನ್‌ಸಿಬಿ ಅಧಿಕಾರಿಯೊಬ್ಬರು, 'ವಾಂಖೆಡೆ ಅವರು ಸೆಪ್ಟೆಂಬರ್ 2008ರಲ್ಲಿ ಸೇವೆಗೆ ಸೇರಿದ್ದಾರೆ. ಅವರ ನಾದಿನಿಗೆ ಸೇರಿದ್ದು ಎನ್ನಲಾದ ಪ್ರಕರಣ ಜನವರಿ 2008ರಲ್ಲಿ ದಾಖಲಾಗಿದೆ. ವಾಂಖೆಡೆ ಅವರು ಹರ್ಷದಾ ಅವರ ಸಹೋದರಿ ಕ್ರಾಂತಿ ಅವರನ್ನು 2017ರಲ್ಲಿ ಮದುವೆಯಾಗಿದ್ದಾರೆ' ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಕೌಟುಂಬಿಕ ದೌರ್ಜನ್ಯ ಪೀಡಿತರಿಗೆ ಮೂಲ ಸೌಕರ್ಯ ಕಲ್ಪಿಸಿ'

ನವದೆಹಲಿ(ಪಿಟಿಐ): ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ದೇಶದಾದ್ಯಂತ ಪರಿಣಾಮಕಾರಿ ಕಾನೂನು ನೆರವು ನೀಡುವ ಹಾಗೂ ಮೂಲ ಸೌಕರ್ಯ ಕಲ್ಪಿಸುವಂತೆ ಕೋರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಕುರಿತು ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿದೆ.

ನ್ಯಾಯಮೂರ್ತಿಗಳಾದ ಯು.ಯು. ಲಲಿತ್ ಮತ್ತು ಎಸ್. ರವೀಂದ್ರ ಭಟ್ ಅವರನ್ನೊಳಗೊಂಡ ಪೀಠ ಈ ಸಂಬಂಧ ಡಿಸೆಂಬರ್ 6ರೊಳಗೆ ಪ್ರತಿಕ್ರಿಯೆ ನೀಡುವಂತೆ, ಕೇಂದ್ರ ಸರ್ಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ವಾರ್ತಾ ಮತ್ತು ಪ್ರಸಾರ ಸಚಿವಾಲಯಕ್ಕೆ ನೋಟಿಸ್ ನೀಡಿದೆ.

'ಈ ಅರ್ಜಿಯ ಸಂಬಂಧ ನಾವು ಪ್ರತಿವಾದಿಗಳಿಗೆ ನೋಟಿಸ್ ನೀಡಿದ್ದೇವೆ. ಆದರೆ, ರಾಜ್ಯ ಸರ್ಕಾರಗಳಿಗೆ ನೋಟಿಸ್ ನೀಡಿಲ್ಲ. ಈ ಪ್ರಕರಣದ ಮೇಲ್ವಿಚಾರಣೆಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ' ಎಂದು ನ್ಯಾಯಾಲಯ ಹೇಳಿದೆ.

ಕೋಟ್ಕಾಪುರ ಪ್ರಕರಣ: ಸಿಧು ಪ್ರಶ್ನೆ

ಚಂಡೀಗಡ (ಪಿಟಿಐ): '2015ರ ಕೋಟ್ಕಾಪುರದಲ್ಲಿ ಪೊಲೀಸರು ನಡೆಸಿದ ಗುಂಡಿನ ದಾಳಿ ಪ್ರಕರಣದ ತನಿಖೆಯ ದೋಷಾರೋಪ ಪಟ್ಟಿ ಎಲ್ಲಿದೆ' ಎಂದು ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಪ್ರಶ್ನಿಸಿದ್ದಾರೆ.

'ಹೈಕೋರ್ಟ್ ನೀಡಿದ 6 ತಿಂಗಳ ಗಡುವು ಮೀರಿದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಎತ್ತಿದ್ದಾರೆ.

ಸಿಬಿಐ ಅನುಮತಿ ರದ್ದತಿ: ಕಳವಳ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮ್ಮ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು ಸಿಬಿಐಗೆ ನೀಡಿದ್ದ ಮುಕ್ತ ಅನುಮತಿಯನ್ನು ಎಂಟು ರಾಜ್ಯಗಳು ವಾಪಸ್ ಪಡೆದಿರುವ ಬಗ್ಗೆ ಸುಪ್ರೀಂ ಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.

ಎಂಟು ರಾಜ್ಯಗಳು ಮುಕ್ತ ಅನುಮತಿ ವಾಪಸ್ ಪಡೆದಿರುವ ಬಗ್ಗೆ ಸಿಬಿಐ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಎಂ.ಎಂ.ಸುಂದ್ರೇಶ್ ಅವರು ಈ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಅರ್ಜಿಯನ್ನು ಈ ಪೀಠವು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರ ಪೀಠಕ್ಕೆ ವರ್ಗಾಯಿಸಿದೆ.

ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಕೇರಳ, ಪಂಜಾಬ್, ರಾಜಸ್ಥಾನ, ಜಾರ್ಖಂಡ್, ಛತ್ತೀಸಗಡ ಮತ್ತು ಮಿಜೋರಾಂ ಸರ್ಕಾರಗಳು ಸಿಬಿಐಗೆ ನೀಡಿದ್ದ ಮುಕ್ತ ಅನುಮತಿಯನ್ನು ವಾಪಸ್ ಪಡೆದಿವೆ.

ಕೃಷ್ಣಾ ನದಿ ಬಳಕೆ– ಕೇಂದ್ರಕ್ಕೆ ಸೂಚಿಸಲು ರಾಜ್ಯದ ಮನವಿ

ಪ್ರಜಾವಾಣಿ ವಾರ್ತೆ


ನವದೆಹಲಿ: ರಾಜ್ಯದ ಅಂದಾಜು 5.94 ಲಕ್ಷ ಹೆಕ್ಟೇರ್ ಭೂಮಿಗೆ 2022ರ ಜೂನ್‌ನಿಂದ ನೀರಾವರಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕೃಷ್ಣಾ ನದಿಯ 75 ಟಿಎಂಸಿ ಅಡಿ ನೀರನ್ನು ಬಳಸಿಕೊಳ್ಳಲು ಅನುಮತಿ ನೀಡಬೇಕು ಎಂದು ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎ.ಎಸ್. ಬೋಪಣ್ಣ ಅವರಿದ್ದ ಪೀಠದೆದುರು ಸೋಮವಾರ ನಡೆದ ಕೃಷ್ಣಾ ನದಿ ನೀರಿನ ವಿವಾದ ಕುರಿತ ಮೇಲ್ಮನವಿಯ ವಿಚಾರಣೆ ವೇಳೆ ರಾಜ್ಯ ಸರ್ಕಾರ ಸಲ್ಲಿಸಿರುವ ಹೆಚ್ಚುವರಿ ಹೇಳಿಕೆಯಲ್ಲಿ ಈ ಕುರಿತು ಆಗ್ರಹಿಸಲಾಗಿದೆ.

ರಾಜ್ಯದ ಉತ್ತರ ಭಾಗದ ಬರಪೀಡಿತ ಜಿಲ್ಲೆಗಳ ರೈತರ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲು ಕೈಗೆತ್ತಿಕೊಳ್ಳಲಾದ ಕೃಷ್ಣಾ ಮೇಲ್ದಂಡೆ ಯೋಜನೆಯ -3ನೇ ಹಂತದ ಮೂಲಸೌಲಭ್ಯ ಅಭಿವೃದ್ಧಿ ಕಾಮಗಾರಿಗೆ ಈಗಾಗಲೇ ₹ 13,000 ಕೋಟಿಗೂ ಅಧಿಕ ಮೊತ್ತದ ಹಣವನ್ನು ಹೂಡಿಕೆ ಮಾಡಲಾಗಿದೆ. ಕಾಮಗಾರಿ ಪೂರ್ಣಗೊಂಡಿದ್ದರಿಂದ ರಾಜ್ಯದ ಪಾಲಿನ ನೀರನ್ನು ಬಳಸಲು ಅನುಮತಿ ನೀಡಬೇಕು ಎಂದು ಎಂದು ರಾಜ್ಯದ ಪರ ವಕೀಲರಾದ ಮೋಹನ್ ಕಾತರಕಿ ಹಾಗೂ ಶ್ಯಾಮ್ ದಿವಾನ್ ಕೋರಿದರು.

ರಾಜ್ಯ ವಿಂಗಡಣೆ ಕಾರಣ ಹೊಸದಾಗಿ ನೀರು ಹಂಚಿಕೆ ಮಾಡುವಂತೆ ಕೋರಿ ತೆಲಂಗಾಣ ಹಾಗೂ ಆಂಧ್ರಪ್ರದೇಶ ಸರ್ಕಾರಗಳು ಮೇಲ್ಮನವಿ ಸಲ್ಲಿಸಿವೆ. ನ್ಯಾಯಮಂಡಳಿ ನೀಡಿರುವ ಅಂತಿಮ ಐತೀರ್ಪನ್ನು ಆಧರಿಸಿ ಶೀಘ್ರವೇ ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಬೇಕು ಎಂದು ಕಣಿವೆ ವ್ಯಾಪ್ತಿಯ ರಾಜ್ಯಗಳಾದ ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರಗಳು ಅರ್ಜಿ ಸಲ್ಲಿಸಿದ್ದು, ಅರ್ಜಿಯ ವಿಚಾರಣೆಯನ್ನು ಇದೇ 29ರಿಂದ ಪ್ರಾರಂಭಿಸಲು ಪೀಠ ನಿರ್ಧರಿಸಿತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,916
ಇಂದಿನ ಅಂತ್ಯ	18,068
▲	152
ದಿನದ ಗರಿಷ್ಠ	18,087

ವಿನಿಮಯ ದರ

$ ಡಾಲರ್	74.03
£ ಪೌಂಡ್	99.86
€ ಯುರೊ	85.59
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490

ಖಾದ್ಯ ತೈಲ ಮುಂಬೈ

(10 ಕೆಜಿಗೆ)


ಶೇಂಗಾ (ರಿಫೈಂಡ್)	₹1395 (1410)
ಸೋಯಾ (ರಿಫೈಂಡ್)	₹1255 (1285)
ಸೂರ್ಯಕಾಂತಿ (ರಿಫೈಂಡ್)	₹1310 (1300)
ಪಾಮೋಲಿನ್	₹1190 (1200)

ಎಸ್‌ಬಿಐ ಮುಖ್ಯ ಅರ್ಥಶಾಸ್ತ್ರಜ್ಞ ಸೌಮ್ಯಕಾಂತಿ ಘೋಷ್ ವರದಿ

ವಿತ್ತೀಯ ಸೇರ್ಪಡೆ: ಭಾರತ ಚೀನಾಕ್ಕಿಂತ ಮುಂದು

ಮುಂಬೈ (ಪಿಟಿಐ): ಹಣಕಾಸು ಒಳಗೊಳ್ಳುವಿಕೆಯ ಮಾಪಕಗಳಲ್ಲಿ ಭಾರತವು ಈಗ ಚೀನಾಗಿಂತಲೂ ಮುಂದೆ ಇದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ. 2020ರಲ್ಲಿ ದೇಶದಲ್ಲಿ ಪ್ರತಿ ಸಾವಿರ ವ್ಯಕ್ತಿಗಳಿಗೆ 13,615 ಇಂಟರ್ನೆಟ್ ಬ್ಯಾಂಕಿಂಗ್ ವಹಿವಾಟುಗಳು ನಡೆದಿವೆ.

2015ರಲ್ಲಿ ಪ್ರತಿ ಸಾವಿರ ವ್ಯಕ್ತಿಗಳಿಗೆ 183 ವಹಿವಾಟುಗಳು ನಡೆದಿದ್ದವು. ದೇಶದಲ್ಲಿ 2020ರಲ್ಲಿ ಪ್ರತಿ 1 ಲಕ್ಷ ವಯಸ್ಕರಿಗೆ 14.7ರಷ್ಟು ಬ್ಯಾಂಕ್ ಶಾಖೆಗಳು ಇದ್ದವು. 2015ರಲ್ಲಿ ಇದು 13.6ರಷ್ಟು ಮಾತ್ರ ಇತ್ತು. 2020ರಲ್ಲಿನ ಭಾರತದಲ್ಲಿನ ಬ್ಯಾಂಕ್ ಶಾಖೆಗಳ



ಪ್ರಮಾಣವು ಜರ್ಮನಿ, ಚೀನಾ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಪ್ರತಿ ಸಾವಿರ ಜನರಿಗೆ ಇರುವ ಶಾಖೆಗಳ ಪ್ರಮಾಣಕ್ಕಿಂತ ಜಾಸ್ತಿ ಎಂದು ಎಸ್‌ಬಿಐ ವರದಿ ಹೇಳಿದೆ.

ಹಣಕಾಸಿನ ಒಳಗೊಳ್ಳುವಿಕೆ ಹೆಚ್ಚು ಇರುವ, ಬ್ಯಾಂಕ್ ಖಾತೆಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವ ರಾಜ್ಯಗಳಲ್ಲಿ ಅಪರಾಧ ಪ್ರಮಾಣ ಗಣನೀಯವಾಗಿ ತಗ್ಗಿದೆ, ಮದ್ಯ ಮತ್ತು ತಂಬಾಕು ಸೇವನೆ ಅಲ್ಲಿ ಕಡಿಮೆ ಆಗಿದೆ ಎಂದು ಎಸ್‌ಬಿಐ ಮುಖ್ಯ ಅರ್ಥಶಾಸ್ತ್ರಜ್ಞ ಸೌಮ್ಯಕಾಂತಿ ಘೋಷ್ ಅವರು ಸಿದ್ಧಪಡಿಸಿರುವ ವರದಿಯು ಹೇಳಿದೆ.

ಶೂನ್ಯ ಬ್ಯಾಲೆನ್ಸ್ ಅಥವಾ ಅತ್ಯಂತ ಕಡಿಮೆ ಬ್ಯಾಲೆನ್ಸ್‌ನೊಂದಿಗೆ ಬ್ಯಾಂಕ್ ಖಾತೆ ಆರಂಭಿಸುವ ಯೋಜನೆಗಳ ಅಡಿಯಲ್ಲಿ ಬ್ಯಾಂಕ್ ಖಾತೆ ಹೊಂದಿರುವವರ ಸಂಖ್ಯೆಯು ಹೆಚ್ಚಾಗಿದೆ. ಡಿಜಿಟಲ್ ಪಾವತಿಗಳ ಸಂಖ್ಯೆಯಲ್ಲಿ ಕೂಡ ಗುರುತರ ಬೆಳವಣಿಗೆ ಸಾಧ್ಯವಾಗಿದೆ.

ಆರ್ಥಿಕ ಒಳಗೊಳ್ಳುವಿಕೆಗೆ ಕಳೆದ ಏಳು ವರ್ಷಗಳಿಂದ ನಡೆಸಿದ ಅಭಿಯಾನದಲ್ಲಿ 43.7 ಕೋಟಿ ಶೂನ್ಯ ಬ್ಯಾಲೆನ್ಸ್ ಖಾತೆಗಳನ್ನು ಆರಂಭಿಸಲಾಗಿದೆ. ಈ ಖಾತೆಗಳಲ್ಲಿ ಅಕ್ಟೋಬರ್ 20ರ ವೇಳೆಗೆ ಇದ್ದ ಠೇವಣಿಯ ಒಟ್ಟು ಮೊತ್ತ ₹ 1.46 ಲಕ್ಷ ಕೋಟಿ. ಈ ಪೈಕಿ ಸರಿಸುಮಾರು ಮೂರನೆಯ ಎರಡರಷ್ಟು ಖಾತೆಗಳು ಗ್ರಾಮೀಣ ಹಾಗೂ ಅರೆ ಪಟ್ಟಣ ಪ್ರದೇಶಗಳ ಜನರದ್ದು.

ಮುಖ್ಯಾಂಶಗಳು

- ಹಣಕಾಸಿನ ಒಳಗೊಳ್ಳುವಿಕೆಯಿಂದ ಅಪರಾಧ ಇಳಿಕೆ
- ಭಾರತದಲ್ಲಿನ ಬ್ಯಾಂಕ್ ಶಾಖೆಗಳ ಪ್ರಮಾಣ ಜರ್ಮನಿ, ಚೀನಾಕ್ಕಿಂತ ಹೆಚ್ಚು

ಅಕ್ಟೋಬರ್ ಮಾರಾಟ 12 ಪಟ್ಟು ಹೆಚ್ಚಳ: ಏಥರ್

ನವದೆಹಲಿ (ಪಿಟಿಐ): ಹಬ್ಬದ ಋತುವಿನ ಬೇಡಿಕೆಯ ಕಾರಣದಿಂದಾಗಿ ಅಕ್ಟೋಬರ್‌ನಲ್ಲಿ 3,500 ಸ್ಕೂಟರ್‌ಗಳನ್ನು ಮಾರಾಟ ಮಾಡಲಾಗಿದೆ. ಕಳೆದ ವರ್ಷದ ಅಕ್ಟೋಬರ್‌ಗೆ ಹೋಲಿಸಿದರೆ ಮಾರಾಟವು 12 ಪಟ್ಟು ಹೆಚ್ಚಳ ಆಗಿದೆ ಎಂದು ವಿದ್ಯುತ್ ಚಾಲಿತ ಸ್ಕೂಟರ್ ತಯಾರಿಸುವ ಏಥರ್ ಎನರ್ಜಿ ಕಂಪನಿ ಸೋಮವಾರ ತಿಳಿಸಿದೆ.

450ಎಕ್ಸ್ ಮತ್ತು 450ಪ್ಲಸ್ ಇ-ಸ್ಕೂಟರ್‌ಗಳನ್ನು ಕಂಪನಿಯು ಮಾರಾಟ ಮಾಡುತ್ತಿದೆ.

‘ಕಳೆದಕೆಲವುತಿಂಗಳುಗಳಿಂದಬೇಡಿಕೆಯಲ್ಲಿ ಅತ್ಯಂತ ವೇಗದ ಬೆಳವಣಿಗೆ ಕಂಡುಬರುತ್ತಿದೆ. ಮುಂಬರುವ ದಿನಗಳಲ್ಲಿಯೂ ಇದೇ ರೀತಿಯ ಬೆಳವಣಿಗೆ ಇರಲಿದೆ ಎಂಬ ನಿರೀಕ್ಷೆಯಲ್ಲಿ ಇದ್ದೇವೆ’ ಎಂದು ಕಂಪನಿಯ ಸಹ ಸ್ಥಾಪಕ ತುರಣ್ ಮೆಹ್ತಾ ಹೇಳಿದ್ದಾರೆ.

ಏಥರ್ ಗ್ರಿಡ್: ಕಂಪನಿಯು 19 ನಗರಗಳಲ್ಲಿ ಈಗ ಕಾರ್ಯಾಚರಿಸುತ್ತಿದ್ದು 2022ರ ಮಾರ್ಚ್ ವೇಳೆಗೆ 42 ನಗರಗಳಿಗೆ ವಹಿವಾಟನ್ನು ವಿಸ್ತರಿಸುವ ಯೋಜನೆ ಹೊಂದಿದೆ. ಅಲ್ಲದೆ, ಅತಿ ವೇಗದ ಚಾರ್ಜಿಂಗ್ ಮೂಲಸೌಕರ್ಯ ಒದಗಿಸಲು ಏಥರ್ ಗ್ರಿಡ್ ಎನ್ನುವ ಜಾಲವನ್ನು 22 ನಗರಗಳಲ್ಲಿ ಸ್ಥಾಪಿಸಲಾಗುತ್ತಿದೆ. ಈ ಜಾಲದ ಸೌಲಭ್ಯವನ್ನು ಸಾರ್ವಜನಿಕರು ಪಡೆಯಬಹುದು ಎಂದು ಕಂಪನಿಯು ತಿಳಿಸಿದೆ.

ಸಹಕಾರ ಸಂಘಗಳ ಆಧುನೀಕರಣ: ರಾಜ್ಯಗಳ ಜೊತೆ ಕೇಂದ್ರ ಚರ್ಚೆ

ನವದೆಹಲಿ (ಪಿಟಿಐ): ದೇಶದ 97 ಸಾವಿರ ಪ್ರಾಥಮಿಕ ಕೃಷಿ ಸಹಕಾರ ಸಂಘಗಳನ್ನು (ಪಿಎಸಿ) ಆಧುನೀಕರಣಗೊಳಿಸುವ, ಕಂಪ್ಯೂಟರೀಕರಿಸುವ ಪ್ರಸ್ತಾವದ ಬಗ್ಗೆ ಕೇಂದ್ರ ಸರ್ಕಾರವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳ ಜೊತೆ ಸೋಮವಾರ ಸಭೆ ನಡೆಸಿದೆ.

ದೇಶದಲ್ಲಿ ಅಂದಾಜು 97,961 ಪಿಎಸಿಗಳು ಇವೆ. ಈ ಪೈಕಿ ಸುಸ್ಥಿತಿಯಲ್ಲಿ ಇರುವ ಸಂಘಗಳ ಸಂಖ್ಯೆ ಸರಿಸುಮಾರು 65 ಸಾವಿರ. ಕೇಂದ್ರ ಸಹಕಾರ ಕಾರ್ಯದರ್ಶಿ ಡಿ.ಕೆ. ಸಿಂಗ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೇಂದ್ರದ ಪ್ರಸ್ತಾವದ ಕುರಿತು ಚರ್ಚಿಸಲಾಯಿತು.

26 ರಾಜ್ಯಗಳ ಪ್ರತಿನಿಧಿಗಳು ಹಾಗೂ ಏಳು ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ‘ಕೇಂದ್ರದ ಪ್ರಸ್ತಾವವನ್ನು ಹಲವು ರಾಜ್ಯಗಳು ಸ್ವಾಗತಿಸಿವೆ’ ಎಂದು ಕೇಂದ್ರ ಸಹಕಾರ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರಂಭದಲ್ಲಿ 63 ಸಾವಿರ ಸಹಕಾರ ಸಂಘಗಳಲ್ಲಿ ಕೇಂದ್ರದ ಯೋಜನೆಯನ್ನು ಜಾರಿಗೆ ತರುವ ಉದ್ದೇಶವಿದ್ದು, ಇದಕ್ಕೆ ಅಗತ್ಯವಿರುವ ಬಜೆಟ್ ಎಷ್ಟು ಎಂಬುದನ್ನು ಅರಿಯಲು ಸಭೆಯನ್ನು ಕರೆಯಲಾಗಿತ್ತು. 2022ರಿಂದ ಈ ಯೋಜನೆಯು ಅನುಷ್ಠಾನಕ್ಕೆ ತರುವ ಉದ್ದೇಶವಿದೆ.

ಕಂಪ್ಯೂಟರೀಕರಣದ ಅಗತ್ಯದ ಬಗ್ಗೆ ಸಂಘಗಳ ಸದಸ್ಯರಿಗೆ ಹಾಗೂ ಆಡಳಿತ ಮಂಡಳಿಗಳ ಹಿರಿಯ ಸದಸ್ಯರಿಗೆ ಅರಿವು ಮೂಡಿಸಬೇಕು ಎಂದು ತೆಲಂಗಾಣ ಸರ್ಕಾರ ಹೇಳಿದೆ. ಇದು ಕೇಂದ್ರವು ಆಯೋಜಿಸಿದ್ದ ಎರಡನೆಯ ಸಭೆ. ಮೊದಲ ಸಭೆಯನ್ನು ಉತ್ತರಾಖಂಡ, ಗುಜರಾತ್ ಮತ್ತು ಕರ್ನಾಟಕ ಸರ್ಕಾರಗಳ ಜೊತೆ ಮಾತ್ರ ನಡೆಸಲಾಗಿತ್ತು.

ಮುಂದಿನ ಸಭೆಯನ್ನು ಕೇಂದ್ರವು ನಬಾರ್ಡ್ ಜೊತೆ ನಡೆಸಲಿದೆ. ಇದುವರೆಗೆ ಉತ್ತರಾಖಂಡ, ಪಂಜಾಬ್ ಮತ್ತು ತೆಲಂಗಾಣ ರಾಜ್ಯಗಳು ತಮ್ಮಲ್ಲಿನ ಸಹಕಾರ ಸಂಘಗಳನ್ನು ಪೂರ್ತಿಯಾಗಿ ಕಂಪ್ಯೂಟರೀಕರಿಸಿವೆ. ಕೆಲವು ರಾಜ್ಯಗಳಲ್ಲಿ ಇದು ತುಸು ಮಟ್ಟಿಗೆ ಆಗಿದೆ. ಕೇರಳವು ತನ್ನಲ್ಲಿನ ಸಹಕಾರ ಸಂಘಗಳ ಕಂಪ್ಯೂಟರೀಕರಣಕ್ಕೆ ಟೆಂಡರ್ ಆಹ್ವಾನಿಸಿದೆ.

ಕೇಂದ್ರವು ಪ್ರಾಥಮಿಕ ಕೃಷಿ ಸಹಕಾರ ಸಂಘಗಳನ್ನು ಕಂಪ್ಯೂಟರೀಕರಿಸುವ ಪ್ರಸ್ತಾವವನ್ನು 2017ರಲ್ಲಿ ಸಿದ್ಧಪಡಿಸಿತ್ತು. ಇದಕ್ಕೆ ₹ 1,950 ಕೋಟಿ ಬೇಕಾಗಬಹುದು ಎಂದು ಅಂದಾಜಿಸಿತ್ತು. ಆದರೆ, ಈ ಪ್ರಸ್ತಾವಕ್ಕೆ ಕೇಂದ್ರ ಸಂಪುಟದ ಸಮ್ಮತಿ ಸಿಕ್ಕಿರಲಿಲ್ಲ.

ಶೇ 10ರಷ್ಟು ಬೆಳವಣಿಗೆ ಕಾಣಲಿವೆ ಗೃಹ ಹಣಕಾಸು ಕಂಪನಿಗಳು: ಐಸಿಆರ್‌ಎ

ಮುಂಬೈ (ಪಿಟಿಐ): ಗೃಹ ಹಣಕಾಸು ಕಂಪನಿಗಳು (ಎಚ್‌ಎಫ್‌ಎಸ್) ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇಕಡ 8ರಿಂದ ಶೇ 10ರಷ್ಟು ಬೆಳವಣಿಗೆ ಕಾಣುವ ಸಾಧ್ಯತೆ ಇದೆ ಎಂದು ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಸೋಮವಾರ ಹೇಳಿದೆ.

ಬೇಡಿಕೆ ಹೆಚ್ಚಾಗುತ್ತಿರುವುದು ಮತ್ತು ಆರ್ಥಿಕತೆಯಲ್ಲಿನ ಚೇತರಿಕೆಯಿಂದಾಗಿ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಲಿದೆ ಎಂದು ಅದು ತಿಳಿಸಿದೆ.

ಕೋವಿಡ್‌ನ ಎರಡನೇ ಅಲೆಯಿಂದಾಗಿ ಈ ಕಂಪನಿಗಳ ಸಾಲ ವಿತರಣೆ ಮತ್ತು ಸಂಗ್ರಹದ ಮೇಲೆ ಪರಿಣಾಮ ಉಂಟಾಗಿತ್ತು. ಹೀಗಾಗಿ ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಈ ಕಂಪನಿಗಳು ಶೂನ್ಯ



ಪ್ರಗತಿ ಕಂಡಿದ್ದವು ಎಂದು ಸಂಸ್ಥೆಯು ತನ್ನ ಪ್ರಕಟಣೆಯಲ್ಲಿ ಹೇಳಿದೆ.

ಜೂನ್ ಅಂತ್ಯದ ವೇಳೆಗೆ ಸಾಲ ಸಂಗ್ರಹ ಸಾಮರ್ಥ್ಯ ಚೇತರಿಸಿಕೊಂಡಿದ್ದು, ಎರಡನೇ ತ್ರೈಮಾಸಿಕದಲ್ಲಿ ಇನ್ನಷ್ಟು ಸುಧಾರಣೆ ಕಂಡುಬಂದಿದೆ ಎಂದು ಅದು ತಿಳಿಸಿದೆ.

ಉದ್ಯಮದಲ್ಲಿ ಆರೋಗ್ಯಕರ ಬೆಳವಣಿಗೆ ಕಂಡುಬರುತ್ತಿದೆ. ಆರ್ಥಿಕ ಚಟುವಟಿಕೆಗಳು ಹೆಚ್ಚಾಗುತ್ತಿವೆ. ದೇಶದಲ್ಲಿ ಕೋವಿಡ್ ಲಸಿಕೆ ಪಡೆಯುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಎಲ್ಲ ಕಾರಣಗಳಿಂದಾಗಿ ಸಾಲ ವಿತರಣೆಯಲ್ಲಿ ಪ್ರಗತಿ ಮತ್ತು ಸಾಲ ಸಂಗ್ರಹ ಸಾಮರ್ಥ್ಯದಲ್ಲಿ ಸುಧಾರಣೆ ಕಂಡುಬರುತ್ತಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಮಾರ್ಚ್ 31ರ ವೇಳೆಗೆ ಶೇ 2.9ರಷ್ಟು ಇದ್ದಿದ್ದು ಜೂನ್ 30ರ ವೇಳೆಗೆ ಶೇ 3.6ಕ್ಕೆ ಏರಿಕೆ ಆಗಿದೆ ಎಂದು ವರದಿಯಲ್ಲಿ ತಿಳಿಸಿದೆ.

ವಿಮಾನ ಟಿಕೆಟ್: ಕಂತುಗಳಲ್ಲಿ ಪಾವತಿಗೆ ಸ್ಪೈಸ್‌ಜೆಟ್ ಅವಕಾಶ

ನವದೆಹಲಿ (ಪಿಟಿಐ): ಸ್ಪೈಸ್ ಜೆಟ್ ವಿಮಾನಯಾನ ಕಂಪನಿಯು ವಿಮಾನ ಟಿಕೆಟ್ ದರವನ್ನು ಮೂರು ಅಥವಾ 12 ತಿಂಗಳ ಕಂತುಗಳಲ್ಲಿ ಪಾವತಿಸುವ ಹೊಸ ಯೋಜನೆಗೆ ಸೋಮವಾರ ಚಾಲನೆ ನೀಡಿದೆ.



ಹೊಸ ಯೋಜನೆಯ ಅಡಿಯಲ್ಲಿ, ಗ್ರಾಹಕರು ಹೆಚ್ಚುವರಿ ಶುಲ್ಕ ಅಥವಾ ಬಡ್ಡಿ ಪಾವತಿಯ ಗೊಡವೆ ಇಲ್ಲದೆಯೇ ಟಿಕೆಟ್ ಮೊತ್ತವನ್ನು ಮೂರು ತಿಂಗಳ ಇಎಂಐ ಮೂಲಕ ಪಾವತಿ ಮಾಡಬಹುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಇಎಂಐ ಯೋಜನೆಯನ್ನು ಪಡೆಯಲು ಗ್ರಾಹಕರು ಪ್ಯಾನ್ ಸಂಖ್ಯೆ, ಆಧಾರ್ ಸಂಖ್ಯೆ ಅಥವಾ ವಿಐಡಿ ನೀಡಬೇಕಾಗುತ್ತದೆ. ಅಲ್ಲದೆ ಒಂದು ಬಾರಿ ಬಳಸಬಹುದಾದ ಪಾಸ್‌ವರ್ಡ್ (ಒಟಿಪಿ) ಮೂಲಕ ದೃಢೀಕರಿಸಬೇಕಾಗುತ್ತದೆ.

ಮೊದಲ ಇಎಂಐ ಕಂತನ್ನು ಗ್ರಾಹಕರು ತಮ್ಮ ಯುಪಿಐ ಐಡಿ ನೀಡಿ ಪಾವತಿಸಬೇಕಾಗುತ್ತದೆ. ಗ್ರಾಹಕರ ಯುಪಿಐ ಐಡಿಯಿಂದ ಇಎಂಐ ಮೊತ್ತವನ್ನು ಕಡಿತ ಮಾಡಲಾಗುತ್ತದೆ. ಇಎಂಐ ಯೋಜನೆಯನ್ನು ಪಡೆಯಲು ಗ್ರಾಹಕರು ತಮ್ಮ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಮಾಹಿತಿ ನೀಡುವ ಅಗತ್ಯ ಇಲ್ಲ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಸೆನ್ಸೆಕ್ಸ್ 478 ಅಂಶ ಹೆಚ್ಚಳ

ಮುಂಬೈ (ಪಿಟಿಐ): ಜಾಗತಿಕ ಮಾರುಕಟ್ಟೆಯಲ್ಲಿ ನಕಾರಾತ್ಮಕ ಚಲನೆ ಇದ್ದರೂ ಎಚ್‌ಡಿಎಫ್‌ಸಿ, ಕೋಟಕ್ ಬ್ಯಾಂಕ್ ಮತ್ತು ಇನ್ಫೊಸಿಸ್ ಷೇರುಗಳ ಗಳಿಕೆಯಿಂದಾಗಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ (ಸೆನ್ಸೆಕ್ಸ್) 478 ಅಂಶ ಏರಿಕೆ ಕಂಡು 60,545 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 152 ಅಂಶ ಹೆಚ್ಚಾಗಿ 18,068 ಅಂಶಗಳಿಗೆ ಏರಿಕೆ ಆಯಿತು.

ಮಂದಗತಿಯಲ್ಲಿ ವಹಿವಾಟು ಆರಂಭ ಆದರೂ ಇಂಧನದ ಮೇಲಿನ ತೆರಿಗೆ, ಎಕ್ಸೈಸ್ ಸುಂಕ ಕಡಿತ, ಸೇವಾ ವಲಯದ ಪಿಎಂಐ ಸುಧಾರಣೆ ಹಾಗೂ ಹಬ್ಬದ ಅವಧಿಯ ಮಾರಾಟವು ಗರಿಷ್ಠ ಮಟ್ಟಕ್ಕೆ ತಲುಪಿರುವ ಕಾರಣಗಳಿಂದಾಗಿ ದೇಶಿ ಷೇರುಪೇಟೆ ಸೂಚ್ಯಂಕಗಳು ಆರಂಭದ ನಷ್ಟದಿಂದ ಹೊರಬಂದು ಗಳಿಕೆ ಕಂಡುಕೊಂಡವು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.



ರೂಪಾಯಿ ಮೌಲ್ಯ 43 ಪೈಸೆ ವೃದ್ಧಿ : ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 43 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.03ರಂತೆ ವಿನಿಮಯಗೊಂಡಿತು.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1395 (1410)
ಸೋಯಾ (ರಿಫೈಂಡ್)	₹1255 (1285)
ಸೂರ್ಯಕಾಂತಿ (ರಿಫೈಂಡ್)	₹1310 (1300)
ಪಾಮೋಲಿನ್	₹1190 (1200)

ಮುಂಬೈ ಧಾರಣೆ

ಶೇಂಗಾ

8-11-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9350-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1405 (1420)
ಒಂದು ವಾರದ ಡೆಲಿವರಿ	1400 (1415)
ಸೋಯಾ ಕಚ್ಚಾ	1185 (1220)
ಪಾಮ್ ವಾರದ ಡೆಲಿವರಿ	1188 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1210 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

47,850 (47,300)

ಬೆಳ್ಳಿ ಕೆ.ಜಿ 64,550 (63,000)

ಆವರಣದಲ್ಲಿ ಬುಧವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-51500
ಚಿತ್ರದುರ್ಗ	
ಅಪಿ	45600-46000
ಬೆಟ್ಟೆ	39139-39569
ಕೆಂಪುಗೋಟು	30429-30899
ರಾಶಿ	45119-45559
ಕುಮಟ	
ಚಿಪ್ಪು	25099-39509
ಕೋಕ	20169-34509
ಫ್ಯಾಕ್ಟರಿ	13089-18699
ಹಳೆಚಾಲಿ	44509-46700
ಹೊಸಚಾಲಿ	32809-37291
ಸಿದ್ದಾಪುರ	
ಬಿಳಿಗೋಟು	28699-41808
ಕೋಕ	21099-37859
ಹೊಸಚಾಲಿ	32299-42119
ಕೆಂಪುಗೋಟು	22699-33089
ರಾಶಿ	42899-46499
ತಟ್ಟಿಬೆಟ್ಟೆ	33699-43869
ಶಿರಸಿ	
ಬೆಟ್ಟೆ	30069-43299
ಬಿಳಿಗೋಟು	31990-42099
ಚಾಲಿ	44699-47339
ರಾಶಿ	42699-48609
ಯಲ್ಲಾಪುರ	
ಬಿಳಿಗೋಟು	32122-40711
ಚಾಲಿ	41099-47299
ಕೋಕ	21899-32499
ಕೆಂಪುಗೋಟು	32429-32999
ರಾಶಿ	45801-51669
ತಟ್ಟಿಬೆಟ್ಟೆ	36690-43989
ರಾಮನಗರ ರೇಷ್ಮೆ	
ಮಿಶ್ರತಳಿ	330-495
ದ್ವಿತಳಿ	388-655
ಮುದ್ರೆಮನೆ ಕಾಫಿ (50 ಕೆ.ಜಿಗೆ)	
ಎಪಿ	13100
ಎಸಿ	5790
ಆರ್‌ಪಿ	6075
ಆರ್‌ಸಿ	3535

ಪೇಟಿಎಂ ಐಪಿಒ: ಶೇ 18ರಷ್ಟು ಷೇರುಗಳಿಗೆ ಬಿಡ್

ನವದೆಹಲಿ (ಪಿಟಿಐ): ಪೇಟಿಎಂ ಕಂಪನಿಯ ₹ 18,300 ಕೋಟಿ ಮೊತ್ತದ ಐಪಿಒಗೆ ಮೊದಲ ದಿನದ ಬಿಡ್‌ನಲ್ಲಿ ಶೇಕಡ 18ರಷ್ಟು ಷೇರುಗಳಿಗೆ ಅರ್ಜಿ ಸಲ್ಲಿಕೆ ಆಗಿದೆ. ಸಣ್ಣ ಹೂಡಿಕೆದಾರರಿಗೆ ಮೀಸಲಿಟ್ಟಿರುವ ಷೇರುಗಳಲ್ಲಿ ಶೇ 78ರಷ್ಟಕ್ಕೆ ಅರ್ಜಿ ಸಲ್ಲಿಕೆ ಆಗಿದೆ. ಸಾಂಸ್ಥಿಕೇತರ ಹೂಡಿಕೆದಾರರಿಗೆ ಕಾಯ್ದಿರಿಸಿರುವ ಷೇರುಗಳಲ್ಲಿ ಶೇ 2ರಷ್ಟಕ್ಕೆ ಅರ್ಜಿ ಸಲ್ಲಿಕೆ ಆಗಿದೆ.

ಅಂತರರಾಷ್ಟ್ರೀಯ ವಿಮಾನಯಾನ ನಿರ್ಬಂಧ ಹಿಂಪಡೆದ ಅಮೆರಿಕ

ವಾಷಿಂಗ್ಟನ್ (ಎಪಿ): ಕೋವಿಡ್ ಪರಿಸ್ಥಿತಿಯ ಹಿನ್ನೆಲೆಯಲ್ಲಿ ವಿವಿಧ ದೇಶಗಳಿಗೆ ಅನ್ವಯಿಸಿ ಅಂತರರಾಷ್ಟ್ರೀಯ ವಿಮಾನ ಪ್ರಯಾಣದ ಮೇಲೆ ವಿಧಿಸಿದ್ದ ನಿರ್ಬಂಧವನ್ನು ಅಮೆರಿಕ ಸೋಮವಾರ ಹಿಂಪಡೆದಿದೆ.

ಯೂರೋಪ್‌ನ ವಿವಿಧ ದೇಶಗಳು ಹಾಗೂ ಗಡಿಗೆ ಹೊಂದಿಕೊಂಡ ಮೆಕ್ಸಿಕೊ, ಕೆನಡಾ ಮೇಲಿನ ನಿರ್ಬಂಧ ಸಡಿಲಿಸಲಾಗಿದೆ. ಇದು, ಈ ದೇಶಗಳ ಜನರಿಗೆ ಆಪ್ತರು, ಕುಟುಂಬ ಸದಸ್ಯರ ಭೇಟಿಗೆ ಹಾದಿ ಸುಗಮಗೊಳಿಸಿದೆ.

ಪೂರ್ಣ ಲಸಿಕೆ ಪಡೆದಿರುವ ದಾಖಲೆಯೊಂದಿಗೆ ಅಮೆರಿಕಕ್ಕೆ ಭೇಟಿ ನೀಡಬಹುದಾಗಿದೆ. ಕೋವಿಡ್ ಸೋಂಕು ತೀವ್ರವಾಗಿದ್ದ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಡೋನಾಲ್ಡ್ ಟ್ರಂಪ್ ನೇತೃತ್ವದ ಆಡಳಿತ ನಿರ್ಬಂಧವನ್ನು ಹೇರಿತ್ತು.

ನಿರ್ಬಂಧ ತೆರವು ಹಿಂದೆಯೇ ವಿಮಾನಯಾನ ಸಂಸ್ಥೆಗಳು ಯೂರೋಪ್ ಮತ್ತು ಇತರೆಡೆಯಿಂದ ಹೆಚ್ಚಿನ ಪ್ರಯಾಣಿಕರು ಆಗಮಿಸುವ ನಿರೀಕ್ಷೆ ಗರಿಗೆದರಿದೆ. ಅಂಕಿ ಅಂಶಗಳ ಪ್ರಕಾರ, ಯುರೋಪ್ ಮತ್ತು ಅಮೆರಿಕ ನಡುವಣ ಪ್ರಯಾಣಿಕರ ಪ್ರಮಾಣ ಕಳೆದ ತಿಂಗಳಿಗೆ ಹೋಲಿಸಿದಲ್ಲಿ ಈ ತಿಂಗಳು ಶೇ 21ರಷ್ಟು ಹೆಚ್ಚಾಗಿದೆ.

ಅಲ್ಲದೆ, ಗಡಿಭಾಗದ ಮೆಕ್ಸಿಕೊ ಮತ್ತು ಕೆನಡಾದಿಂದಲೂ ರಸ್ತೆ ಮೂಲಕ ಸಂಚರಿಸಲು ಇದ್ದ ನಿರ್ಬಂಧವನ್ನು ಅಮೆರಿಕ ತೆಗೆದಿದೆ. ಮೆಕ್ಸಿಕೊ ಮೂಲದ ಗ್ರಾಹಕರ ಸಂಖ್ಯೆ ಕುಂಠಿತವಾಗಿದ್ದರಿಂದ ಅಮೆರಿಕದ ಬಹುತೇಕ ಮಾಲ್‌ಗಳು, ರೆಸ್ಟೋರಂಟ್‌ಗಳು ಭಣಗುಡುವ ಸ್ಥಿತಿಯಲ್ಲಿದ್ದವು. ಗಡಿ ಭಾಗದ ಚರ್ಚ್‌ಗಳಲ್ಲೂ ಹಾಜರಾತಿ ಏರುವ ನಿರೀಕ್ಷೆ ಇದೆ.

ತರಬೇತಿಗೆ ಅಮೆರಿಕ ನೌಕಾಪಡೆಯ ಯುದ್ಧ ಹಡಗು ಮಾದರಿ ರೂಪಿಸಿದ ಚೀನಾ

ಬೀಜಿಂಗ್ (ರಾಯಿಟರ್ಸ್): ಅಮೆರಿಕ ನೌಕಾಪಡೆಯ ಯುದ್ಧ ವಿಮಾನಗಳು, ಇತರೆ ಯುದ್ಧ ಹಡಗುಗಳ ಮಾದರಿಗಳನ್ನು ಚೀನಾ ಸೇನೆಯು, ಅಲ್ಲಿನ ಮರುಭೂಮಿ ಕ್ಸಿನ್‌ಜಿಯಾಂಗ್‌ನಲ್ಲಿ ರೂಪಿಸಿದೆ. ತರಬೇತಿ ಗುರಿಯಾಗಿ ಬಳಸುವುದು ಇದರ ಉದ್ದೇಶ ಎನ್ನಲಾಗಿದೆ. ‘ಮಕ್ಸರ್’ ಬಾಹ್ಯಾಕಾಶ ತಂತ್ರಜ್ಞಾನ ಕಂಪನಿಯು ಉಪಗ್ರಹ ಆಧರಿಸಿ ಸೆರೆಹಿಡಿದಿರುವ ಚಿತ್ರಗಳಲ್ಲಿ ಇದು ದೃಢಪಟ್ಟಿದೆ.

ಅಮೆರಿಕದ ನೌಕಾಪಡೆಗೆ ಪ್ರತಿರೋಧ ತೋರುವ ಸಾಮರ್ಥ್ಯ ಹೊಂದುವ ಚೀನಾದ ಯತ್ನ ಈ ಮೂಲಕ ದೃಢಪಟ್ಟಿದೆ. ತೈವಾನ್ ಮತ್ತು ದಕ್ಷಿಣ ಚೀನಾದ ಸಮುದ್ರದ ಭಾಗ ಸಂಬಂಧ ಮೂಡಿರುವ ಆತಂಕದ ಸ್ಥಿತಿ



ಯುದ್ಧ ವಿಮಾನಗಳು, ಇತರೆ ಯುದ್ಧ ಹಡಗುಗಳ ಮಾದರಿಗಳ ಉಪಗ್ರಹ ಮೂಲಕ ಪಡೆಯಲಾದ ಚಿತ್ರ –ಪಿಟಿಐ

ಹೆಚ್ಚುತ್ತಿರುವಂತೆಯೇ ಈ ಬೆಳವಣಿಗೆ ನಡೆದಿದೆ.

ಅಮೆರಿಕ ನೌಕಾಪಡೆಯ ಯುದ್ಧ ವಿಮಾನಗಳ ಪೂರ್ಣ ಮಾದರಿ, ಅರ್‌ಲೀಗ್ ಬರ್ಕ್ ಮಾರ್ಗದರ್ಶಿ ಕ್ಷಿಪಣಿ ಧ್ವಂಸಕದ ಎರಡು ಮಾದರಿಗಳು, 6 ಮೀಟರ್ ಉದ್ದದ ರೈಲು ವ್ಯವಸ್ಥೆ, ಅದರ ಮೇಲೆ ಹಡಗು ಗಾತ್ರದ ನಿರ್ದಿಷ್ಟ ಗುರಿ ಇರುವಂತೆ ಮಾದರಿಯನ್ನು ರೂಪಿಸಲಾಗಿದೆ. ಈ ಸಂಕೀರ್ಣವನ್ನು ಭೂಮಿಯಿಂದ ಭೂಮಿಗೆ ಉಡಾವಣೆ ಮಾಡಬಹುದಾದ ಕ್ಷಿಪಣಿಗಳ ಪ್ರಯೋಗಕ್ಕೆ ಬಳಸಲಾಗುತ್ತಿದೆ ಎಂದು ಜಿಯೊಸ್ಪೆಷಿಯಲ್ ಇಂಟೆಲಿಜೆನ್ಸ್ ಕಂಪನಿಯ ಮೂಲಗಳನ್ನು ಆಧರಿಸಿ ಅಮೆರಿಕದ ನೌಕಾಸಂಸ್ಥೆಯು ತಿಳಿಸಿದೆ.

ಚೀನಾದ ಹಡಗು ನಿರೋಧಕ ಕ್ಷಿಪಣಿ ಕಾರ್ಯಕ್ರಮದ ಉಸ್ತುವಾರಿಯನ್ನು ಅಲ್ಲಿನ ಪೀಪಲ್ಸ್ ಲಿಬರೇಷನ್ ಆರ್ಮಿ ರಾಕೆಟ್ ಫೋರ್ಸ್ (ಪಿಎಲ್‌ಎಆರ್‌ಎಫ್) ಹೊಂದಿದೆ. ಚೀನಾದ ರಕ್ಷಣಾ ಸಚಿವಾಲಯ ಈ ಕುರಿತು ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸಂಕ್ಷಿಪ್ತ ಸುದ್ದಿ

ನ್ಯೂಜಿಲೆಂಡ್: ತಿಂಗಳಾಂತ್ಯದಲ್ಲಿ ಲಾಕ್‌ಡೌನ್ ತೆರವು

ವೆಲ್ಲಿಂಗ್ಟನ್ (ಎಪಿ): ಕೋವಿಡ್ ನಿಯಂತ್ರಣಕ್ಕಾಗಿ ಮೂರು ತಿಂಗಳಿನಿಂದ ನ್ಯೂಜಿಲೆಂಡ್‌ನ ಆಕ್ಲಾಂಡ್ ನಗರದಲ್ಲಿ ವಿಧಿಸಿದ್ದ ಲಾಕ್‌ಡೌನ್ ನಿರ್ಬಂಧಗಳನ್ನು ಈ ತಿಂಗಳಾಂತ್ಯಕ್ಕೆ ಅಂತ್ಯಗೊಳಿಸುವ ಸಾಧ್ಯತೆ ಇದ್ದು, ಇದಕ್ಕೆ ಪೂರ್ವಭಾವಿಯಾಗಿ ಮಂಗಳವಾರದಿಂದ ನಗರದಲ್ಲಿ ಕೆಲವೊಂದು ನಿರ್ಬಂಧಗಳನ್ನು ಸಡಿಲಿಸಲಾಗುತ್ತಿದೆ ಎಂದು ಪ್ರಧಾನಿ ಜಸಿಂದಾ ಅರ್ಡೆರ್ನ್ ತಿಳಿಸಿದ್ದಾರೆ.

ಆಕ್ಲಾಂಡ್ ನಗರದಲ್ಲಿ ಕಳೆದ ವಾರದವರೆಗೂ ನಿತ್ಯ 150 ಹೊಸ ಕೋವಿಡ್–19ರ ಡೆಲ್ಟಾ ರೂಪಾಂತರ ಸೋಂಕಿನ ಪ್ರಕರಣಗಳು ವರದಿಯಾಗಿದ್ದವು. ಒಟ್ಟು ಸೋಂಕಿನ ಸಂಖ್ಯೆ 4500ಕ್ಕೆ ಏರಿತ್ತು. ‘ಲಸಿಕೆ ನೀಡಿಕೆ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಲಾಕ್‌ಡೌನ್ ನಿರ್ಬಂಧಗಳನ್ನು ತೆರವುಗೊಳಿಸಲು ಸಿದ್ಧತೆ ನಡೆಸಿದ್ದೇವೆ’ ಎಂದು ತಿಳಿಸಿದ್ದಾರೆ.

ಜಪಾನ್‌ನಲ್ಲಿ ಕೋವಿಡ್ ಸುಧಾರಣೆ

ಟೋಕಿಯೊ (ಎಪಿ): ಜಪಾನ್‌ನಲ್ಲಿ 15 ತಿಂಗಳಲ್ಲಿ ಮೊದಲ ಬಾರಿಗೆ ಕೋವಿಡ್‌ನಿಂದ ದೈನಂದಿನ ಸಾವು ವರದಿಯಾಗಿಲ್ಲ.

ಜಪಾನ್‌ನಲ್ಲಿ ಕೊರೊನಾ ಸೋಂಕು ತೀವ್ರಗತಿಯಲ್ಲಿ ಕುಸಿತಗೊಂಡಿದೆ. ‘ಭಾನುವಾರ ಯಾವುದೇ ಸಾವು ಸಂಭವಿಸಿಲ್ಲ’ ಎಂದು ಆರೋಗ್ಯ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಜಪಾನ್‌ನಲ್ಲಿ ಸಾಂಕ್ರಾಮಿಕ ರೋಗದಿಂದಾಗಿ ಇದುವರೆಗೆ ಇಟ್ಟು 18,310 ಸಾವುಗಳು ವರದಿಯಾಗಿವೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಜರ್ಮನಿ: ಕೋವಿಡ್ ಪ್ರಕರಣ ಹೆಚ್ಚಳ

ಬರ್ಲಿನ್ (ಎಪಿ): ಜರ್ಮನಿಯಲ್ಲಿ ಕೊರೊನಾ ವೈರಸ್ ಸೋಂಕಿನ ಪ್ರಮಾಣವು ಸೋಮವಾರ ದಾಖಲೆಯ ಮಟ್ಟಕ್ಕೆ ಏರಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ದೇಶದಲ್ಲಿ ಲಸಿಕಾ ಅಭಿಯಾನವು ನಿಧಾನಗತಿಯಲ್ಲಿದ್ದು, ಸಾಂಕ್ರಾಮಿಕ ರೋಗ ಉಲ್ಬಣಕ್ಕೆ ಕಾರಣವಾಗಿದೆ. ಕಳೆದ ಏಳು ದಿನಗಳಲ್ಲಿ ಅವಧಿಯಲ್ಲಿ ಸೋಂಕಿನ ಪ್ರಮಾಣವು ದಾಖಲೆಯ ಮಟ್ಟದಲ್ಲಿ ಏರಿಕೆಯಾಗಿದೆ’ ಎಂದು ರಾಷ್ಟ್ರೀಯ ರೋಗನಿಯಂತ್ರಣ ಕೇಂದ್ರವು ತಿಳಿಸಿದೆ.

ವಾಲಿಬಾಲ್: ಫೀನಿಕ್ಸ್ ಬ್ಲಾಸ್ಟರ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನಾಗಸಂದ್ರದ ವಿನಾಯಕನಗರ-ವಿಕಾಸನಗರದಲ್ಲಿ ನಡೆದ ಹೊನಲು ಬೆಳಕಿನ ವಾಲಿಬಾಲ್ ಟೂರ್ನಿಯಲ್ಲಿ ಫೀನಿಕ್ಸ್ ಬ್ಲಾಸ್ಟರ್ಸ್ ತಂಡವು ಪ್ರಶಸ್ತಿ ಗೆದ್ದಿತು.

ಫೈನಲ್ ಪಂದ್ಯದಲ್ಲಿ ಫೀನಿಕ್ಸ್ ಬ್ಲಾಸ್ಟರ್ಸ್ 15–12ರಿಂದ ವಿಜಯ್ ವಾರಿಯರ್ಸ್ ತಂಡವನ್ನು ಮಣಿಸಿತು. ವಿ.ಕೆ. ಸ್ಟಾರ್ಸ್ ತಂಡವು ಮೂರನೇ ಸ್ಥಾನ ಪಡೆಯಿತು.

ಟೂರ್ನಿಯ ಉದ್ಘಾಟನೆಯನ್ನು ದಾಸರಹಳ್ಳಿ ಶಾಸಕ ಆರ್. ಮಂಜುನಾಥ್ ನೆರವೇರಿಸಿದರು. ಬಿಬಿಎಂಪಿ ಮಾಜಿ ಸದಸ್ಯ ಈಶ್ವರರಾವ್ ಧ್ವಜಾರೋಹಣ ನೆರವೇರಿಸಿದರು. ವಿಜೇತ ತಂಡಗಳಿಗೆ ಮಾಜಿ ಶಾಸಕ ಮುನಿರಾಜು, ಟೂರ್ನಿಯ ಆಯೋಜಕರಾದ ಸುನೀಲ್ ಪ್ರೇಮ್‌ಕುಮಾರ್, ಗೋವಿಂದರಾವ್ ಅವರು ಬಹುಮಾನಗಳನ್ನು ವಿತರಿಸಿದರು.



ವಾಲಿಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ತಂಡ: (ಎಡದಿಂದ) ಗೆಳೆಯ, ರಘು, ರುಕ್ಸಾನ್, ಸುನೀಲ್, ಅಕ್ಷಯ್, ಹರೀಶ್, ದಶವಂತ್, ನಿಖಿಲ್, ಮಹೇಶ್

ಡಿವೈಇಎಸ್, ಬೀಗಲ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿವೈಇಎಸ್ ಬೆಂಗಳೂರು ಮತ್ತು ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡಗಳು ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಯೋಜಿಸಿದ್ದ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದುಕೊಂಡವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ 18 ವರ್ಷದೊಳಗಿನವರ ಟೂರ್ನಿಯ ಬಾಲಕರ ವಿಭಾಗದ ಅಂತಿಮ ಲೀಗ್ ಪಂದ್ಯದಲ್ಲಿ ಡಿವೈಇಎಸ್ 31–19ರಲ್ಲಿ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಮಣಿಸಿತು. ಸೇತು 10 ಮತ್ತು ಮನೋಜ್ 5 ಪಾಯಿಂಟ್‌ಗಳನ್ನು ಗಳಿಸಿ ಡಿವೈಇಎಸ್ ಪರ ಮಿಂಚಿದರು. ಬೀಗಲ್ಸ್‌ಗಾಗಿ ಅಚಿಂತ್ಯ 7 ಮತ್ತು ಅಭಿಜಿತ್ 5 ಪಾಯಿಂಟ್ ಕಲೆ ಹಾಕಿದರು.

ಬಾಲಕಿಯರ ವಿಭಾಗದ ಫೈನಲ್ ಲೀಗ್ ಪಂದ್ಯದಲ್ಲಿ ಸಂಜನಾ (43 ಪಾಯಿಂಟ್ಸ್) ಅವರ ಅಮೋಘ ಆಟದ ನೆರವಿನಿಂದ ಬೀಗಲ್ಸ್ 81–63ರಲ್ಲಿ ಮೌಂಟ್ಸ್ ಬ್ಯಾಸ್ಕೆಟ್‌ಬಾಲ್ ತಂಡವನ್ನು ಮಣಿಸಿತು. ಬೀಗಲ್ಸ್ ಪರ ತ್ರಿಶಾ 16 ಪಾಯಿಂಟ್ ಗಳಿಸಿದರೆ ಮೌಂಟ್ಸ್ ತಂಡದ ಪಾವನಿ 29 ಮತ್ತು ನಕ್ಷತ್ರ 17 ಪಾಯಿಂಟ್ ಕಲೆ ಹಾಕಿದರು.

ಬಾಲಕರ ವಿಭಾಗದಲ್ಲಿ ಮಂಗಳೂರು ಬಿ.ಸಿ, ಬೀಗಲ್ಸ್ ಬಿ.ಸಿ ಮತ್ತು ಬಿ.ಸಿ.ಬಿ.ಸಿ ತಂಡಗಳು ತಂಡಗಳು ಕ್ರಮವಾಗಿ ಎರಡು, ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದವು.

ಚೆಸ್: ದ್ರೋಣವಲ್ಲಿಗೆ ಐದನೇ ಸ್ಥಾನ

ರಿಗಾ, ಲಾಟ್ವಿಯಾ (ಪಿಟಿಐ): ಭಾರತದ ಹಾರಿಕಾ ದ್ರೋಣವಲ್ಲಿ ಅವರು ಭಾನುವಾರ ರಾತ್ರಿ ಮುಕ್ತಾಯಗೊಂಡ ಮಹಿಳೆಯರ ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯಲ್ಲಿ ಐದನೇ ಸ್ಥಾನ ಗಳಿಸಿದರು.

ಕೊನೆಯ ಹಾಗೂ 11ನೇ ಸುತ್ತಿನ ಹಣಾಹಣಿಯಲ್ಲಿ ಹಾರಿಕಾ ಅವರು ಉಕ್ರೇನ್‌ನ ಮರಿಯಾ ಮುಜಿಚುಕ್ ಅವರ ಜೊತೆ ಡ್ರಾ ಮಾಡಿಕೊಂಡರು. ಐದನೇ ಸ್ಥಾನ ಗಳಿಸುವುದರೊಂದಿಗೆ ಅವರು ಮಹಿಳೆಯರ ಗ್ರ್ಯಾನ್‌ಪ್ರಿ ಸೈಕಲ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ಗಳಿಸಿದರು.

ಹಾರಿಕಾ ಅವರು ಟೂರ್ನಿಗೆ ಬರುವಾಗ ನಾಲ್ಕನೇ ಶ್ರೇಯಾಂಕ ಹೊಂದಿದ್ದರು. ಉತ್ತಮ ಸಾಮರ್ಥ್ಯ ತೋರಿ ಒಂಬತ್ತನೇ ಸುತ್ತಿನ ಅಂತ್ಯಕ್ಕೆ ಎರಡನೇ ಸ್ಥಾನವನ್ನು ಹಂಚಿಕೊಂಡಿದ್ದರು. ಮುಜಿಚುಕ್ ಎದುರಿನ ಪಂದ್ಯದ 31ನೇ ನಡೆಯ ನಂತರ ಡ್ರಾ ಮಾಡಿಕೊಳ್ಳಲು ನಿರ್ಧರಿಸಿದರು. ಈ ಮೂಲಕ ಅವರು ಟೂರ್ನಿಯಲ್ಲಿ ಅಜೇಯರಾಗಿ ಉಳಿದರು.

ಈಚೆಗೆ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಆದ 19 ವರ್ಷದ ಅವಂತಿಕಾ ಅಗರವಾಲ್ 6.5 ಪಾಯಿಂಟ್‌ಗಳೊಂದಿಗೆ 14ನೇ ಸ್ಥಾನ ಗಳಿಸಿದರು. ಏಕೈಕ ಪಂದ್ಯ ಸೋತಿದ್ದ ಅವರು ಮೂರರಲ್ಲಿ ಜಯ ಗಳಿಸಿದ್ದು ಏಳು ಪಂದ್ಯಗಳನ್ನು ಡ್ರಾ ಮಾಡಿಕೊಂಡಿದ್ದರು.

ಮುಕ್ತ ವಿಭಾಗದಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ನಿಹಾಲ್ ಸರೀನ್ 6.5 ಪಾಯಿಂಟ್‌ಗಳೊಂದಿಗೆ 18ನೇ ಸ್ಥಾನ ಗಳಿಸಿದರು. ಪಿ.ಹರಿಕೃಷ್ಣ ಮತ್ತು ಶಶಿಕಿರಣ್ ಕ್ರಮವಾಗಿ 30 ಮತ್ತು 31ನೇ ಸ್ಥಾನ ಗಳಿಸಿದರು. ಸರೀನ್ ಟೂರ್ನಿಯಲ್ಲಿ ಅಜೇಯರಾಗಿ ಉಳಿದಿದ್ದಾರೆ.

ಗ್ರ್ಯಾಂಡ್ ಮಾಸ್ಟರ್ ರೌನಕ್ ಸಾಧ್ವಾನಿ 5.5 ಪಾಯಿಂಟ್‌ಗಳೊಂದಿಗೆ 57ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು.



ಹಾರಿಕಾ ದ್ರೋಣವಲ್ಲಿ –ಟ್ವಿಟರ್ ಚಿತ್ರ

ಭಾರತದ ಚೆಸ್ ಪಟುಗಳ ಸಾಧನೆ (ಮಹಿಳಾ ವಿಭಾಗ)

ಆಟಗಾರ್ತಿ	ಸ್ಥಾನ	ಪಾಯಿಂಟ್ಸ್
ಹಾರಿಕಾ	5	7
ವಂತಿಕಾ	14	6.5
ಆರ್.ವೈಶಾಲಿ	29	5.5
ಪದ್ಮಿನಿ ರಾವತ್	44	4
ದಿವ್ಯಾ	46	4
ಮುಕ್ತ ವಿಭಾಗ		
ನಿಹಾಲ್ ಸರೀನ್	18	6.5
ಪಿ.ಹರಿಕೃಷ್ಣ	30	6.5
ಕೆ.ಶಶಿಕಿರಣ್	31	6
ರೌನಕ್ ಸಾಧ್ವಾನಿ	57	5.5
ಅರ್ಜುನ್	58	5.5
ಆರ್.ಪ್ರಗ್ನಾನಂದ	75	5
ಡಿ.ಗುಕೇಶ್	75	5
ಸೇತುರಾಮನ್	83	4.5
ಸೂರ್ಯಶೇಖರ್	88	4.5
ಬಿ.ಅಧಿಬನ್	90	4.5

ಫುಟ್‌ಬಾಲ್: ಬೆಂಗಳೂರು ಡ್ರೀಮ್ ಯುನೈಟೆಡ್‌ಗೆ ಜಯ

ಬೆಂಗಳೂರು: ಶರೂನ್ ಎನ್.ಎಸ್. ಹಾಗೂ ನಿಮಾ ಲೆಪ್ಚಾ ಗಳಿಸಿದ ಗೋಲುಗಳ ನೆರವಿನಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ಬಿಎಫ್‌ಎಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸೋಮವಾರ 2–1ರಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಶರೂನ್ 35ನೇ ನಿಮಿಷ ಹಾಗೂ ಹಾಗೂ ನಿಮಾ 90ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು. ಯಂಗ್ ಚಾಲೆಂಜರ್ಸ್ ಪರ ಮುರಳಿ ಜೋಸೆಫ್ (88ನೇ ನಿಮಿಷ) ಗೋಲು ದಾಖಲಿಸಿದರು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಡೆಕ್ಕನ್ ತಂಡವು 1–1ರಿಂದ ಕೊಡಗು ಎಫ್‌ಸಿಯೊಡನೆ ಡ್ರಾ ಸಾಧಿಸಿತು. ಡೆಕ್ಕನ್ ತಂಡದ ಮುಹಮ್ಮದ್ ಅಜ್ಮಲ್ ಕೆ.ಟಿ. (35ನೇ ನಿಮಿಷ) ಹಾಗೂ ಕೊಡಗು ತಂಡದ ಪರ ಶರತ್ ರಾಜ್‌ಕುಮಾರ್ (21ನೇ ನಿ.) ಗೋಲು ಹೊಡೆದರು.

ಟಿಟಿ: ಯಶಸ್ವಿನಿಗೆ ಎರಡು ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಅವರು ಹಂಗರಿಯ ಸೊಂಬತ್ತಿಯಲ್ಲಿ ನಡೆದ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಎರಡು ಪದಕಗಳನ್ನು ಗೆದ್ದುಕೊಂಡರು. 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಬೆಳ್ಳಿ ಪದಕ ಮತ್ತು 19 ವರ್ಷದೊಳಗಿನವರ ವಿಭಾಗದಲ್ಲಿ ಕಂಚಿನ ಪದಕ ಅವರ ಪಾಲಾಯಿತು.



ಯಶಸ್ವಿನಿ

17 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ ಯಶಸ್ವಿನಿ ಸಿಂಗಪುರದ ಜಿಂಗಿ ಜೋ ಎದುರು 7-11, 11-8, 10-12, 9-11ರಲ್ಲಿ ಸೋತರು. ಕ್ವಾರ್ಟರ್ ಫೈನಲ್‌ನಲ್ಲಿ ಸ್ಪೇನ್‌ನ ಫಿಯೊನಾ ವಿರುದ್ಧ 11-8, 11-3, 11-6 ರಲ್ಲಿ ಜಯ ಗಳಿಸಿದ್ದ ಅವರು ಸೆಮಿಫೈನಲ್‌ನಲ್ಲಿ ಸಿಂಗಪುರದ ಕ್ಯಾನ್ ಸೆರ್ ಎದುರು 11-8, 11-3, 11-7 ಗೆದ್ದಿದ್ದರು.

ಸಂಕಲ್ಪ್ ಗುಪ್ತಾ ಭಾರತದ ಗ್ರ್ಯಾಂಡ್‌ಮಾಸ್ಟರ್

ಚೆನ್ನೈ (ಪಿಟಿಐ): ಮಹಾರಾಷ್ಟ್ರದ ನಾಗ್ಪುರದ ಸಂಕಲ್ಪ್ ಗುಪ್ತಾ ಅವರು ಭಾರತದ 71ನೇ ಗ್ರ್ಯಾಂಡ್‌ಮಾಸ್ಟರ್ ಆಗಿದ್ದಾರೆ. ಸರ್ಬಿಯಾದ ಅರಂಜೆಲೊವಾಕ್‌ನಲ್ಲಿ ನಡೆದ ಜಿಎಂ ಆಸ್ಕ್ 3 ರೌಂಡ್ ರಾಬಿನ್ ಟೂರ್ನಿಯಲ್ಲಿ ಎರಡನೇ ಸ್ಥಾನ ಗಳಿಸುವುದರೊಂದಿಗೆ ಅವರು ಮೂರನೇ ಗ್ರ್ಯಾಂಡ್‌ಮಾಸ್ಟರ್ ನಾರ್ಮ್ ಸಂಪಾದಿಸಿಕೊಂಡರು. ಟೂರ್ನಿಯಲ್ಲಿ 6.5 ಪಾಯಿಂಟ್ ಕಲೆ ಹಾಕಿದ್ದರು.

18 ವರ್ಷದ ಸಂಕಲ್ಪ್ 24 ದಿನಗಳಲ್ಲಿ ಮೂರು ಟೂರ್ನಿಗಳಲ್ಲಿ ಸತತ ಆಡುವ ಮೂಲಕ ಜಿಎಂ ನಾರ್ಮ್ ಗಳಿಸಿಕೊಂಡರು. ಈ ಮೂರು ಟೂರ್ನಿಗಳಲ್ಲಿ ಅವರ ರೇಟಿಂಗ್ ಸಾಧನೆ 2599 ಆಗಿತ್ತು.

ಸರ್ಬಿಯಾ ಟೂರ್ನಿಯಲ್ಲಿ ಅವರು 2500 ಎಲೊ ರೇಟಿಂಗ್ ಕೂಡ ಸಂಪಾದಿಸಿಕೊಂಡರು. ಇದು, ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೇರುವ ಅವರ ಹಾದಿಯನ್ನು ಸುಗಮಗೊಳಿಸಿತು.

ಐದು ಪಂದ್ಯಗಳಲ್ಲಿ ಜಯ ಗಳಿಸಿರುವ ಅವರು ಮೂರರಲ್ಲಿ ಡ್ರಾ ಸಾಧಿಸಿದ್ದಾರೆ. ರಷ್ಯಾದ ರೂಡಿಕ್ ಮಕ್ರೇರಿಯನ್ ಎದುರಿನ ಪಂದ್ಯದಲ್ಲಿ ಮಾತ್ರ ಸೋತಿದ್ದರು. ಒಟ್ಟು 6.5 ಪಾಯಿಂಟ್ ಗಳಿಸಿದ್ದರು. ರೂಡಿಕ್ ಕೂಡ 6.5 ಪಾಯಿಂಟ್ ಸಂಪಾದಿಸಿದ್ದರು. ಆದರೆ ಉತ್ತಮ ಟೈ ಬ್ರೇಕರ್ ಆಧಾರದಲ್ಲಿ ಅಗ್ರ ಸ್ಥಾನಕ್ಕೇರಿದರು. ಐಎಂ ಎಸ್.ನಿತಿನ್ 5.5 ಪಾಯಿಂಟ್‌ಗಳೊಂದಿಗೆ ನಾಲ್ಕನೇ ಸ್ಥಾನ ಗಳಿಸಿದರು.

ಆನಂದ್ ಅಭಿನಂದನೆ: ಗ್ರ್ಯಾಂಡ್ ಮಾಸ್ಟರ್ ಪಟ್ಟಕ್ಕೇರಿರುವ ಸಂಕಲ್ಪ್ ಗುಪ್ತಾ ಅವರನ್ನು ಮಾಜಿ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಅಭಿನಂದಿಸಿ ಟ್ವೀಟ್ ಮಾಡಿದ್ದಾರೆ.



ಸಂಕಲ್ಪ್ ಗುಪ್ತಾ –ಟ್ವಿಟರ್ ಚಿತ್ರ

ರಾಹುಲ್ ಅರ್ಧಶತಕ, ಜಡೇಜ ಸ್ಪಿನ್ ಮೋಡಿ; ನಮಿಬಿಯಾ ಎದುರು ಭಾರತ ಜಯಭೇರಿ

ಮಿಂಚಿದ ಅಶ್ವಿನ್, ರೋಹಿತ್

ದುಬೈ (ಪಿಟಿಐ): ಆರಂಭಿಕ ಆಟಗಾರ ರೋಹಿತ್ ಶರ್ಮಾ ಭರ್ಜರಿ ಬ್ಯಾಟಿಂಗ್ ಹಾಗೂ ಅನುಭವಿ ರವಿಚಂದ್ರನ್ ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರ ಸ್ಪಿನ್ ಮೋಡಿಯಿಂದಾಗಿ ಭಾರತ ತಂಡವು ಭರ್ಜರಿ ಜಯ ಸಾಧಿಸಿತು.

ಸೋಮವಾರ ನಮಿಬಿಯಾ ಎದುರು ನಡೆದ ಟಿ20 ವಿಶ್ವಕಪ್ ಸೂಪರ್ 12 ಹಂತದ ಕೊನೆಯ ಪಂದ್ಯದಲ್ಲಿ ಒಂಬತ್ತು ವಿಕೆಟ್‌ಗಳಿಂದ ಗೆದ್ದಿತು.

ರೋಹಿತ್ ಶರ್ಮಾ (56, 37ಎ, 7 ಬೌಂಡರಿ, 2 ಸಿಕ್ಸರ್) ಹಾಗೂ ಕೆ.ಎಲ್. ರಾಹುಲ್ (ಔಟಾಗದೆ 54, 36 ಎ, 4 ಬೌಂಡರಿ, 2 ಸಿಕ್ಸರ್) ಮೊದಲ ವಿಕೆಟ್‌ಗೆ 86 ರನ್ ಸೇರಿಸಿ ಜಯ ಸುಲಭಗೊಳಿಸಿದರು.

ಸೂರ್ಯಕುಮಾರ್ ಯಾದವ್ ಕೂಡ (ಔಟಾಗದೆ 25) ಉತ್ತಮ ಬ್ಯಾಟಿಂಗ್ ಸಾಮರ್ಥ್ಯ ತೋರಿದರು.

ಟಾಸ್ ಗೆದ್ದ ವಿರಾಟ್ ಕೊಹ್ಲಿ ಪಡೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಅಶ್ವಿನ್ (20ಕ್ಕೆ 3) ಹಾಗೂ ಜಡೇಜ (16ಕ್ಕೆ 3) ನಮಿಬಿಯಾ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು. ನಮಿಬಿಯಾ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 132 ರನ್ ಗಳಿಸಿತು.

ವಿರಾಟ್ ಕೊಹ್ಲಿ ಬಳಗವು 16ನೇ ಓವರ್‌ನಲ್ಲಿ ಒಂದು ವಿಕೆಟ್ ಕಳೆದುಕೊಂಡು 136 ರನ್ ಗಳಿಸಿತು.

ನಮಿಬಿಯಾಗೆ ಉತ್ತಮ ಆರಂಭ: ನಮಿಬಿಯಾದ ಸ್ಟೀಫನ್ ಬಾರ್ಡ್ (21) ಮತ್ತು ಮೈಕೆಲ್ ವ್ಯಾನ್ ಲಿಂಗನ್ (14 ರನ್) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್‌ಗೆ 33 ರನ್ ಸೇರಿಸಿದರು. ವೇಗಿ ಜಸ್‌ಪ್ರೀತ್ ಬೂಮ್ರಾ ಐದನೇ ಓವರ್‌ನಲ್ಲಿ ಮೈಕೆಲ್ ವಿಕೆಟ್ ಗಳಿಸಿ, ಜೊತೆಯಾಟ ಮುರಿದರು. ಇದರೊಂದಿಗೆ ನಮಿಬಿಯಾದ ವಿಕೆಟ್ ಪತನ ಆರಂಭವಾಯಿತು.

ಜಡೇಜ ಮತ್ತು ಅಶ್ವಿನ್ ಅವರ ದಾಳಿಗೆ ನಮಿಬಿಯಾ ತಂಡವು 72 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು. ಆದರೆ, ಕೊನೆಯ ಹಂತದಲ್ಲಿ ಡೇವಿಡ್ ವೀಸ್ (26; 25ಎಸೆತ, 2 ಬೌಂಡರಿ), ಜಾನ್ ಫ್ರೈಲಿಂಗ್ (ಔಟಾಗದೆ 15; 15ಎ) ಮತ್ತು ರುಬೆನ್ ಟ್ರಂಪಲ್‌ಮನ್ (ಔಟಾಗದೆ 13; 6ಎಸೆತ, 1ಬೌಂಡರಿ, 1ಸಿಕ್ಸರ್) ಅವರ ಬ್ಯಾಟಿಂಗ್‌ನಿಂದಾಗಿ ನೂರರ ಗಡಿ ದಾಟಿತು.

ಭಾರತದ ಬೌಲರ್‌ಗಳನ್ನು ಇವರು ದಿಟ್ಟತನದಿಂದ ಎದುರಿಸಿದರು. ಫ್ರೈಲಿಂಕ್ ಎಚ್ಚರಿಕೆಯಿಂದ ಆಡಿದರು. ಒಂದೂ ಬೌಂಡರಿ ಅಥವಾ ಸಿಕ್ಸರ್ ಗಳಿಸಲಿಲ್ಲ. 15ರನ್‌ಗಳ ಕಾಣಿಕೆ ನೀಡಿದರು. ಆದರೆ ಟ್ರಂಪಲ್‌ಮ್ಯಾನ್ ಒಂದು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದು ಗಮನ ಸೆಳೆದರು.

ಎರಡನೇ ಗುಂಪಿನಲ್ಲಿ ಇದು ಕೊನೆಯ ಪಂದ್ಯವಾಗಿತ್ತು. ಉಭಯ ತಂಡಗಳು ಈಗಾಗಲೇ ಸೆಮಿಫೈನಲ್ ಹಾದಿಯಿಂದ ಹೊರಬಿದ್ದಿವೆ. ಭಾರತದ ಮೊಹಮ್ಮದ್ ಶಮಿ ಒಂದೂ ವಿಕೆಟ್ ಗಳಿಸಲಿಲ್ಲ.

ಸ್ಕೋರ್ ಕಾರ್ಡ್

ನಮೀಬಿಯಾ 8ಕ್ಕೆ 132 (20 ಓವರ್)
ಸ್ಟೀಫನ್ ಎಲ್‌ಬಿಡಬ್ಲ್ಯು ಜಡೇಜ 21 (21 ಎ, 4x1, 6x1), ಲಿಂಗೆನ್ ಸಿ ಶಮಿ ಬಿ ಬೂಮ್ರಾ 14 (15 ಎ, 4x2), ವಿಲಿಯಮ್ಸ್ ಸ್ಟಂಪ್ಡ್ ಪಂತ್ ಬಿ ಜಡೇಜ 0 (4 ಎ), ಎರಾಸ್ಮಸ್ ಸಿ ಪಂತ್ ಬಿ ಅಶ್ವಿನ್ 12 (20 ಎ, 4x1), ಈಟನ್ ಸಿ ಶರ್ಮಾ ಬಿ ಅಶ್ವಿನ್ 5 (5 ಎ), ವೀಸ್ ಸಿ ಶರ್ಮಾ ಬಿ ಬೂಮ್ರಾ 26 (25 ಎ, 4x2), ಸ್ಮಿತ್ ಸಿ ಶರ್ಮಾ ಬಿ ಜಡೇಜ 9 (9 ಎ, 4x1), ಗ್ರೀನ್ ಬಿ ಅಶ್ವಿನ್ 0 (1 ಎ), ಫ್ರಿಲಿಂಕ್ ಔಟಾಗದೆ 15 (15 ಎ), ರೂಬೆನ್ ಔಟಾಗದೆ 13 (6 ಎ, 4x1, 6x1)
ಇತರೆ (ಲೆಗ್‌ಬೈ 8, ನೋಬಾಲ್ 1, ವೈಡ್ 8) 17
ವಿಕೆಟ್ ಪತನ: 1-33 (ಮೈಕೆಲ್ ವ್ಯಾನ್ ಲಿಂಗೆನ್, 4.4), 2-34 (ಕ್ರೇಗ್ ವಿಲಿಯಮ್ಸ್, 5.3), 3-39 (ಸ್ಟೀಫನ್ ಬ್ರಾಡ್, 7.4), 4-47 (ಜಾನ್ ನಿಕೋಲ್ ಲಾಫ್ಟಿ ಈಟನ್, 9.1), 5-72 (ಜೆರಾರ್ಡ್ ಎರಾಸ್ಮಸ್, 12.3), 6-93 (ಜೆಜೆ ಸ್ಮಿತ್, 14.6), 7-94 (ಜೇನ್ ಗ್ರೀನ್, 15.4), 8-117 (ಡೇವಿಡ್ ವೀಸ್, 18.5)
ಬೌಲಿಂಗ್: ಮೊಹಮ್ಮದ್ ಶಮಿ 4-0-39-0, ಜಸ್‌ಪ್ರೀತ್ ಬೂಮ್ರಾ 4-0-19-2, ರವಿಚಂದ್ರನ್ ಅಶ್ವಿನ್ 4-0-20-3, ರವೀಂದ್ರ ಜಡೇಜ 4-0-16-3, ರಾಹುಲ್ ಚಾಹರ್ 4-0-30-0

ಭಾರತ 1ಕ್ಕೆ 136 (15.2 ಓವರ್)
ರಾಹುಲ್ ಔಟಾಗದೆ 54 (36 ಎ, 4x4, 6x2), ರೋಹಿತ್ ಸಿ ಗ್ರೀನ್ ಬಿ ಫ್ರಿಲಿಂಕ್ 56 (37 ಎ, 4x7, 6x2), ಸೂರ್ಯಕುಮಾರ್ ಔಟಾಗದೆ 25 (19 ಎ, 4x4)
ಇತರೆ (ಲೆಗ್‌ಬೈ 1) 1
ವಿಕೆಟ್ ಪತನ: 1-86 (ರೋಹಿತ್ ಶರ್ಮಾ, 9.5)
ಬೌಲಿಂಗ್: ರೂಬೆನ್ ಟ್ರಂಪಲ್‌ಮ್ಯಾನ್ 3-0-26-0, ಡೇವಿಡ್ ವೀಸ್ 2-0-18-0, ಬರ್ನಾರ್ಡ್ ಶಾಲ್ಟ್ಸ್ 1-0-11-0, ಜೆಜೆ ಸ್ಮಿತ್ 2-0-17-0, ಜಾನ್ ಫ್ರೀಲಿಂಕ್ 2-0-19-1, ಜಾನ್ ನಿಕೋಲ್ ಲಾಫ್ಟಿ ಈಟನ್ 4-0-31-0, ಮೈಕೆಲ್ ಜಾನ್ ಲಿಂಗೆನ್ 1.2-0-13-0

ಫಲಿತಾಂಶ: ಭಾರತಕ್ಕೆ 9 ವಿಕೆಟ್‌ಗಳ ಜಯ


ರೋಹಿತ್ ಶರ್ಮಾ– ಎಪಿ ಚಿತ್ರ

ರೋಹಿತ್ ಶರ್ಮಾ ಮುಂದಿನ ನಾಯಕ?


ರೋಹಿತ್ ಶರ್ಮಾ

ದುಬೈ: ಭಾರತ ಟ್ವೆಂಟಿ–20 ಕ್ರಿಕೆಟ್ ತಂಡದ ನಾಯಕತ್ವವನ್ನು ರೋಹಿತ್ ಶರ್ಮಾ ಅವರಿಗೆ ವಹಿಸುವ ಸಾಧ್ಯತೆ ಇದೆ.

ಇದೇ ತಿಂಗಳ 19ರಂದು ಭಾರತದಲ್ಲಿ ನಡೆಯಲಿರುವ ನ್ಯೂಜಿಲೆಂಡ್ ಎದುರಿನ ಟ್ವೆಂಟಿ–20 ಸರಣಿಯಲ್ಲಿ ತಂಡವನ್ನು ರೋಹಿತ್ ಮುನ್ನಡೆಸುವ ಸಾಧ್ಯತೆ ಇದೆ. ಸೋಮವಾರ ನಡೆದ ಪಂದ್ಯದ ಸಂದರ್ಭದಲ್ಲಿ ವಿರಾಟ್ ಕೊಹ್ಲಿ ಅವರು ಈ ಕುರಿತು ಮಾಹಿತಿ ನೀಡಿದ್ದಾರೆ.

'ತಂಡ ಈ ವರೆಗೆ ಮಾಡಿರುವ ಸಾಧನೆಗಳ ಬಗ್ಗೆ ಅಭಿಮಾನವಿದೆ. ಮುಂದಿನ ದಿನಗಳಲ್ಲಿ ರೋಹಿತ್ ಶರ್ಮಾ ಅವರು ತಂಡದ ಆಗುಹೋಗುಗಳನ್ನು ನೋಡಿಕೊಳ್ಳಲಿದ್ದಾರೆ' ಎಂದು ಕೊಹ್ಲಿ ಹೇಳಿದರು. ಟ್ವೆಂಟಿ–20 ತಂಡದ ನಾಯಕತ್ವ ತೊರೆಯುವುದಾಗಿ ವಿಶ್ವಕಪ್ ಆರಂಭಕ್ಕೂ ಮೊದಲು ಕೊಹ್ಲಿ ಘೋಷಿಸಿದ್ದರು.

ಇಂಗ್ಲೆಂಡ್ ತಂಡದಿಂದ ಹೊರಬಿದ್ದ ಜೇಸನ್

ದುಬೈ (ರಾಯಿಟರ್ಸ್): ಆಟಗಾರ ಜೇಸನ್ ರಾಯ್ ಅವರು ಟಿ–20 ವಿಶ್ವಕಪ್‌ನ ಗಾಯಗೊಂಡು ಇಂಗ್ಲೆಂಡ್ ತಂಡದಿಂದ ಹೊರಬಿದ್ದಿದ್ದಾರೆ. ಮೀನಖಂಡದ ಸ್ನಾಯುನೋವಿನಿಂದಾಗಿ ಅವರು ಉಳಿದ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಸೋಮವಾರ ಹೇಳಿಕೆಯಲ್ಲಿ ತಿಳಿಸಿದೆ.

ಅವರ ಸ್ಥಾನಕ್ಕೆ ಬ್ಯಾಟ್ಸ್‌ಮನ್ ಜೇಮ್ಸ್ ವಿನ್ಸ್ ಅವರ ಹೆಸರನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು ಅನುಮೋದಿಸಿದೆ.

ತೋಟಗಾರಿಕೆ ವಿ.ವಿ: ಕ್ರೀಡಾಕೂಟ 11ರಿಂದ

ಬಾಗಲಕೋಟೆ: ಇಲ್ಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಅಂತರ ಮಹಾವಿದ್ಯಾಲಯ ಕ್ರೀಡಾಕೂಟ ನವೆಂಬರ್ 11 ಮತ್ತು 12 ರಂದು ನಡೆಯಲಿದೆ.

ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಬಾಗಲಕೋಟೆ, ಮೈಸೂರು, ಬೆಂಗಳೂರು, ಕೋಲಾರ, ಬೀದರ್, ಕೊಪ್ಪಳ, ಶಿರಸಿ, ಅರಭಾವಿ, ಮತ್ತು ದೇವಿಹೊಸೂರು, ಹಾವೇರಿಯಲ್ಲಿನ ಮಹಾವಿದ್ಯಾಲಯಗಳ ಒಟ್ಟು 350ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

100 ಮೀಟರ್, 200, 400 , 800 ಮೀಟರ್ ಓಟದ ಸ್ಪರ್ಧೆಗಳು, ಉದ್ದ ಜಿಗಿತ, ಎತ್ತರ ಜಿಗಿತ, ಡಿಸ್ಕಸ್, ಜಾವೆಲಿನ್ ಥ್ರೋ, ಟ್ರಿಪಲ್ ಜಂಪ್, 4 x 100 ಮೀಟರ್ ರಿಲೇ ಮತ್ತು 4 x 400 ಮೀಟರ್ ರಿಲೇ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ನ.11 ರಂದು ಬೆಳಿಗ್ಗೆ 10ಕ್ಕೆ ಶಾಸಕ ವೀರಣ್ಣ ಚರಂತಿಮಠ ಕ್ರೀಡಾಕೂಟಕ್ಕೆ ಚಾಲನೆ ನೀಡಲಿದ್ದಾರೆ ಎಂದು ಕ್ರೀಡಾಕೂಟದ ಸಂಘಟನೆಯ ಅಧ್ಯಕ್ಷ ಹಾಗೂ ವಿಶ್ವವಿದ್ಯಾಲಯದ ಡೀನ್ ಡಾ.ಬಾಲಾಜಿ ಕುಲಕರ್ಣಿ ತಿಳಿಸಿದ್ದಾರೆ.


ವಿರಾಟ್ ಕೊಹ್ಲಿ ಮತ್ತು ರವಿಶಾಸ್ತ್ರಿ

ರವಿಶಾಸ್ತ್ರಿ–ಕೊಹ್ಲಿ ಸಾಧನೆಗಳು

ದುಬೈ (ಪಿಟಿಐ): ನಮಿಬಿಯಾ ವಿರುದ್ಧದ ಪಂದ್ಯದಲ್ಲಿ ಭಾರತ ತಂಡವು ಜಯಿಸುವುದರೊಂದಿಗೆ ಈ ಬಾರಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಭಿಯಾನ ಮುಗಿಸಿತು.

ಇದರೊಂದಿಗೆ ಮುಖ್ಯ ಕೋಚ್ ರವಿಶಾಸ್ತ್ರಿಯವರ ಕಾರ್ಯಾವಧಿಯ ಮುಕ್ತಾಯವೂ ಆಯಿತು. ಭಾರತ ಟಿ20 ತಂಡದ ನಾಯಕತ್ವವನ್ನು ವಿರಾಟ್ ಕೊಹ್ಲಿ ಬಿಟ್ಟುಕೊಡಲಿದ್ದಾರೆ. ರವಿ ಮಾರ್ಗದರ್ಶನ ಮತ್ತು ಕೊಹ್ಲಿ ನಾಯಕತ್ವದಲ್ಲಿ ಭಾರತ ತಂಡವು ಹಲವು ಮಹತ್ವದ ಸಾಧನೆಗಳನ್ನು ಮಾಡಿದೆ.

ರವಿಶಾಸ್ತ್ರಿ– ವಿರಾಟ್ ಕೊಹ್ಲಿ ಜೋಡಿಯ ಸಾಧನೆಗಳು:

- 2018–19ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಟೂರ್ನಿಯಲ್ಲಿ ಭಾರತದ ವಿಜಯ. ಆಸ್ಟ್ರೇಲಿಯಾವನ್ನು ಅದರ ತವರಲ್ಲಿಯೇ ಮಣಿಸಿದ ಏಷ್ಯಾದ ಮೊದಲ ತಂಡವೆಂಬ ಹೆಗ್ಗಳಿಕೆ
- 2020–21ರಲ್ಲಿ ಎರಡನೇ ಬಾರಿಗೆ ಆಸ್ಟ್ರೇಲಿಯಾದಲ್ಲಿ ಬಾರ್ಡರ್–ಗಾವಸ್ಕರ್ ಟ್ರೋಫಿ ಜಯಿಸಿದ ಭಾರತ ತಂಡ. ಟೆಸ್ಟ್ ಸರಣಿಯ ಒಂದು ಪಂದ್ಯದಲ್ಲಿ ಮಾತ್ರ ಕೊಹ್ಲಿ ಆಡಿದ್ದರು. ಉಳಿದ ಪಂದ್ಯಗಳಲ್ಲಿ ಅಜಿಂಕ್ಯ ರಹಾನೆ ನಾಯಕತ್ವ ವಹಿಸಿದ್ದರು.
- 2021ರಲ್ಲಿ ಮುಕ್ತಾಯವಾದ ಮೊದಲ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ಸ್ ಅಪ್
- 2019ರಲ್ಲಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶ
- ಇಂಗ್ಲೆಂಡ್ ವಿರುದ್ಧ ಅದರ ತವರಿನಲ್ಲಿಯೇ ನಡೆದ ಟೆಸ್ಟ್ ಸರಣಿಯಲ್ಲಿ 2–1ರಿಂದ ಭಾರತದ ಮುನ್ನಡೆ.
- ಭಾರತ ತಂಡವು ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾದಲ್ಲಿ ಟಿ20 ಸರಣಿಗಳನ್ನು ಗೆದ್ದಿತ್ತು.
- 42 ತಿಂಗಳುಗಳ ಕಾಲ ಐಸಿಸಿ ಟೆಸ್ಟ್ ರ‍್ಯಾಂಕಿಂಗ್ ನಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿತ್ತು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ನೆಟ್ ರನ್‌ರೇಟ್	ಪಾಯಿಂಟ್ಸ್
ಗುಂಪು 1					
ಇಂಗ್ಲೆಂಡ್	5	4	1	+2.464	8
ಆಸ್ಟ್ರೇಲಿಯಾ	5	4	1	+1.216	8
ದಕ್ಷಿಣ ಆಫ್ರಿಕಾ	5	4	1	+0.739	8
ಶ್ರೀಲಂಕಾ	5	2	3	-0.269	4
ವೆಸ್ಟ್ ಇಂಡೀಸ್	5	1	4	-1.641	2
ಬಾಂಗ್ಲಾದೇಶ	5	0	5	-2.383	0
ಗುಂಪು 2					
ಪಾಕಿಸ್ತಾನ	5	5	0	+1.583	10
ನ್ಯೂಜಿಲೆಂಡ್	5	4	1	+1.162	8
ಭಾರತ	5	3	2	+1.747	6
ಅಫ್ಗಾನಿಸ್ತಾನ	5	2	3	+1.053	4
ನಮೀಬಿಯಾ	5	1	4	-1.890	2
ಸ್ಕಾಟ್ಲೆಂಡ್	5	0	5	-3.543	0

* ಸೂಪರ್ 12 ಹಂತದ ಪಂದ್ಯಗಳ ಅಂತ್ಯಕ್ಕೆ

ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿ: ದೇವದತ್ತ ಪಡಿಕ್ಕಲ್ ಅರ್ಧಶತಕ

ಗೌತಮ್ ಕೈಚಳಕ: ಕರ್ನಾಟಕಕ್ಕೆ 4ನೇ ಜಯ

ಗುವಾಹಟಿ: ಮನೀಷ್ ಪಾಂಡೆ ನಾಯಕತ್ವದ ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಸತತ ನಾಲ್ಕನೇ ಜಯ ಸಾಧಿಸಿತು.

ಸೋಮವಾರ ಬರ್ಸಾಪರ ಕ್ರೀಡಾಂಗಣದಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಬರೋಡಾ ಎದುರು 7 ವಿಕೆಟ್‌ಗಳಿಂದ ಜಯಿಸಿದ ತಂಡವು ನಾಕೌಟ್ ಹಂತದ ಹೊಸ್ತಿಲಿಗೆ ಬಂದು ನಿಂತಿದೆ. ನಾಲ್ಕನೇ ಪಂದ್ಯದಲ್ಲಿ ಟಾಸ್ ಗೆದ್ದ ಬರೋಡಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು.

ಆಫ್‌ಸ್ಪಿನ್ನರ್ ಕೃಷ್ಣಪ್ಪ ಗೌತಮ್ (17ಕ್ಕೆ2) ಅವರ ಪರಿಣಾಮಕಾರಿ ದಾಳಿಯಿಂದಾಗಿ ಬರೋಡಾ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 134 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಅದಕ್ಕುತ್ತರವಾಗಿ ಕರ್ನಾಟಕವು 19.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 137 ರನ್ ಗಳಿಸಿ ಗೆದ್ದಿತು. ಪಡಿಕ್ಕಲ್ (56; 47ಎಸೆತ, 5ಬೌಂಡರಿ, 1ಸಿಕ್ಸರ್) ಮತ್ತು ಕರುಣ್ ನಾಯರ್ (ಔಟಾಗದೆ 36; 25ಎಸೆತ, 4ಬೌಂಡರಿ, 1ಸಿಕ್ಸರ್) ಬ್ಯಾಟಿಂಗ್‌ನಿಂದಾಗಿ ತಂಡದ ಗೆಲುವು ಸುಲಭವಾಯಿತು.

ಕೃಣಾಲ್ ಪಾಂಡ್ಯ ನಾಯಕತ್ವದ ಬರೋಡಾ ತಂಡಕ್ಕೆ ಇದು ಮೂರನೇ ಸೋಲು. ಅದರಿಂದಾಗಿ ತಂಡವು ನಾಕೌಟ್ ಪ್ರವೇಶಿಸುವ ಹಾದಿ ಬಹುತೇಕ ಮುಚ್ಚಿದಂತಾಗಿದೆ. ತಂಡದ ಅಗ್ರಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ವಿಫಲರಾಗಿದ್ದರಿಂದ ತಂಡವು ಸಾಧಾರಣ ಮೊತ್ತ ಗಳಿಸಲು ಕಾರಣವಾಯಿತು. ಇನಿಂಗ್ಸ್ ಮೂರನೇ ಓವರ್‌ನಲ್ಲಿಯೇ ಅನುಭವಿ ಬ್ಯಾಟ್ಸ್‌ಮನ್ ಕೇದಾರ್ ದೇವಧರ್ ವಿಕೆಟ್ ಗಳಿಸಿದ ಜೆ ಸುಚಿತ್ ಕರ್ನಾಟಕಕ್ಕೆ ಉತ್ತಮ ಆರಂಭ ಒದಗಿಸಿದರು. ವಿಷ್ಣು ಸೋಳಂಕಿ ಮತ್ತು ಕೃಣಾಲ್ ಪಾಂಡ್ಯ ವಿಕೆಟ್‌ಗಳನ್ನು ಗಳಿಸಿದ ಗೌತಮ್ ತಂಡಕ್ಕೆ ಮುನ್ನಡೆ ಒದಗಿಸಿದರು. ತುಸು ಹೋರಾಟ ಮಾಡಿದ ಧ್ರುವ ಪಟೇಲ್ (23 ರನ್) ವಿಕೆಟ್ ಗಳಿಸಿದ ವೈಶಾಖ ಬರೋಡಾ ತಂಡದ ರನ್ ಗಳಿಕೆಯ ವೇಗಕ್ಕೆ ತಡೆಯೊಡ್ಡಿದರು. ಮಧ್ಯಮ ಕ್ರಮಾಂಕದಲ್ಲಿ ಇನಿಂಗ್ಸ್‌ಗೆ ಬಲ ತುಂಬಲು ಯತ್ನಿಸಿದ ಭಾನು ಪೇನಿಯಾ (36; 38ಎಸೆತ) ಅವರು ರನೌಟ್ ಆಗಲು ವಿಕೆಟ್‌ಕೀಪರ್ ಬಿ.ಆರ್. ಶರತ್ ಕಾರಣದಾದರು.

ಅದಕ್ಕೂ ಮುನ್ನ ಪ್ರಸಿದ್ಧ ಕೃಷ್ಣ ಬೌಲಿಂಗ್‌ನಲ್ಲಿ ಶರತ್ ಪಡೆದ ಕ್ಯಾಚ್‌ಗೆ ಪಾರ್ಥ್ ಕೊಹ್ಲಿ (24 ರನ್) ನಿರ್ಗಮಿಸಿದರು.

ಕರ್ನಾಟಕ ತಂಡಕ್ಕೆ ಮಯಂಕ್ ಅಗರವಾಲ್ (28; 25ಎ) ಮತ್ತು ದೇವದತ್ತ ಪಡಿಕ್ಕಲ್ ಅವರು ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 73 ರನ್ ಗಳಿಸಿದರು. ಇನಿಂಗ್ಸ್‌ನ ಹತ್ತು ಮತ್ತು 12ನೇ ಓವರ್‌ನಲ್ಲಿ ನಿನಾದ್ ರಾತ್ವಾ ಅವರು ಕ್ರಮವಾಗಿ ಮಯಂಕ್ ಮತ್ತು ಪಡಿಕ್ಕಲ್ ವಿಕೆಟ್‌ಗಳನ್ನು ಗಳಿಸಿದರು. ಪಾಂಡೆ (3 ರನ್) ಅವರ ವಿಕೆಟ್ ಅನ್ನು ಮೆರಿವಾಲಾ ಪಡೆದರು.

ಆದರೆ, ಕರುಣ್ ನಾಯರ್ ಮತ್ತು ಅನಿರುದ್ಧ ಜೋಶಿ (ಔಟಾಗದೆ 11) ತಂಡದ ಆತಂಕವನ್ನು ದೂರ ಮಾಡಿ ಗೆಲುವಿನ ಗಡಿ ಮುಟ್ಟಿಸಿದರು.


ದೇವದತ್ತ ಪಡಿಕ್ಕಲ್ ಮತ್ತು ಕೃಷ್ಣಪ್ಪ ಗೌತಮ್

ಸ್ಕೋರ್ ಕಾರ್ಡ್

ಬರೋಡಾ 7ಕ್ಕೆ 134 (20 ಓವರ್)
ಕೇದಾರ್ ಸಿ ವೈಶಾಖ್ ಬಿ ಸುಚಿತ್ 15 (11ಎ, 4X3), ವಿಷ್ಣು ಸಿ ಪಾಂಡೆ ಬಿ ಗೌತಮ್ 17 (24ಎ, 4X1), ಧ್ರುವ ಸಿ ದೇವದತ್ತ ಬಿ ವೈಶಾಖ್ 23 (16ಎ, 4X2, 6X1), ಕೃಣಾಲ್ ಸಿ ಮತ್ತು ಬಿ ಗೌತಮ್ 7 (4ಎ, 4X1), ಭಾನು ರನೌಟ್ (ಶರತ್) 36 (38ಎ, 4X1, 6X2), ಪಾರ್ಥ್ ಸಿ ಶರತ್ ಬಿ ಪ್ರಸಿದ್ಧ 24 (21ಎ, 4X1, 6X1), ಅತೀತ್ ಔಟಾಗದೆ 6 (5ಎ, 4X1), ಕಾರ್ತಿಕ್ ಸಿ ಪಾಂಡೆ ಬಿ ವೈಶಾಖ್ 0 (1ಎ)
ಇತರೆ (ಬೈ 1, ಲೆಗ್‌ಬೈ 2, ವೈಡ್ 3) 6
ವಿಕೆಟ್ ಪತನ: 1-18 (ಕೇದಾರ್ ದೇವಧರ್, 2.4), 2-53 (ಧ್ರುವ್ ಪಟೇಲ್, 7.2), 3-63 (ಕೃಣಾಲ್ ಪಾಂಡ್ಯ, 8.2), 4-68 (ವಿಷ್ಣು ಸೋಲಂಕಿ, 10.3), 5-119 (ಪಾರ್ಥ್ ಕೊಹ್ಲಿ, 18.2), 6-134 (ಭಾನು ಪೂನಿಯಾ, 19.5), 7-134 (ಕಾರ್ತಿಕ್ ಕಾಕಡೆ, 19.6)
ಬೌಲಿಂಗ್: ಪ್ರಸಿದ್ಧ ಕೃಷ್ಣ 4-0-28-1, ವಿಜಯಕುಮಾರ್ ವೈಶಾಖ್ 4-0-34-2, ಜಗದೀಶ್ ಸುಚಿತ್ 4-0-26-1, ಕೆ.ಸಿ.ಕಾರ್ಯಪ್ಪ 4-0-26-0, ಕೃಷ್ಣಪ್ಪ ಗೌತಮ್ 4-0-17-2.

ಕರ್ನಾಟಕ 3ಕ್ಕೆ 137 (19.1 ಓವರ್)
ಮಯಂಕ್ ಬಿ ರಾಥ್ವಾ 28 (25ಎ, 4X4), ದೇವದತ್ತ ಸಿ ಕಾಕಡೆ ಬಿ ರಾಥ್ವಾ 56 (47ಎ, 4X5, 6X1), ಮನೀಷ್ ಬಿ ಮೆರಿವಾಲಾ 3 (10ಎ), ಕರುಣ್ ಔಟಾಗದೆ 36 (25ಎ, 4X4, 6X1), ಅನಿರುದ್ಧ ಔಟಾಗದೆ 11 (8ಎ, 6X1)
ಇತರೆ (ಲೆಗ್‌ಬೈ 1, ವೈಡ್ 2) 3
ವಿಕೆಟ್ ಪತನ: 1-73 (ಮಯಂಕ್ ಅಗರವಾಲ್, 9.2), 2-81 (ಮನೀಷ್ ಪಾಂಡೆ, 11.5), 3-104 (ದೇವದತ್ತ ಪಡಿಕ್ಕಲ್, 15.5).
ಬೌಲಿಂಗ್: ಕೃಣಾಲ್ ಪಾಂಡ್ಯ 3-0-33-0, ಕಾರ್ತಿಕ್ ಕಾಕಡೆ 4-0-29-0, ಲುಕ್ಮಾನ್ ಮೆರಿವಾಲಾ 3.1-0-17-1, ಅತೀತ್ ಶೇಟ್ 3-0-31-0, ನಿನಾದ್ ರಾಥ್ವಾ 4-0-15-2, ಅನ್ಷ್ ಪಟೇಲ್ 2-0-11-0.

ಫಲಿತಾಂಶ: ಕರ್ನಾಟಕ ತಂಡಕ್ಕೆ ಏಳು ವಿಕೆಟ್‌ಗಳ ಜಯ

ಸ್ಮ್ಯಾಷಿಂಗ್ ಸ್ಕ್ವಾಷರ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಸ್ಮ್ಯಾಷಿಂಗ್ ಸ್ಕ್ವಾಷರ್ಸ್ ತಂಡದವರು ಬೆಂಗಳೂರು ಸ್ಕ್ವಾಷ್ ಲೀಗ್ ಟೂರ್ನಿಯಲ್ಲಿ ಜಯ ಗಳಿಸಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಸ್ಮ್ಯಾಷಿಂಗ್ ಸ್ಕ್ವಾಷರ್ಸ್ 4–3ರಿಂದ ಕೋರ್ಟ್ ರೈಡರ್ಸ್ ತಂಡವನ್ನು ಸೋಲಿಸಿತು. ವಿಜೇತ ತಂಡದ ಜೈ ಅಸುಂಡಿ 3-2, 4-11, 10-12, 11-8, 11-9, 13-11ರಿಂದ ವಿವೇಕ್ ಕೇಜ್ರಿವಾಲ್ ಎದುರು, ಸಿದ್ಧಾಂತ್ ಪರನಾಯಿಕ್ 3-2, 2-11, 11-2, 12-10, 9-11, 11-8ರಿಂದ ಭರತ್ ರಾಜ್‌ಪಾಲ್ ವಿರುದ್ಧ, ಸಂತೋಷ್ ಮೋಹನ್ 3-0, 12-10, 11-3, 11-3ರಿಂದ ಮಜರ್ ಅಹಮದ್ ಮೇಲೆ, ವಿನಯ್ ಚಂದ್ರಶೇಖರ್ 3-0, 11-7, 11-8, 11-5ರಿಂದ ಕಮಲೇಶ್ ಪಂಜಾಬಿ ಎದುರು ಜಯ ಗೆಲುವು ಸಾಧಿಸಿದರು.

ಸ್ಮ್ಯಾಷಿಂಗ್ ಸ್ಕ್ವಾಷರ್ಸ್ ತಂಡದ ವಿವೇಕ್ ಶೇಷಾದ್ರಿ 1-3, 4-11, 11-5, 5-11, 11-9ರಿಂದ ರವಿ ಮದಭೂಷಿ ವಿರುದ್ಧ, ಮೋಹನ್ ಅವರು 1-3, 5-11, 7-11, 2-11, 11-2ರಿಂದ ಶ್ರೀಕರ್ ಎದುರು, ನವೀನ್ ಚಾವಾ 2-3, 11-8, 1-11, 12-14, 14-12, 11-9ರಿಂದ ಅಶೋಕ್ ಎದುರು ಸೋಲು ಅನುಭವಿಸಿದರು.

ಇನ್ನೊಂದು ಪಂದ್ಯದಲ್ಲಿ ಬೀಜಿಂಗ್ ಬೈಟ್ಸ್ ತಂಡವು 4–3ರಿಂದ ಪೀಟರ್ಸ್ ಎಂಜೆಲ್ಸ್ ತಂಡದ ವಿರುದ್ಧ ಜಯ ಸಾಧಿಸಿತು.


ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಂದ (ಎಡದಿಂದ) ಬಾಕ್ಸಿಂಗ್ ಪಟು ಮೇರಿ ಕೋಮ್ ಅವರು ಪದ್ಮ ವಿಭೂಷಣ, ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಪದ್ಮಭೂಷಣ ಮತ್ತು ಭಾರತ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್ ಪದ್ಮಶ್ರೀ ಪುರಸ್ಕಾರ ಸ್ವೀಕರಿಸಿದರು– ಪಿಟಿಐ ಚಿತ್ರಗಳು


ಹೆರ್ನಾಂಡೆಜ್‌ಗೆ ಸಂಭ್ರಮದ ಸ್ವಾಗತ

ಮ್ಯಾಡ್ರಿಡ್ (ಎಎಫ್‌ಪಿ): ಬಾರ್ಸಿಲೋನಾ ತಂಡದ ಹೊಸ ಕೋಚ್ ಆಗಿ ನೇಮಕಗೊಂಡಿರುವ ಕ್ಸಾವಿ ಹೆರ್ನಾಂಡೆಜ್ ಅವರನ್ನು ಸೋಮವಾರ ಸಾರ್ವಜನಿಕರಿಗೆ ಪರಿಚಯಿಸಲಾಯಿತು.

ಬಾರ್ಸಿಲೋನಾ ತಂಡವನ್ನು ಪ್ರತಿನಿಧಿಸಿದ್ದ ಮಿಡ್‌ಫೀಲ್ಡರ್ ಕ್ಸಾವಿ ಅವರು ಕೋಚ್ ಆಗಿ ಕ್ಲಬ್‌ಗೆ ಮರಳಿದ್ದರಿಂದ ಪುಳಕಗೊಂಡಿರುವ ಫುಟ್‌ಬಾಲ್ ಪ್ರೇಮಿಗಳು ಪರಿಚಯ ಕಾರ್ಯಕ್ರಮದಲ್ಲಿ ಸಂಭ್ರಮಿಸಿದರು.

ಕ್ಸಾವಿ...ಕ್ಸಾವಿ ಎಂಬ ಘೋಷಣೆಯ ನಡುವೆ ಹೆಜ್ಜೆ ಹಾಕಿದ ಹೆರ್ನಾಂಡಜ್ ಕುಟುಂಬದ ಸದಸ್ಯರು ಮತ್ತು ಬಾರ್ಸಿಲೋನಾ ಅಧ್ಯಕ್ಷ ಜಾನ್ ಲಾಪೋರ್ಟ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು. 10 ಸಾವಿರಕ್ಕೂ ಹೆಚ್ಚಿನ ಜನರು ಇದಕ್ಕೆ ಸಾಕ್ಷಿಯಾದರು.

'ಭಾವುಕತನ ಈಗ ಅಗತ್ಯವಿಲ್ಲ. ಜಗತ್ತಿನ ಅತ್ಯಂತ ಬಲಿಷ್ಠ ತಂಡ ನಮ್ಮದು ಎಂಬುದನ್ನು ಸಾರಿ ಹೇಳಲು ಇಷ್ಟಪಡುತ್ತೇನೆ. ಯಶಸ್ವಿಗಾಗಿ ಛಲದಿಂದ ಕಾದಾಡುವೆವು. ಎಲ್ಲ ಪಂದ್ಯಗಳನ್ನೂ ಗೆಲ್ಲುವುದು ನಮ್ಮ ಪ್ರಥಮ ಆದ್ಯತೆ. ಸೋಲು ಅಥವಾ ಡ್ರಾದಲ್ಲಿ ಪಂದ್ಯಗಳನ್ನು ಮುಗಿಸಲು ಇಷ್ಟಪಡುವುದಿಲ್ಲ' ಎಂದು ಕ್ಸಾವಿ ಹೇಳಿದರು. 41 ವರ್ಷದ ಕ್ಸಾವಿ ಅವರು ಬಾರ್ಸಿಲೋನಾ ಪರ 767 ಪಂದ್ಯಗಳನ್ನು ಆಡಿದ್ದಾರೆ. ಆರು ವರ್ಷಗಳ ಹಿಂದೆ ಅಲ್ ಸಡ್ ತಂಡದ ಪರವಾಗಿ ಆಡಲು ಕತಾರ್‌ಗೆ ತೆರಳಿದ್ದರು.


ಕ್ಸಾವಿ ಹೆರ್ನಾಂಡಜ್ –ರಾಯಿಟರ್ಸ್

'ಸಾಮಾಜಿಕ ತಾಣದಿಂದ ದೂರವಿರಿ'

ನವದೆಹಲಿ: 'ಸ್ವಂತ ಶಕ್ತಿ ಮೇಲೆ ಭರವಸೆ ಇರಿಸಿಕೊಂಡು ಛಲದಿಂದ ಕಾದಾಡಿದರೆ ಯಶಸ್ಸು ಸಿಗುವುದು ಖಚಿತ' ಎಂದು ಹೇಳಿರುವ ಭಾರತ ಬಾಕ್ಸಿಂಗ್ ತಂಡದ ಹೊಸ ಕೋಚ್ ನರೇಂದರ್ ರಾಣಾ ಸಾಮಾಜಿಕ ಮಾಧ್ಯಮಗಳಿಂದ ಆದಷ್ಟು ದೂರ ಇರುವಂತೆ ಬಾಕ್ಸರ್‌ಗಳಿಗೆ ಸಲಹೆ ನೀಡಿದ್ದಾರೆ.

ಕೋಚ್ ಆದ ನಂತರದ ಮೊದಲ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡು ಬೆಲ್‌ಗ್ರೇಡ್‌ನಿಂದ ವಾಪಸಾಗಿರುವ ಅವರು ಸೋಮವಾರ ಮಾತನಾಡಿ ಚಾಂಪಿಯನ್‌ಷಿಪ್ ಸಂದರ್ಭದಲ್ಲಿ ಆಕಾಶ್ ಕುಮಾರ್ ಅವರ ಮೊಬೈಲ್ ಫೋನ್ ತೆಗೆದಿರಿಸಿದ್ದುದಾಗಿ ತಿಳಿಸಿದರು.

ಬೆಲ್‌ಗ್ರೇಡ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಪದಕ ತಂದುಕೊಟ್ಟ ಏಕೈಕ ಬಾಕ್ಸರ್ ಆಕಾಶ್ ಕುಮಾರ್. 54 ಕೆಜಿ ವಿಭಾಗದಲ್ಲಿ ಅವರು ಕಂಚು ಗಳಿಸಿದ್ದರು.

'ಕ್ವಾರ್ಟರ್ ಫೈನಲ್ ಪಂದ್ಯದ ನಂತರ ಆಕಾಶ್ ಕುಮಾರ್ ಅವರ ಮೊಬೈಲ್ ಫೋನ್ ಎತ್ತಿಟ್ಟುಕೊಂಡಿದ್ದೆ. ಅವರಿಗೆ ನಿತ್ಯವೂ ನೂರಾರು ಕರೆಗಳು ಮತ್ತು ಸಂದೇಶಗಳು ಬರುತ್ತಿದ್ದವು. ಅಂಥ ಪರಿಸ್ಥಿತಿಯಲ್ಲಿ ವಿಶ್ರಾಂತಿ ಪಡೆದುಕೊಳ್ಳುವುದಕ್ಕಾದರೂ ಅವಕಾಶ ಎಲ್ಲಿ ಸಿಗಬೇಕು? ಆದ್ದರಿಂದ ನಾನು ಹಾಗೆ ಮಾಡಬೇಕಾಯಿತು' ಎಂದು ಅವರು ಹೇಳಿದರು.